ಮಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 2 | ಜನವರಿ 6-12, 2020, | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com

ದೇಶದ ಮೊದಲ ಶಿಕ್ಷಕಿಯ ಸ್ಮರಣೆ







ಹೋರಾಟದ ಮತ್ತು ನಿರೀಕ್ಷೆಯ ಭಾವದೊಂದಿಗೆ

ಹೊಸ ವರ್ಷ 2020



12ನೇ ರಾಷ್ಟ್ರೀಯ ಜನವಾದಿ ಮಹಿಳಾ ಸಮ್ಮೇಳನ

"ಸಂವಿಧಾನ ರಕ್ಷಿಸೋಣ -
ಮಹಿಳಾ ಹಕ್ಕುಗಳನ್ನು ರಕ್ಷಿಸೋಣ
ಒಟ್ಟಾಗಿ ಹೋರಾಡೋಣ -
ಒಟ್ಟಾಗಿ ಮುನ್ನಡೆಯೋಣ"

ಮಂಗಳೂರು : ಪೋಲೀಸ್ ಅಕ್ರಮ ಗೋಲಿಬಾರ್

ನ್ಯಾಯಾಂಗ ತನಿಖೆಗೆ ಆಗ್ರಹ



ಪೌರತ್ವ ತಿದ್ದುಪಡಿ ಕಾಯ್ದೆಯನ್ನು ರದ್ದು ಮಾಡಲು ಆಗ್ರಹಿಸಿ ಕೇರಳ ವಿಧಾನಸಭೆಯ ನಿರ್ಣಯ



ಕೇರಳ ವಿಧಾನಸಭೆ ಪೌರತ್ವ ತಿದ್ದುಪಡಿ ಕಾಯ್ದೆಯನ್ನು ರದ್ದು ಮಾಡಬೇಕೆಂದು ಆಗ್ರಹಿಸಿ ಒಂದು ನಿರ್ಣಯುವನ್ನು ಅಂಗೀಕರಿಸಿದೆ. ಈ ಮೂಲಕ ಈ ಕಾಯ್ದೆಗೆ ಶಾಸಕಾಂಗದ ವಿರೋಧವನ್ನು ದಾಖಲಿಸಿದ ದೇಶದ ಮೊದಲ ರಾಜ್ಯವಾಗಿದೆ.

ಒಂದು ವಿಶೇಷ ಅಧಿವೇಶನದಲ್ಲಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮಂಡಿಸಿದ ನಿರ್ಣಯವನ್ನು ಪ್ರತಿಪಕ್ಷದ ನಾಯುಕ ರಮೇಶ್ ಚೆನ್ನಿತಾಲ ಅನುಮೋದಿಸಿದರು. ಇದರ ಮೇಲೆ ವಿವರವಾದ ಚರ್ಚೆಯ ನಂತರ ಅದನ್ನು ಅಂಗೀಕರಿಸಲಾಯಿತು. ಬಿಜೆಪಿಯ ಎಕೈಕ ಸದಸ್ಯ ಒ.ರಾಜಗೋಪಾಲನ್ ಅದನ್ನು ವಿರೋಧಿಸಿದ ಏಕೈಕ ಶಾಸಕರು.

ಸಂಸತ್ತಿನ ಎರಡೂ ಸದನಗಳು ಈ ಮಸೂದೆಯನ್ನು ಅಂಗೀಕರಿಸಿದ ನಂತರ ಜನಗಳಲ್ಲಿ ಬಹಳಷ್ಟು ಭಯ ಮತ್ತು ಆತಂಕ ಮೂಡಿದೆ. ಇದು ಭಾರತೀಯ ಸಂವಿಧಾನದ ಮೂಲ ಆಶಯಗಳಿಗೆ, ನೀತಿಗಳಿಗೆ ತದ್ವಿರುದ್ಧವಾಗಿದೆ. ಸಮಾನತೆಯು ಮೂಲಭೂತ ಮೌಲ್ಯಗಳಿಗೆ ಇದು ವಿರುದ್ಧವಾಗಿದೆ. ಭಾರತದ ಸ್ವಾತಂತ್ರ್ಯ ಹೋರಾಟ ಹಲವಾರು ಪ್ರವಾಹಗಳ ಸಂಗಮ. ಸ್ವಾತಂತ್ರ್ಯ ಆಂದೋಲನದಲ್ಲಿ ಬೆಳೆದು ಬಂದ ಆಧುನಿಕ ಪ್ರಜಾಪ್ರಭುತ್ವ ಮೌಲ್ಯಗಳು ಮತ್ತು ಜಾತ್ಯಾತೀತ ಕಣ್ಣೋಟದೊಂದಿಗೆ ಭಾರತೀಯ ಸಂವಿಧಾನ ಮೂಡಿ ಬಂದಿದೆ ಎಂದು ಈ ನಿರ್ಣಯ ನೆನಪಿಸಿದೆ.

ಚರ್ಚೆಗೆ ಉತ್ತರಿಸುತ್ತ ಪಿಣರಾಯಿ ವಿಜಯನ್ ಭಾರತದ ಜನಗಳ ಆತಂಕಗಳನ್ನು ಪರಿಗಣಿಸಿ ಕೇಂದ್ರ ಸರಕಾರ ಈ ತಿದ್ದುಪಡಿಯನ್ನು ಒಂದು ಸುಗ್ರೀವಾಜ್ಞೆಯ ಮೂಲಕ ರದ್ದು ಮಾಡಬೇಕು ಎಂದು ಸೂಚಿಸಿದರು. ಕೇರಳದಲ್ಲಿ ಯಾವುದೇ ಸ್ಥಾನಬದ್ಧತಾ ಕೇಂದ್ರ ಇರುವುದಿಲ್ಲ ಎಂದೂ ಅವರು ಹೇಳಿದರು.

ಆರೆಸ್ಸೆಸ್ ಹಿಟ್ಲರನ ಸಿದ್ಧಾಂತವನ್ನು ಅಪ್ಪಿಕೊಂಡಿದೆ, ಅದರ ಸಂಘಟನಾ ರಚನೆ ಯುರೋಪಿನ ಇನ್ನೊಬ್ಬ ಸರ್ವಾಧಿಕಾರಿ ಮುಸೊಲಿನಿಯದ್ದನ್ನು ಹೋಲುತ್ತದೆ. ದೇಶದ ಒಂದು ಪ್ರಮುಖ ಭಾಗವಾದ ಮುಸ್ಲಿಮರನ್ನು ಆಂತರಿಕ ಬೆದರಿಕೆ ಎಂದು ಕಾಣುವ ಆರೆಸ್ಸೆಸ್‌ನ ಅಜೆಂಡಾವನ್ನು ಜಾರಿಗೊಳಿಸಲು ಬಿಜೆಪಿ ಪ್ರಯತ್ನಿಸುತ್ತಿದೆ. ಪೌರತ್ವ ಪ್ರಶ್ನೆಯಲ್ಲಿ ಇದು ಹಾಸುಹೊಕ್ಕಾಗಿದೆ. ಇದಕ್ಕೆ ಮೊದಲು ತ್ರಿವಳಿ ತಲಾಖ್ ಮತ್ತು ಕಲಮು 370ರ ರದ್ಧತಿಯಲ್ಲೂ ಇದೇ ಅಜೆಂಡಾ ಕಂಡು ಬಂದಿದೆ ಎಂದು ಪಿಣರಾಯಿ ವಿಜಯನ್ ಹೇಳಿದರು.

ಕೇರಳ ಎನ್‌ಪಿಆರ್‌ನ ಪ್ರಕ್ರಿಯೆಯನ್ನು ನಿಲ್ಲಿಸಿದ ಮೊದಲ ರಾಜ್ಯ ಕೂಡ ಆಗಿದೆ. ನಂತರ 'ಪಶ್ಚಿಮ ಬಂಗಾಲವೂ ಅದನ್ನು ನಿಲ್ಲಿಸಿದೆ.

ಕೇರಳ ವಿಧಾನಸಭೆ ಈ ನಿರ್ಣಯವನ್ನು ಅಂಗೀಕರಿಸಿ ದೇಶಕ್ಕೆ ದಾರಿ ತೋರಿಸಿ ಕೊಟ್ಟಿದೆ, ಕೇರಳದ ಜನತೆಗೆ ಮತ್ತು ಅವರ ಚುನಾಯಿತ ಪ್ರತಿನಿಧಿಗಳಿಗೆ ಅಭಿನಂದನೆಗಳು ಎಂದ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಬಿಜೆಪಿಯ ದುಷ್ಟ ತಂತ್ರಗಳು ಯಶಸ್ವಿಯಾಗಲು ಬಿಡುವುದಿಲ್ಲ ಎಂದು ಹೇಳಿದ್ದಾರೆ.

ಡಿಎಂಕೆ ಅಧ್ಯಕ್ಷ ಎಂ ಕೆ ಸ್ಟಾಲಿನ್ ಕೂಡ ಕೇರಳ ವಿಧಾನಸಭೆಯ ನಿರ್ಣಯುವನ್ನು ಸ್ವಾಗತಿಸುತ್ತ ತಮಿಳುನಾಡೂ ಸೇರಿದಂತೆ ಇತರ ರಾಜ್ಯ ವಿಧಾನಸಭೆಗಳೂ ಈ ದಾರಿಯನ್ನು ಅನುಸರಿಸಬೇಕು ಎಂದಿದ್ದಾರೆ.

ನಿರೀಕ್ಷಿಸಿದಂತೆ, ಈ ಅಭೂತಪೂರ್ವ ಕ್ರಮದಿಂದ ಗಲಿಬಿಲಿಗೊಂಡಿರುವ ಕೇಂದ್ರ ಸರಕಾರದ ಕಾನೂನು ಮಂತ್ರಿಗಳು "ಪೌರತ್ವ ಕುರಿತಂತೆ ಯಾವುದೇ ಕಾನೂನು ಪಾಸು ಮಾಡಲು ಕೇವಲ ಸಂಸತ್ತಿಗೆ ಮಾತ್ರ ಅಧಿಕಾರ ಇರುವುದು, ಕೇರಳವೂ ಸೇರಿದಂತೆ ಯಾವುದೇ ರಾಜ್ಯದ ವಿಧಾನಸಭೆಗೆ ಈ ಅಧಿಕಾರವಿಲ್ಲ" ಎಂದಿದ್ದಾರೆ.

ಬಿಜೆಪಿಯ ಒಬ್ಬ ರಾಜ್ಯಸಭಾ ಸದಸ್ಯ ಜಿ.ವಿ.ಎಲ್. ನರಸಿಂಹ ರಾವ್ ಕೇರಳ ಮುಖ್ಯಮಂತ್ರಿಗಳ ವಿರುದ್ಧ ಹಕ್ಕುಚ್ಯುತಿ ಮತ್ತು ಸದನ ನಿಂದನೆಯ ಒಂದು ಅರ್ಜಿಯನ್ನು ರಾಜ್ಯ ಸಭಾ ಅಧ್ಯಕ್ಷರಿಗೆ ಸಲ್ಲಿಸಿರುವುದಾಗಿ ವರದಿಯಾಗಿದೆ.

ಇದಕ್ಕೆ ಪ್ರತಿಕ್ರಿಯಿಸುತ್ತ ಪಿಣರಾಯಿ ವಿಜಯನ್ ವಿಧಾನಸಭೆಗೂ ತನ್ನದೇ ಹಕ್ಕುಗಳು, ವಿಶೇಷ ರಕ್ಷಣೆಗಳಿವೆ, ಅವನ್ನು ಉಲ್ಲಂಘಿಸಲು ಸಾಧ್ಯವಿಲ್ಲ ಎಂದು ಅವರು ನೀಡಿದ್ದಾರೆ. ಆದರೂ ಈಗ ದೇಶದಲ್ಲಿ ಉಂಟಾಗಿರುವ ಪರಿಸ್ಥಿತಿಯನ್ನು ನೋಡಿದರೆ ಏನು ಬೇಕಾದರೂ ಆಗಬಹುದು ಎಂದೂ ಅವರು ಟಿಪ್ಪಣಿ ಮಾಡಿದ್ದಾರೆ.

ಪ್ರಧಾನಿಗಳ ಗಹನವಾದ ಪ್ರಶ್ನೆಗೆ ಟ್ವಿಟರಿಗರ ಗಹನವಾದ ಉತ್ತರಗಳು

ತುಮಕೂರಿನಲ್ಲಿ ಪ್ರಧಾನ ಮಂತ್ರಿಗಳು ಸಿಎಎ-ವಿರೋಧಿ ಪ್ರತಿಭಟನಾಕಾರರ ಬಗ್ಗೆ ಒಂದು 'ಗಹನ'ವಾದ ಪ್ರಶ್ನೆ ಕೇಳಿದರು-"ಅವರು ಈ ಹಿಂದೆ ಪಾಕಿಸ್ತಾನ ಮಾಡಿದ ಅತ್ಯಾಚಾರಗಳ ಬಗ್ಗೆ ದನಿಯೆತ್ತಬೇಕು, ಅವರೇಕೆ ಪಾಕಿಸ್ತಾನದ ವಿರುದ್ಧ ಪ್ರತಿಭಟಿಸುವುದಿಲ್ಲ?" ಆದರೆ ದುರದೃಷ್ಟವಶಾತ್ ಯಾರೂ ಈ ಪ್ರಶ್ನೆಯನ್ನು ಅಷ್ಟು ಗಹನವಾಗಿ ತಗೊಂಡಂತೆ ಕಾಣುತ್ತಿಲ್ಲ.

ಏಕೆಂದರೆ 'ನಾವು ಭಾರತದ ನಾಗರಿಕರು" ಎಂಬ ಸರಳ ಉತ್ತರವನ್ನು ಸಾಮಾಜಿಕ ಮಾಧ್ಯಮದಲ್ಲಿ ಒಬ್ಬರು ನೀಡಿದ್ದಾರೆ. ಆದರೆ ಉಳಿದವರು ಇಷ್ಟಕ್ಕೇ ನಿಂತಿಲ್ಲ. ದೇಶದ ಪ್ರಧಾನ ಮಂತ್ರಿಗಳಿಂದ ಇಂತಹ ಪ್ರಶ್ನೆಯೇ ಎಂದು ಒಬ್ಬರು ಮೂಕವಿಸ್ಮಿತರಾದರೆ, ಇನ್ನೊಬ್ಬರು ಅವರ ಐಟಿ ಸೆಲ್‌ನವರು ಎಂತಹ ಪ್ರಶ್ನೆ ಬರೆದು ಕೊಡುತ್ತಿದ್ದಾರೆ ಎಂದು ಆಶ್ಚರ್ಯ ಪಟ್ಟಿದ್ದಾರೆ. ಇನ್ನೂ ಕೆಲವು ಟ್ವೀಟ್‌ಗಳನ್ನು ನೋಡಿ:

□ 2020 ಇಂತಹ 'ಅವರೇನು ಮಾಡಿದರು-ಇವರೇನು ಮಾಡಿದರು ಎಂಬ ಪ್ರಶ್ನೆಗಳಿಗೇ ನೇತು ಹಾಕಿಕೊಳ್ಳುವ ವರ್ಷವಾಗಲಿದೆಯೇ?

□ ಏಕೆ ಪಾಕಿಸ್ತಾನವನ್ನು ಮಾತ್ರ ಕೇಳಬೇಕು, ಶ್ರೀಲಂಕಾ ಮತ್ತು ಬಾಂಗ್ಲಾದೇಶವನ್ನೂ ಕೇಳಬೇಡವೇ-ಸಿಎಎಯಲ್ಲಿ ಆ ಎರಡು ದೇಶಗಳ ಹೆಸರುಗಳೂ ಇವೆಯಲ್ಲ?

□ ಬಹುಶಃ ಮೋದಿಯವರು ಪಾಕಿಸ್ತಾನದಲ್ಲಿ ಚುನಾವಣೆಗೆ ನಿಲ್ಲಲಿದ್ದಾರೆ!

□ 2014ರಿಂದ ಇದೇ ಡೈಲಾಗ್ – ಪಾಕ್, ಪಾಕ್, ಪಾಕ್ ಮತ್ತು ಪಾಕ್

□ ಸರಿ, -ಎನ್‌ಆರ್‌ಸಿ ಬಗ್ಗೆ ಚರ್ಚಿಸಿಲ್ಲ ಎಂದು ಭಾರತದ ನಾಗರಿಕರಿಗೆ ಸುಳ್ಳು ಹೇಳಿದ್ದಕ್ಕಾಗಿ ಪಾಕಿಸ್ತಾನದ ಪ್ರಧಾನ ಮಂತ್ರಿಗಳು ರಾಜೀನಾಮೆ ನೀಡಬೇಕು!

-ಭಾರತೀಯ ಅಲ್ಪಸಂಖ್ಯಾತರಿಗೆ ಮೊದಲು ಸಿಎಎ, ನಂತರ ಎನ್‌ಪಿಆರ್, ನಂತರ ಎನ್‌ಆರ್‌ಸಿ ಎಂದು ಬೆದರಿಸಿದ್ದಕ್ಕಾಗಿ ಪಾಕಿಸ್ತಾನದ ಗೃಹಮಂತ್ರಿಗಳು ರಾಜೀನಾಮೆ ನೀಡಬೇಕು!

-ಪಾಕಿಸ್ತಾನ ಪೋಲಿಸರು ಭಾರತೀಯ ವಿಶ್ವವಿದ್ಯಾಲಯಗಳಿಗೆ ನುಗ್ಗಿ ವಿದ್ಯಾರ್ಥಿಗಳನ್ನು ಸದೆಬಡಿಯುವದನ್ನು ನಿಲ್ಲಿಸಬೇಕು!

ಇಷ್ಟು ಸಾಕೇ?

□ 2020ರಲ್ಲಿ ಬರಲಿದೆ "ಸತ್ಯದ ವಿಚಲನೆಯಲ್ಲಿ ನನ್ನ ಅನ್ವೇಷಣೆ: ಭಾರತದ ಪ್ರಧಾನ ಮಂತ್ರಿ' ಎಂಬ ಕೃತಿ

ಒಬ್ಬರಂತೂ ಪಾಕಿಸ್ತಾನ, ಕಾಂಗ್ರೆಸ್, ಹಿಂದು, ಮುಸ್ಲಿಮ, ಮಂದಿರ, ಮಸೀದಿ ಪದಗಳನ್ನು ತೆಗೆದರೆ ಅವರ ಭಾಷಣಗಳಲ್ಲಿ



ಉಳಿಯುವುದಾದರೂ ಏನು ಎಂದು ಕೇಳಿದರೆ, ಇನ್ನೊಬ್ಬರು ಉದ್ಯೋಗ, ಬೆಲೆಯೇರಿಕೆ, ರೈತರು, ಕಾರ್ಮಿಕರ ಬಗ್ಗೆಯೂ ಮಾತಾಡಿ ಸ್ವಾಮಿ ಎಂದಿದ್ದಾರೆ.

ಕರ್ನಾಟಕದವರೊಬ್ಬರು, ಪಾಕಿಸ್ತಾನ, ಸಿಎಎ, ಎನ್‌ಆರ್‌ಸಿ ಒತ್ತಟ್ಟಿಗಿರಲಿ,

-ಕರ್ನಾಟಕಕ್ಕೆ ನೆರೆ ಪರಿಹಾರ ಬೇಕು,


-ಉಪನಗರ ರೈಲು ಬೇಕು,

-ಜಿಎಸ್‌ಟಿಯಲ್ಲಿ ನಮ್ಮ ಪಾಲು ಬೇಕು,

-ಮನರೇಗದ ಬಾಕಿ 2784ಕೋಟಿ ರೂ. ಬೇಕು ಈ ಬಗ್ಗೆ ಮಾತಾಡಿ ಎಂದಿದ್ದಾರೆ

ರಾಜ್ಯದ ಮುಖ್ಯಮಂತ್ರಿಗಳು ಬಹಿರಂಗವಾಗಿಯೇ ಪ್ರಧಾನ ಮಂತ್ರಿಗಳನ್ನು ನೆರೆಪರಿಹಾರದ ಬಗ್ಗೆ ಕೇಳಿದರೂ 'ಮೋದಿ ಮೌನ' ಎಂದು ಪತ್ರಿಕೆಯಲ್ಲಿ ಮೊದಲ ಪುಟದಲ್ಲಿ ಪ್ರಕಟವಾಗಿದೆ.

ಪಾಕಿಸ್ತಾನದ 'ಪ್ರಧಾನ ಮಂತ್ರಿಗಳನ್ನು ಕೇಳಿ ಎಂದೇನೂ ಹೇಳಿಲ್ಲ ಎಂದೊಬ್ಬ ವಿಶ್ಲೇಷಕರು ಸಮಜಾಯಿಷಿ ಕೊಟ್ಟಿದ್ದಾರೆ



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ವಾರ್ತಾಭಾರತಿ

ಮಂಗಳೂರು: ಪೊಲೀಸ್ ಅಕ್ರಮ, ಗೋಲಿಬಾರ್ – ನ್ಯಾಯಾಂಗ ತನಿಖೆಗೆ ಆಗ್ರಹ

ವರದಿ: **ವಾ.ಉ.**

ಪೌರತ್ವ ತಿದ್ದುಪಡಿ ಕಾಯಿದೆ (ಸಿಎಎ) ಮತ್ತು ರಾಷ್ಟ್ರೀಯ ಪೌರತ್ವ ದಾಖಲೆ (ಎನ್‌ಆರ್‌ಸಿ) ವಿರುದ್ಧವಾಗಿ ಎಡಪಕ್ಷಗಳು ಡಿಸೆಂಬರ 19 ರಂದು ರಾಷ್ಟ್ರದಾದ್ಯಂತ ಪ್ರತಿಭಟನೆ ಹಮ್ಮಿಕೊಂಡಿದ್ದು ಎಲ್ಲರಿಗೂ ತಿಳಿದ ವಿಚಾರ. ಕರ್ನಾಟಕ ರಾಜ್ಯ ಹಿಂದಿನ ದಿನ ಸಾಯಂಕಾಲವೇ ರಾಜ್ಯ ಸರಕಾರವು ಐಪಿಸಿ 144ನೇ ಸೆಕ್ಷನ್ ಜಾರಿ ಮಾಡಿತು. ದಕ್ಷಿಣ ಕನ್ನಡ ಜಿಲ್ಲೆ ಹೊರತುಪಡಿಸಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಎಡಪಕ್ಷಗಳು ಮಾತ್ರವಲ್ಲದೆ ಇತರ ಪಕ್ಷ ಸಂಘಟನೆಗಳು ದೊಡ್ಡ ಪ್ರಮಾಣದಲ್ಲಿ ಡಿಸೆಂಬರ 19 ರಂದು ಪ್ರತಿಭಟನೆ ಮಾಡಿದ್ದು ಮಾಧ್ಯಮಗಳಲ್ಲಿ ವರದಿಯಾಗಿದೆ. ಆದರೆ ಅಲ್ಲಲ್ಲಿ ಪ್ರತಿಭಟನಾಕಾರರನ್ನು ಬಂಧಿಸಿದ್ದು ಹೊರತುಪಡಿಸಿ, ಪೊಲೀಸರು ಅಷ್ಟಾಗಿ ದಮನ ನಡೆಸಿದಂತೆ ಕಂಡು ಬರುವುದಿಲ್ಲ.

ಮಂಗಳೂರು ಪೊಲೀಸ್ ಕಮೀಷನರ್ ಮೀನಾಮೇಷ ಮಾಡಿ ಮುಂಚಿತವಾಗಿ ಅನುಮತಿಯನ್ನೇನೋ ಕೊಟ್ಟಿತ್ತು. ಆದರೆ ಸೆಕ್ಷನ್ 144ರ ನಿಷೇಧಾಜ್ಞೆ ಘೋಷಣೆಯಾದ ಕೂಡಲೇ, ಎಡಪಕ್ಷಗಳ ಜಿಲ್ಲಾ ಮುಖಂಡರಿಗೆ ಪ್ರತಿಭಟನೆಯನ್ನು ಹಿಂತೆಗೆಯಲು ಹೇಳಿತು. ಪ್ರತಿಭಟನೆಯನ್ನು ಸುತರಾಂ ಮಾಡಲಾಗುವುದಿಲ್ಲವೆಂಬ ಸಂದೇಶ ಬಂದ ಮೇರೆಗೆ ಎಡಪಕ್ಷಗಳು ಡಿಸೆಂಬರ 19 ರಂದು ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಹಮ್ಮಿಕೊಂಡಿದ್ದ ಪ್ರತಿಭಟನೆಯನ್ನು ಹಿಂದೆಗೆದುಕೊಂಡಿತು. ಮುಸ್ಲಿಂ ಸಂಘಟನೆಯೊಂದಕ್ಕೆ ನೀಡಿದ್ದ ಅನುಮತಿಯನ್ನೂ ಹಿಂದೆಗೆದುದು ತಿಳಿದುಬರುತ್ತದೆ.

ಮಂಗಳೂರಿನಲ್ಲಿ ಪೊಲೀಸ್ ಗೋಲಿಬಾರು:

ಪ್ರತಿಭಟನೆಗಳಿಗೆ ನಿಷೇಧಾಜ್ಞೆ ಇದ್ದುದರಿಂದ ಪ್ರತಿಭಟನೆ ಇಟ್ಟುಕೊಂಡಿದ್ದ ಸಂಘಟನೆ ಸದಸ್ಯರು ವ್ಯವಸ್ಥಿತವಾಗಿ ಪ್ರತಿಭಟನೆ ಮಾಡುವಂತಿರಲಿಲ್ಲ. ಡಿಸೆಂಬರ 19ರ ಅಪರಾಹ್ನ 2.30 ಗಂಟೆಯ ಸುಮಾರಿಗೆ 50 ರಿಂದ 100 ಮಂದಿ ಮುಸ್ಲಿಂ ಯುವಕರು ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಗೇಟಿನ ಬಳಿ ಸೇರುವ 3 ರಸ್ತೆಗಳಲ್ಲಿ ಅಲ್ಲಲ್ಲಿ ಚೆದರಿ ಕೊಂಡಂತೆ ನಿಂತುಕೊಂಡಿದ್ದರು. ಅವರು ಸಮೀಪ ಬಂದು ಘೋಷಣೆಗಳನ್ನು ಕೂಗುತ್ತಿದ್ದುದು ಪ್ರಥಮವಾಗಿ ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರಗೊಂಡ ವಿಡಿಯೋದಲ್ಲಿ ಇದ್ದಿತ್ತು. ಅದನ್ನು ಮೀರಿದ ಘೋಷಣೆಗಳು ಪ್ರತಿಭಟನೆಗಳು ಆ ದಿನ ಬೆಳಿಗ್ಗೆ ಬೆಂಗಳೂರು, ಕಲಬುರ್ಗಿ ನಗರಗಳಲ್ಲಿ ಕೆಲವು ನಡೆದಿದ್ದು, ಅವು ದೃಶ್ಯ ಮಾಧ್ಯಮಗಳಲ್ಲಿ ಆದಾಗಲೇ ಪ್ರಸಾರವಾಗಿತ್ತು. ಅವಕ್ಕೆ ಹೋಲಿಸಿದರೆ ಮಂಗಳೂರಿನ 50–100 ಯುವಕರ ಘೋಷಣೆಗಳು ಏನೇನೂ ಅಲ್ಲ. ಆದರೆ ಮತ್ತೆ ನಡೆದುದು ಪೊಲೀಸರ ರಾಕ್ಷಸ ದಾಳಿ. ನಿಧಾನವಾಗಿ ಓಲೈಸಿ ಚದುರಿಸಬಹುದಾದ ಗುಂಪಿನ ಮೇಲೆ ಪೊಲೀಸರು ಹಿಂಸಾತ್ಮಕವಾಗಿ ಲಾಠಿ ಬೀಸಿ ಅಟ್ಟಿಸಿಕೊಂಡು ಹೋದರು. ಅಷ್ಟು ಹೊತ್ತಿಗೆ ಆ ಗುಂಪು ಪ್ರಚೋದಿತವಾಗಿ ಕಲ್ಲುಗಳನ್ನು ಎತ್ತಿ ಪೊಲೀಸರತ್ತ ಒಗೆಯಿತು. ಆ ವೇಳೆಗೆ ಗುಂಪು 100 ರಿಂದ 200ರ ವರೆಗಿರಬಹುದು. ಪೊಲೀಸರು ಪ್ರತಿಭಟನಾಕಾರರನ್ನು ಅಟ್ಟಾಡಿಸಿಕೊಂಡು ಹೋಗಿ ಇನ್ನಷ್ಟು ಹಿಂಸಾತ್ಮಕವಾಗಿ ಲಾಠೀ ಪ್ರಹಾರ ನಡೆಸಿದರು. ಆಶ್ರುವಾಯು ಪ್ರಯೋಗಿಸಿದರು. ಗೋಲಿಬಾರು ನಡೆಸಿದರು. ಗುಂಡೇಟು ತಗಲಿ 2 ಮಂದಿ ಅಯಾಯಕರು ಸತ್ತುಹೋದರು. ಹತ್ತಾರು ಮಂದಿಗೆ ತೀವ್ರವಾದ ಗುಂಡೇಟಿನ ಗಾಯಗಳೂ ಲಾಠಿ ಹೊಡೆತದ ಗಾಯಗಳೂ ಆಗಿ ಆಸ್ಪತ್ರೆಗೆ ದಾಖಲಾದರು.



ದಾಳಿಗಳು ವಿಡಿಯೋಗಳಲ್ಲಿ ಚಿತ್ರಿಸಲ್ಪಟ್ಟಿವೆ:

ಜನಸಾಮಾನ್ಯರ ಮೊಬೈಲುಗಳಲ್ಲಿ ಹರಿದುಬಂದ ನೂರಾರು ವಿಡಿಯೋ ಚಿತ್ರಗಳಲ್ಲಿ ಪೊಲೀಸರು ರಸ್ತೆಗಳಲ್ಲಿ ಜನರನ್ನು ಅಟ್ಟಿಸಿಕೊಂಡು ಹೋಗುತ್ತಿರುವುದು, ಲಾಠಿಯಲ್ಲಿ ಹೊಡೆಯುತ್ತಿರುವುದು, ಪೊಲೀಸ್ ಸಿಬ್ಬಂದಿ ಗುಂಡು ಹಾರಿಸುತ್ತಿರುವುದು ಅದರ ಬೆನ್ನಿಗೇ ವ್ಯಕ್ತಿ ಗುಂಡೇಟು ತಗಲಿ ಬಿದ್ದಿರುವುದು ಹಾಗೂ ಪೊಲೀಸರು ಬಿದ್ದ ವ್ಯಕ್ತಿಯನ್ನು ಸ್ಟ್ರೆಚರಲ್ಲಿ ಎತ್ತಿಕೊಂಡು ಓಡುತ್ತಿರುವುದು– ಎಲ್ಲವೂ ದಾಖಲಾಗಿವೆ. ಸೇರಿರುವ ಜನ 150–200 ಕ್ಕಿಂತ ಹೆಚ್ಚಿರಲಾರದೆಂದು ವಿಡಿಯೋ ತೋರಿಸುತ್ತಿದೆ. ಆಸ್ಪತ್ರೆಯೊಂದರ ಆವರಣದಲ್ಲಿ ಪೊಲೀಸರು ಜನರನ್ನು ಅಟ್ಟುತ್ತಿರುವುದು, ಆಸ್ಪತ್ರೆಯೊಂದರ ಒಳಭಾಗದಲ್ಲಿ ಕೊಠಡಿ ಬಾಗಿಲುಗಳನ್ನು ಒದ್ದು ಒಡೆಯಲು ಯತ್ನಿಸುತ್ತಿರುವುದು ದಾಖಲಾಗಿದೆ. ಮಂಗಳೂರಿನ ಬಂದರು ಪ್ರದೇಶದ ಜನ ಅವತ್ತು ಹಲವು ಬಾರಿ ಅಶ್ರುವಾಯು ಸ್ಫೋಟದ ಶಬ್ದವನ್ನು, ಗುಂಡು ಹಾರಿಸದ ಶಬ್ದವನ್ನು ಆಲಿಸಿದ್ದಾರೆ. ಆನಂತರ ಸಾಯಂಕಾಲ ಮಂಗಳೂರಿನಲ್ಲಿ ವಾಹನ ಸಂಚಾರ ಸಂಪೂರ್ಣ ಸ್ಥಗಿತವಾಗಿದ್ದು, ನಗರದಲ್ಲಿ ಪೊಲೀಸರೇ ಕಾಣಿಸಿಕೊಂಡಿದ್ದರು.

ಪೊಲೀಸರು ಹಾಗೂ ಅಧಿಕಾರಿಗಳ ನಿರೂಪಣೆಗಳು:

ಜಿಲ್ಲಾಧಿಕಾರಿಗಳ ಕಚೇರಿ ಸಮೀಪ ಸಾವಿರ ಸಮೀಪ ಪ್ರತಿಭಟನಾಕಾರರು ಸೇರಿದ್ದರು. ಕಲ್ಲೆಸೆತ ನಡೆಸಿದರು. ಹಾಗಾಗಿ ತಾವು ಅವರನ್ನು ಅಟ್ಟಿಸಿಕೊಂಡು ಹೋದೆವು. ಕಲ್ಲು ತೂರಾಟ ನಿಲ್ಲದಿದ್ದಾಗ ಆಶ್ರುವಾಯು ಸಿಡಿಸಿದೆವು. ಬಳಿಕ ಗೋಲಿಬಾರು ನಡೆಸಬೇಕಾಯ್ತು. 6000–7000 ಜನ ಸಮೀಪ ಸುತ್ತಲಿನ ಪ್ರದೇಶಗಳಿಂದ ಬಂದು ಪೊಲೀಸು ಠಾಣೆಯನ್ನು ಮುತ್ತಲು ಪ್ರಯತ್ನಿಸಿದರು. ಅವರ ಕೈಯಲ್ಲೂ ಶಸ್ತ್ರಾಸ್ತ್ರಗಳಿದ್ದುವು. ಪೊಲೀಸ್ ಠಾಣೆಯ ಶಸ್ತ್ರಾಸ್ತ್ರಗಳನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದರು. ಆಗ ತಾವು ಆಶ್ರುವಾಯು, ಗೋಲಿಬಾರು ಮಾಡಬೇಕಾಯ್ತು ಎಂಬ ವಿವರಣೆ ನೀಡಿರುತ್ತಾರೆ. ಕರ್ಫ್ಯೂ ಹೊರಿಸಬೇಕಾಯ್ತು ಎಂದಿದ್ದಾರೆ. ಅಲ್ಲದೆ ಕೇರಳ ರಾಜ್ಯದಿಂದ ಬಂದವರು ವ್ಯವಸ್ಥಿತವಾಗಿ ಗಲಭೆ ಎಬ್ಬಿಸಿದ್ದಾರೆ ಎಂದು ತಿಳಿಸಿದ್ದಾರೆ.

ಗೋಲಿಬಾರು ವಿರೋಧಿಸಿ ದಿಢೀರನೆ ಎದ್ದ ಪ್ರತಿಭಟನೆಗಳು:

3 ದಿನಗಳ ಕರ್ಫ್ಯೂ ಬಳಿಕ ನಿಷೇಧಾಜ್ಞೆ ಸೆಕ್ಷನ್ 144 ಇನ್ನೂ ಜಾರಿಯಲ್ಲಿತ್ತು. ಮಂಗಳೂರು ಕಮಿಷನರೇಟ್ ವ್ಯಾಪ್ತಿಯಲ್ಲಿ ಪ್ರತಿಭಟನೆ ನಡೆಸುವಂತಿರಲಿಲ್ಲ. ಆದಾಗ್ಯೂ ಗೋಲಿಬಾರು ಆದ ಮಾರನೇ ದಿನ ಡಿಸೆಂಬರ 20 ರಂದು ಶುಕ್ರವಾರದ ಪ್ರಾರ್ಥನೆ ಬಳಿಕ, ಮಸೀದಿ ಆವರಣದೊಳಗೆ ಮಂಗಳೂರು ಹಾಗೂ ಜಿಲ್ಲೆಯ ಹಲವು ಮಸೀದಿಗಳಲ್ಲಿ ಪ್ಲೇ ಕಾರ್ಡ್ ಹಿಡಿದು ಮೌನ ಪ್ರತಿಭಟನೆಯನ್ನು ದೊಡ್ಡ ಸಂಖ್ಯೆಯಲ್ಲಿ ಮುಸ್ಲಿಮರು ನಡೆಸಿದ್ದಾರೆ. ಡಿಸೆಂಬರ 27ರ ಶುಕ್ರವಾರದಂದು (ಆ ವೇಳೆಗೆ ನಿಷೇಧಾಜ್ಞೆ ಹಿಂತೆಗೆಯಲಾಗಿತ್ತು) ಜಿಲ್ಲೆಯ ಹಲವೆಡೆ ಮಸೀದಿ ಆವರಣದಲ್ಲಿ ಮೌನ ಪ್ರತಿಭಟನೆ ನಡೆದಿದೆ. ಜಿಲ್ಲೆಯ ಹಲವು ಮುಖ್ಯ ಪಟ್ಟಣಗಳಲ್ಲಿ ಮುಸ್ಲಿಂ ಒಕ್ಕೂಟದ ವತಿಯಿಂದಲೋ, ಇನ್ನಾವುದೋ ಸಂಘಟನೆಯ ಹೆಸರಿನಲ್ಲಿಯೋ ಬಹಿರಂಗ ಪ್ರತಿಭಟನಾ ಸಭೆಗಳು ನಡೆದಿವೆ. ಆದರೆ ಜನವರಿ 4 ರಂದು ಜಿಲ್ಲಾ ಮುಸ್ಲಿಂ ಒಕ್ಕೂಟವು ಮಂಗಳೂರು ನಗರ ಕೇಂದ್ರದಲ್ಲಿ ಹಮ್ಮಿಕೊಂಡಿರುವ ಪ್ರತಿಭಟನೆಗೆ ಜಿಲ್ಲಾಡಳಿತವು ಇನ್ನೂ ಅನುಮತಿಯನ್ನು ನೀಡಿಲ್ಲ. ಅದೇ ರೀತಿ ಜನವರಿ 10 ರಂದು ವಿಶ್ವಹಿಂದೂ ಪರಿಷತ್ತು ಸಿಎಎ ಪರವಾಗಿ ಬಹಿರಂಗ ಸಭೆಗೂ ಪೊಲೀಸರು ಅನುಮತಿ ನೀಡಿಲ್ಲ ಎಂದು ತಿಳಿಯುತ್ತದೆ.

ಸಂಸದ್ಸದಸ್ಯರನ್ನೊಳಗೊಂಡ ಸಿಪಿಐ(ಎಂ) ನಿಯೋಗದಿಂದ ಸಂತ್ರಸ್ತರ ಭೇಟಿ:

ಸೆಕ್ಯುಲಾರ್ ಪಕ್ಷಗಳ ಜಿಲ್ಲಾ ಮುಖಂಡರು, ರಾಜ್ಯ ಮುಖಂಡರು ಮಂಗಳೂರಿನಲ್ಲಿ ಗೋಲಿಬಾರಿಗೀಡಾದ ವ್ಯಕ್ತಿಗಳ ಮನೆಗೆ ಭೇಟಿ ನೀಡಿ ಸಾಂತ್ವಾನ ಹೇಳಿದ್ದಾರೆ. ಡಿಸೆಂಬರ 23 ರಂದು ಸಿಪಿಐ(ಎಂ) ಪಕ್ಷದ ಜಿಲ್ಲಾ ನಿಯೋಗವು ಮೃತಪಟ್ಟವರ ಮನೆಗೂ, ಗಾಯಾಳುಗಳಿರುವ ಆಸ್ಪತ್ರೆಗೂ ಭೇಟಿ ನೀಡಿದ್ದಾರೆ. ರಾಜ್ಯದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ಮಂಗಳೂರಿಗೆ ಬಂದು ಅಧಿಕಾರಿಗಳನ್ನು ಹಾಗೂ ಕೆಲವು ಸಾರ್ವಜನಿಕರನ್ನು ಭೇಟಿಯಾಗಿದ್ದಾರಾದರೂ, ಮೃತರಾದವರ ಹಾಗೂ ಸಂತ್ರಸ್ತರ ಕುಟುಂಬದವರನ್ನು ಭೇಟಿಯಾಗಲಿಲ್ಲ.

ಸಿಪಿಐ(ಎಂ) ಪಕ್ಷದ ಕೇಂದ್ರ ಸಮಿತಿ ಸದಸ್ಯ ಪಿ.ಕರುಣಾಕರನ್, ರಾಜ್ಯ ಸಭಾ ಸಂಸದ ಕೆ.ಕೆ. ರಾಗೇಶ್, ಸೋಮಪ್ರಸಾದ್, ಮಂಜೇಶ್ವರದ ಮಾಜಿ ಶಾಸಕ ಸಿ.ಎಚ್.ಕುಂಞಂಬು, ಕೇರಳ ವಿಧಾನಸಭಾ ಸದಸ್ಯರಾದ ಕುಂಞಿರಾಮನ್, ರಾಜಗೋಪಾಲ್, ಕಾಸರಗೋಡು ಜಿಲ್ಲಾ ಪಕ್ಷದ ಕಾರ್ಯದರ್ಶಿ ಗೋಪಾಲಕೃಷ್ಣನ್, ಪಕ್ಷದ ಕೇರಳ ರಾಜ್ಯ ಸಮಿತಿ ಸದಸ್ಯ ಕೆ.ಆರ್.ಜಯಾನಂದ ಮಂಜೇಶ್ವರ – ಇವರುಗಳು ಪಕ್ಷದ ಕೇಂದ್ರ ಸಮಿತಿ ಪರವಾಗಿ ಮಂಗಳೂರಿಗೆ ಭೇಟಿ ನೀಡಿ ಸಂತ್ರಸ್ತರನ್ನು, ಮೃತರ ಕುಟುಂಬದವರನ್ನು ಭೇಟಿಯಾಗಿರುತ್ತಾರೆ. ಪಕ್ಷ ಜಿಲ್ಲಾ ಸಮಿತಿಯಿಂದ ಕಾರ್ಯದರ್ಶಿ ವಸಂತ ಆಚಾರಿ, ಜೆ. ಬಾಲಕೃಷ್ಣ ಶೆಟ್ಟಿ, ಯಾದವ ಶೆಟ್ಟಿ, ಮುನೀರ್ ಕಾಟಿಪಳ್ಳ ಅವರ ಜೊತೆಗೂಡಿದ್ದರು.

ಮಂಗಳೂರಿನ ಗೋಲಿಬಾರು ಒಂದು ಅಪ್ರಚೋದಿತ ಹಾಗೂ ಅಕಾರಣ ಪೊಲೀಸು ಕ್ರಮವಾಗಿದೆ. ಪೋಲಿಸು ಅಧಿಕಾರಿಗಳು ಕಾನೂನು ಬಾಹಿರವಾಗಿ ವರ್ತಿಸಿದ್ದಾರೆ. ಕೇರಳದಿಂದ ಬಂದವರು ದೊಂಬಿ ನಡೆಸಿದರೆಂಬುದು ಕಟ್ಟುಕತೆಯಾಗಿದೆ. ನ್ಯಾಯಾಂಗ ತನಿಖೆ ಮಾತ್ರ ಸತ್ಯವನ್ನು ತಿಳಿಸಬಲ್ಲುದು – ಎಂಬುದಾಗಿ ಸಂಸದ್ಸದಸ್ಯರ ನಿಯೋಗ ಅಭಿಪ್ರಾಯಪಟ್ಟಿದೆ.

ಸರಕಾರ ಮತ್ತು ಪೊಲೀಸ್ ಇಲಾಖೆಯಿಂದ ಕುಕೃತ್ಯದ ಬಗ್ಗೆ ಮತ್ತೆ ಸಮರ್ಥನೆ:

ಪೊಲೀಸ್ ಇಲಾಖೆ ನಗರದಲ್ಲಿ ಜೋಡಿಸಿರುವ ಸಿಸಿಟಿವಿ ಹಾಗೂ ಇತರ ವೀಡಿಯೋಗಳಿಂದ ತಮಗೆ ಬೇಕಾದುದನ್ನು ಮಾತ್ರ ಆಯ್ದು ಜೋಡಿಸಿದ ಫೂಟೇಜ್‌ಗಳನ್ನು ಮಾಧ್ಯಮದ ಮುಂದೆ ಪ್ರದರ್ಶಿಸಿದ್ದು, ಅವುಗಳಲ್ಲಿ ಪೊಲೀಸರು ನಡೆಸುತ್ತಿದ್ದ ದಾಳಿಗಳು ಕಾಣೆಯಾಗಿವೆ. ಪ್ರತಿಭಟನಾಕಾರರು ನಡೆಸುತ್ತಿದ್ದ ಕಲ್ಲೆಸೆತ ಇತ್ಯಾದಿ ದಾಖಲಾಗಿವೆ. ಆದರೆ ಎಲ್ಲಿಯೂ ಪೊಲೀಸರು ಆರೋಪಿಸಿರುವಂತೆ ಮೊದಲಲ್ಲಿ ಸಾವಿರ ಜನ ಗುಂಪುಗೂಡಿ ಕಲ್ಲೆಸೆದ ಕೃತ್ಯಗಳು ಕಾಣಬರುವುದಿಲ್ಲ. ಅಲ್ಲದೆ 6000–7000 ಜನರ ಗುಂಪು ಬಂದರು ಠಾಣೆಗೆ ಮುತ್ತಿಗೆ ಹಾಕಿದ್ದೂ ಕಂಡು ಬರುವುದಿಲ್ಲ. ಠಾಣೆಯ ಶಸ್ತ್ರಾಸ್ತ್ರಗಳನ್ನು ಬಲಾತ್ಕಾರದಿಂದ

ಪುಟ 4 ಕ್ಕೆ





ಧರಣಿ ಸತ್ಯಾಗ್ರಹದಲ್ಲಿ ಸಾವಿರಾರು ಮಂದಿ

ಜಾತ್ಯಾತೀತ ಪಕ್ಷಗಳು ಹಾಗೂ ಸಂಘಟನೆಗಳು ಜನವರಿ 2 ರಂದು ಮಂಗಳೂರು ಪುರಭವನದ ಎದುರು ಏರ್ಪಡಿಸಿದ ಧರಣಿ ಸತ್ಯಾಗ್ರಹವು ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡುವುದರೊಂದಿಗೆ ಆರಂಭಗೊಂಡಿತು. ಮಾಜಿ ಸಚಿವ ಬಿ. ರಮಾನಾಥ ರೈಯವರು ಸತ್ಯಾಗ್ರಹವನ್ನು ಉದ್ಘಾಟಿಸಿದರು. ಮಾಜಿ ಸಚಿವ ಅಭಯಚಂದ್ರ ಜೈನ್, ಮಾಜಿ ರಾಜ್ಯ ಸಭಾ ಸದಸ್ಯ ಎ.ಬಿ.ಇಬ್ರಾಹಿಂ, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ ಮೊದಲ್ಗೊಂಡು ಜಿಲ್ಲೆಯ ಹಲವಾರು ಜಾತ್ಯಾತೀತ ಪಕ್ಷ ಸಂಘಟನೆಗಳ ನಾಯಕರು ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು. ವಿಚಾರವಾದಿ ಪ್ರೊ.ನರೇಂದ್ರ ನಾಯಕ್, ರಂಗ ಕರ್ಮಿಗಳಾದ ಮೋಹನಚಂದ್ರ, ಚಂದ್ರಹಾಸ್ ಉಳ್ಳಾಲ್ ಕೂಡಾ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು. ಪೊಲೀಸರು ನಡೆಸಿದ ಗೋಲಿಬಾರ್ ಬಗ್ಗೆ ನ್ಯಾಯಾಂಗ ತನಿಖೆಯನ್ನು ಹೈಕೋರ್ಟ್ ನ್ಯಾಯಾಧೀಶರಿಂದ ಮಾಡಿಸಬೇಕೆಂದು ಆಗ್ರಹಿಸಲಾಯಿತು. ಡಿವೈಎಫ್ಐ ಮುಖಂಡ ಮುನೀರ್ ಕಾಟಿಪಳ್ಳ ಮತ್ತು ಕಾಂಗ್ರೆಸ್ಸಿನ ವಿಚಾರವಾದಿ ನಾಯಕ ಪಿ.ವಿ. ಮೋಹನ್ ಕಾರ್ಯಕ್ರಮ ನಿರೂಪಿಸಿದರು. ●

ಸಿಎಎ ಪ್ರತಿಭಟನೆ–ಮಂಗಳೂರು ಗೋಲಿಬಾರಿನ ಸುತ್ತಮುತ್ತ

ಪುಟ 3 ರಿಂದ

ಒಯ್ಯಲು ಯತ್ನಿಸಿದ್ದೂ ಕಂಡು ಬರುವುದಿಲ್ಲ. ಪೊಲೀಸರು ಕಾಣಿಸಿದ ಫೂಟೇಜ್‌ಗಳಲ್ಲಿ ಎಲ್ಲಿಯೂ ಸಾವಿರಮೀರಿದ ಜನಸಂದಣಿ ಕಾಣಸಿಗುವುದಿಲ್ಲ. ಅಲ್ಲದೆ ನಿರ್ದಿಷ್ಟವಾಗಿ ಕೇರಳದಿಂದ ಗಲಭೆಕೋರರು ಬಂದಿದ್ದಾರೆನ್ನಲೂ ಸಾಕ್ಷ್ಯ ಸಿಗುವುದಿಲ್ಲ. ಅಲ್ಲದೆ ಸತ್ತವರನ್ನೊಳಗೊಂಡು ಕೆಲವು ಗಾಯಾಳುಗಳ ಮೇಲೂ ಗಲಭೆಗೆ ಕಾರಣಕರ್ತರೆಂದು ಎಫ್ಐಆರ್ ಪೊಲೀಸ್ ಇಲಾಖೆ ದಾಖಲಿಸಿದೆ.

ಈ ಮಧ್ಯೆ ರಾಜ್ಯ ಸರಕಾರ ಮೃತರ ಕುಟುಂಬಗಳಿಗೆ ಘೋಷಿಸಿದ್ದ ತಲಾ ರೂ.10 ಲಕ್ಷ ಮೊಬಲಗಿಗೆ ತಡೆ ಹಾಕಿದೆ. ಕಾರಣ ಅವರು ಆರೋಪಿಗಳಾಗಿದ್ದಾರೆಂದು ಬಿಜೆಪಿ ಬೆಂಬಲಿಗರು ಸರಕಾರಕ್ಕೆ ತಿಳಿಸಿರುವುದು. ಅಲ್ಲದೆ ಸಿಐಡಿ ಮೂಲಕ ಗೋಲಿಬಾರು ಬಗ್ಗೆ ತನಿಖೆ ಸರಕಾರ ಪ್ರಾರಂಭಿಸಿದೆ.

ಸಾರ್ವಜನಿಕರು ಸರಕಾರದ ಮುಂದಿಡುವ ಬೇಡಿಕೆಗಳು:

ಗೋಲಿಬಾರು ನಡೆಸಿದ ಬಳಿಕ ಮಂಗಳೂರು ಪೊಲೀಸ್ ಕಮಿಷನರ್ ಡಾ.ಪಿ.ಎಸ್.ಶ್ರೀ ಹರ್ಷ ನೀಡಿದ ಪ್ರತಿಭಟನಾಕಾರರ ಸಂಖ್ಯೆ, ಲೂಟಿಗೆ ಯತ್ನ ಮಾಹಿತಿಗಳು, ಆಯ್ದ ಸಿಸಿಟಿವಿ ಕ್ಯಾಮರಾ ಫೂಟೇಜ್‌ಗಳನ್ನು ಮಾತ್ರ ಬಹಿರಂಗಪಡಿಸಿರುವುದು ಅನುಮಾನಕ್ಕೆ ಎಡೆಮಾಡಿದೆ.

ಲಾಠಿಚಾರ್ಜ್, ಗೋಲಿಬಾರಿಗೆ ಕಾರಣರಾದ ಪೊಲೀಸ್ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು. ಗೋಲಿಬಾರಿಗೆ ಬಲಿಯಾದ ಇಬ್ಬರು ಅಮಾಯಕರ ಕುಟುಂಬಕ್ಕೆ ಸರ್ಕಾರ ಘೋಷಿಸಿದ ಪ್ರಕಾರವೇ ಪರಿಹಾರ ನೀಡಬೇಕು. ಗೋಲಿಬಾರಿನಲ್ಲಿ ಗಾಯಗೊಂಡವರಿಗೂ ಪರಿಹಾರ ನೀಡಬೇಕು. ಕಲ್ಲು ತೂರಾಟ, ಹಿಂಸಾಚಾರ ಪ್ರಕರಣವನ್ನು ಮುಂದಿಟ್ಟು ಬಂಧಿಸಿದ ಅಮಾಯಕರನ್ನು ಕೂಡಲೇ ಬಿಡುಗಡೆ ಮಾಡಬೇಕು – ಎಂಬುದು ಸಾರ್ವಜನಿಕರ ಬೇಡಿಕೆಯಾಗಿದೆ.

ನ್ಯಾಯಾಂಗ ತನಿಖೆಗೆ ಆಗ್ರಹಿಸಿ ಸೆಕ್ಯುಲಾರ್ ಸಂಘಟನೆಗಳಿಂದ ಧರಣಿ:

ಪೊಲೀಸರ ಹೇಳಿಕೆಗಳನ್ನು ಸಮರ್ಥಿಸುವಂತೆ ಬಿಜೆಪಿ ಹಾಗೂ ಸಂಘ ಪರಿವಾರದ ಸಂಘಟನೆಗಳು ಪ್ರಚಾರ ಮಾಡುತ್ತಾ ಇವೆ. ಪೊಲೀಸ್ ಅಧಿಕಾರಿಗಳು ಮತ್ತು ಇಲಾಖೆ ಸಂಘ ಪರಿವಾರದಿಂದ ನಿರ್ದೇಶಿಸಲ್ಪಡುತಿದ್ದೆಯೇ ಎಂಬ ಪ್ರಬಲ ಅನುಮಾನ ಸಾರ್ವಜನಿಕರಲ್ಲಿದೆ. ಪೊಲೀಸ್ ನಿರೂಪಣೆಗಳನ್ನು ಬಳಸಿಕೊಂಡು ಪೌರತ್ವ ತಿದ್ದುಪಡಿ ಕಾಯ್ದೆ ಮತ್ತು ಎನ್‌ಆರ್‌ಸಿ ಪರ ಜನಾಭಿಪ್ರಾಯ ಹುಟ್ಟಿಸುವ ಹುನ್ನಾರ ಕೂಡಾ ಸಂಘಪರಿವಾರದ್ದಾಗಿದೆ. ಈ ಹುನ್ನಾರವನ್ನು ದ.ಕ.ಜಿಲ್ಲೆಯಲ್ಲಿ ನಿರ್ಭಿಢೆಯಿಂದ ಬಯಲಿಗೆಳೆಯಬೇಕಾಗಿದೆ.

ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜಿಲ್ಲೆಯ ಸೆಕ್ಯುಲಾರ್ ಪಕ್ಷಗಳಾದ ಕಾಂಗ್ರೆಸ್, ಜೆಡಿಎಸ್, ಸಿಪಿಐ, ಸಿಪಿಐ(ಎಂ) ಮತ್ತು ಸೆಕ್ಯುಲಾರ್ ಸಂಘಟನೆಗಳಾದ ದಸಂಸ, ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡರುಗಳ ಸಭೆ ಕರೆದು ಚರ್ಚೆ ನಡೆಸಿದೆ. ಪೊಲೀಸ್ ಅಕ್ರಮ ಹಾಗೂ ಗೋಲೀಬಾರ್ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕೆಂದು ಆಗ್ರಹಿಸುವ ಧರಣಿ ಸತ್ಯಾಗ್ರಹವನ್ನು ಜನವರಿ 2 ರಂದು ಮಂಗಳೂರು ಪುರಭವನದ ಎದುರು ನಡೆಸಲಾಗಿದೆ. ಕಾಂಗ್ರೆಸ್ಸಿನ ಹಾಗೂ ಜೆಡಿಎಸ್‌ನ ಮೂವರು ಮಾಜಿ ಸಚಿವರು ಈ ಧರಣಿಯಲ್ಲಿ ಭಾಗವಹಿಸಿದರು.

ಜನವರಿ ತಿಂಗಳ ಉತ್ತರಾರ್ಧದಲ್ಲಿ ಪೌರತ್ವ ಕಾಯಿದೆ, ಎನ್‌ಆರ್‌ಸಿ ಮತ್ತು ರಾಷ್ಟ್ರೀಯ ಜನಸಂಖ್ಯಾ ನೋಂದಣಿ (ಎನ್‌ಪಿಆರ್) ವಿರೋಧಿಸಿ ಮಂಗಳೂರಿನಲ್ಲಿ ಬೃಹತ್ ರ್‍ಯಾಲಿಯೊಂದನ್ನು ನಡೆಸಬೇಕು ಹಾಗೂ ಈ ಕಾನೂನುಗಳ ಬಗ್ಗೆ ಜನರಿಗೆ ವಿವರಣೆ ನೀಡುವ ಹಲವು ಕಾರ್ಯಕ್ರಮಗಳನ್ನೂ ಸಂಯುಕ್ತವಾಗಿ ಮತ್ತು ವ್ಯಾಪಕವಾಗಿ ನಡೆಸಬೇಕೆಂಬ ಸೂಚನೆ ಬಂದಿರುತ್ತದೆ. ಕೋಮುವಾದದ ಪ್ರಯೋಗಶಾಲೆ ಎಂದು ಕುಖ್ಯಾತಿಗೊಳಗಾಗಿರುವ ದ.ಕ. ಜಿಲ್ಲೆಯಲ್ಲಿ ಈ ಬಗೆಯ ಎಚ್ಚರ ಮಾಡುತ್ತಿರುವುದು ಒಂದು ಆಶಾದಾಯಕ ಬೆಳವಣಿಗೆಯಾಗಿದೆ. ●

ಸರಕಾರಗಳ ನಿರ್ಲಕ್ಷ : ಗುಣಾತ್ಮಕ ಶಿಕ್ಷಣ ಮರೆ,

ನ್ಯಾ. ನಾಗಮೋಹನ್ ದಾಸ್ ಕಳವಳ



ದೇಶದಲ್ಲಿ ಆಳುವ ಸರಕಾರಗಳ ನಿರ್ಲಕ್ಷದಿಂದಾಗಿ ಶಿಕ್ಷಣ ವ್ಯವಸ್ಥೆಯಲ್ಲಿ ಗುಣಾತ್ಮಕ ಶಿಕ್ಷಣ ಮರೆಯಾಗುತ್ತಿದೆ, ವಿದ್ಯಾರ್ಥಿಗಳಿಗೆ ಪ್ರಾಥಮಿಕ ಹಂತದಿಂದ ಆರಂಭವಾಗಿ, ಕಾಲೇಜು ಶಿಕ್ಷಣವರೆಗೂ ಗುಣಾತ್ಮಕ ಶಿಕ್ಷಣ ನೀಡಬೇಕು ಎಂದು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ಆಗ್ರಹಿಸಿದರು.

ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್ಐ)ನ ಸಂಸ್ಥಾಪನಾ ದಿನಾಚರಣೆ ಮತ್ತು ಸುವರ್ಣ ಮಹೋತ್ಸವ ಆಚರಣೆ ಅಂಗವಾಗಿ ಆಯೋಜಿಸಿದ್ದ ಶಿಕ್ಷಣ: ಸರಕಾರಗಳ ಧೋರಣೆ–ವಿದ್ಯಾರ್ಥಿಗಳ ಪಾತ್ರ ಕುರಿತ ವಿಚಾರ ಸಂಕಿರಣದಲ್ಲಿ ಡಿಸೆಂಬರ್ 30 ರಂದು ಬೆಂಗಳೂರಿನ ಅಲ್ಯುಮ್ನಿ ಅಸೋಸಿಯೇಷನ್ ಹಾಲ್‌ನಲ್ಲಿ ನಡೆಯಿತು.

ಇಂದಿನ ವಿದ್ಯಾರ್ಥಿಗಳು ನನಗೆ ಇಷ್ಟು ಅಂಕಗಳು ಬಂದರೆ ಸಾಕು ಎಂಬ ಮನಸ್ಥಿತಿ ಬೆಳೆಸುಕೊಂಡಿದ್ದಾರೆ. ಸರಕಾರಗಳು ಮಕ್ಕಳ ಮನಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಶಿಕ್ಷಣದ ನೀತಿಗಳನ್ನು ರೂಪಿಸಬೇಕು ಎಂದ ಅವರು, ನಮ್ಮಲ್ಲಿ ಸ್ವಾತಂತ್ರ್ಯ ಬಂದ ನಂತರ ವೈದ್ಯಕೀಯ ಶಿಕ್ಷಣ, ಎಂಜಿನಿಯರಿಂಗ್ ಶಿಕ್ಷಣಕ್ಕೆ ಆದ್ಯತೆ ನೀಡಲಾಗುತ್ತಿದೆ. ಆದರೆ, ಕಾನೂನು ಶಿಕ್ಷಣಕಕ್ಕೆ ಮಾನ್ಯತೆ ನೀಡಿಲ್ಲ ಎಂದು ನುಡಿದರು. ಭಾರತದಲ್ಲಿ ಎಲ್ಲರಿಗೂ ಸಮಾನ ಶಿಕ್ಷಣ ನೀಡುವ ಸಲುವಾಗಿ ಆಳುವ ಪ್ರಭುತ್ವಗಳು ಸರಿಯಾದ ಯೋಜನೆ ರೂಪಿಸುವಲ್ಲಿ ಸಂಪೂರ್ಣ ವಿಫಲವಾಗಿವೆ. ನಮ್ಮ ಸಂವಿಧಾನದಲ್ಲಿ ಜಾತಿ, ಧರ್ಮ, ಭಾಷೆ, ಪ್ರದೇಶ, ಲಿಂಗ ಎಂಬ ಭೇದ–ಭಾವವನ್ನು ಅನುಮೋದಿಸುವುದಿಲ್ಲ. ಆದರೆ, ಶಿಕ್ಷಣದ ವಿಚಾರದಲ್ಲಿ ಉಳ್ಳವರಿಗೆ, ಇಲ್ಲದವರಿಗೆ ಒಂದೊಂದು ರೀತಿಯಲ್ಲಿ ಶಿಕ್ಷಣ ನೀಡುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ವಿದ್ಯಾರ್ಥಿಗಳು ಸಂವಿಧಾನವನ್ನು ಓದಬೇಕು. ಆ ಮೂಲಕ ಕಾನೂನಿನ ಬಗೆಗೆ, ದೇಶದ ಐಕ್ಯತೆ, ಸಮಗ್ರತೆ, ಬಹುತ್ವದ ಬಗ್ಗೆ ಒಂದು ಸ್ಪಷ್ಟತೆ ಸಿಗಲಿದೆ. ಇತ್ತೀಚಿಗೆ ಯಾರೂ ಸಂವಿಧಾನ ಓದುತ್ತಿಲ್ಲ, ಓದಿದವರು ಅರ್ಥೈಸಿಕೊಂಡಿಲ್ಲ, ಅರ್ಥೈಸಿಕೊಂಡವರು ಜಾರಿ ಮಾಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ದಿಲ್ಲಿಯ ಜಾಮಿಯಾ ಮಿಲಿಯಾ ವಿವಿಯ ಸಂಶೋಧನಾ ವಿದ್ಯಾರ್ಥಿ ಇಬ್ರಾಹಿಂ ಕುಪಲತ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ದೇಶದಲ್ಲಿ ಫ್ಯಾಸಿಸಂ ಅಧಿಕಗೊಂಡಿದ್ದು, ಸಂವಿಧಾನವನ್ನೇ ನಾಶ ಮಾಡಲು ತಯಾರಾಗಿದ್ದಾರೆ. ಅದರ ಭಾಗವಾಗಿ, ಸಂವಿಧಾನ ವಿರೋಧಿ, ಪ್ರಜಾಪ್ರಭುತ್ವ ವಿರೋಧಿ ಕೆಲಸಗಳನ್ನು ಮಾಡುತ್ತಿದ್ದಾರೆ ಎಂದು ಅಭಿಪ್ರಾಯಿಸಿದರು. ಫ್ಯಾಸಿಸ್ಟ್ ಶಕ್ತಿಗಳು ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗದ ಮೇಲೂ ನಿಯಂತ್ರಣ ಸಾಧಿಸುತ್ತಿವೆ. ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಸರಕಾರವು ಜಾತಿ, ಧರ್ಮದ ಹೆಸರಿನಲ್ಲಿ ದೇಶವನ್ನು ಇಬಾ?ಭಗ ಮಾಡಲು ಮುಂದಾಗಿದೆ. ಅದರ ಹಿನ್ನೆಲೆಯಲ್ಲಿ ಎನ್‌ಆರ್‌ಸಿ, ಸಿಎಎ ಜಾರಿಗೆ ಮುಂದಾಗಿದೆ ಎಂದು ಅವರು ದೂರಿದರು. ಪ್ರಧಾನಿ ಮೋದಿ ಗಲಾಟೆ ಮಾಡುವ ಎಲ್ಲರೂ ಮುಸ್ಲಿಮ್‌ರು ಎಂಬಂತೆ ಬಿಂಬಿಸುತ್ತಿದ್ದಾರೆ. ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿರುವ ಸಿಎಎ ಅನ್ನು ಬಲವಂತವಾಗಿ ಜನರ ಮೇಲೆ ಹೇರಲು ಮುಂದಾಗಿದ್ದಾರೆ ಎಂದು ಹೇಳಿದರು.

ರಾಜ್ಯ ಕಾರ್ಯದರ್ಶಿ ಗುರುರಾಜ ದೇಸಾಯಿ ಪ್ರಾಸ್ತಾವಿಕವಾಗಿ ಮಾತನಾಡಿದರು. ರಾಜ್ಯಾಧ್ಯಕ್ಷ ವಿ.ಅಂಬರೀಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಎಸ್‌ಎಫ್ಐನ ಮಾಜಿ ಅಧ್ಯಕ್ಷ ಇಕ್ಬಾಲ್ ಹುಸೇನ್, ಕಾರ್ಯದರ್ಶಿ ಆರ್. ರಾಮಕೃಷ್ಣ, ಬಿ. ರಾಜಶೇಖರಮೂರ್ತಿ, ಹುಳ್ಳಿ ಉಮೇಶ್, ವಾಸುದೇವರೆಡ್ಡಿ ಉಪಸ್ಥಿತರಿದ್ದರು. ●



ಕಾನ್ವೆಂಟುಗಳಿಗೂ ಸವಾಲೆಸೆದ ಅಂಗನವಾಡಿ ಕಾರ್ಯಕರ್ತೆ ಬಿ.ವಸಂತ

ಅರುಣ್ ಜೋಳದಕೂಡ್ಲಿಗಿ



ಈಚೆಗೆ ಎಲ್.ಕೆ.ಜಿ. ಯು.ಕೆ.ಜಿಯನ್ನು ಅಂಗನವಾಡಿಯಲ್ಲೇ ಆರಂಭಿಸಿ ಎಂದು ಸಿ.ಐ.ಟಿ.ಯು ಸಂಘಟನೆಯು ಅಂಗನವಾಡಿ ಕಾರ್ಯಕರ್ತೆಯರ ಪರವಾಗಿ ದೊಡ್ಡ ಮಟ್ಟದಲ್ಲಿ ಹೋರಾಟ ನಡೆಯಿತು. ರಾಜ್ಯವ್ಯಾಪಿ ಗಮನ ಸೆಳೆಯಿತು. ಇದೀಗ ಸರಕಾರದ ಮಟ್ಟದಲ್ಲಿ ಮಾತುಕತೆಗಳು ನಡೆಯುತ್ತಿದೆ. ಆದರೆ ಇಲ್ಲೊಬ್ಬ ಅಂಗನವಾಡಿ ಕಾರ್ಯಕರ್ತೆ ಸರಕಾರ ಅಧಿಕೃತವಾಗಿ ಎಲ್.ಕೆ.ಜಿ. ಯು.ಕೆ.ಜಿಯನ್ನು ಅಂಗನವಾಡಿಗಳಲ್ಲಿ ಆರಂಭಿಸುವ ಮುನ್ನವೇ ಕಾನ್ವೆಂಟುಗಳಿಗೂ ಸವಾಲೆಸೆಯುವಂತೆ ಅಂಗನವಾಡಿಯನ್ನು ರೂಪಿಸಿದ್ದಾರೆ. ಈಚೆಗೆ ದೇವದುರ್ಗ ಭಾಗದ 40 ಜನ ಅಂಗನವಾಡಿ ಕಾರ್ಯಕರ್ತೆಯರ ತಂಡ ಈ ಅಂಗನವಾಡಿಯನ್ನು ಭೇಟಿ ಮಾಡಿ ನಾವೂ ಹೀಗೆ ಮಾಡಬಹುದೇ ಎಂದು ಪರಿಶೀಲಿಸಿದ್ದಾರೆ. ಈ ಭಾಗದ ಶಿಶು ಅಭಿವೃದ್ಧಿ ತಾಲೂಕು ಅಧಿಕಾರಿ ಎ.ಆರ್. ಮಧುಸೂದನ ಅವರು ಈ ಅಂಗನವಾಡಿಯ ಮಾದರಿಯನ್ನು ಇಡೀ ತಾಲೂಕಿಗೆ ವಿಸ್ತರಿಸುವ ಯೋಚನೆ ಮಾಡಿದ್ದಾರೆ. ಹಾಗಾದರೆ ಇದರ ವಿಶೇಷತೆಯೇನು?

ಜೀರೋದಿಂದ ಮೂರು ನಾಲ್ಕು ವರ್ಷದ ಮಕ್ಕಳು ಚಿಲಿಪಿಲಿಗುಟ್ಟುವ ಈ ಪುಟ್ಟ ಕೋಣೆಯಲ್ಲಿ ಟೀಚರ್ ಕೇಳುವ ಪ್ರತಿ ಪ್ರಶ್ನೆಗಳಿಗೂ ಮಕ್ಕಳು ಸ್ಪರ್ಧೆಗೆ ಬಿದ್ದಂತೆ ಪಟಪಟನೆ ಉತ್ತರಿಸುತ್ತಾರೆ. ಚಕಚಕನೆ ಇಂತಿಷ್ಟು ಪ್ಲಾಸ್ಟಿಕ್ ಕಪ್‌ಗಳನ್ನು ಜೋಡಿಸುತ್ತಾ ಸೂಪರ್ ಮಿನಿಟ್ ರಿಯಾಲಿಟಿ ಶೋನ ಅಣಕು ಮಾಡಿ ಚಪ್ಪಾಳೆ ತಟ್ಟುತ್ತಾರೆ. ಬಾಸ್ಕೆಟ್‌ಬಾಲನ್ನು ನೆಟ್‌ನಲ್ಲಿ ಮಗುವೊಂದು ಎಸೆಯುವಾಗ ಉಳಿದೆಲ್ಲರೂ ಚಪ್ಪಾಳೆ ತಟ್ಟಿ ಹುರಿದುಂಬಿಸುತ್ತಾರೆ. ಗಾಂಧೀಜಿ ಎಂದ ತಕ್ಷಣ ಗಾಂಧೀಜಿಗೆ ಸಂಬಂಧಿಸಿದ ಹತ್ತಾರು ಸಂಗತಿಗಳನ್ನು ಒಬ್ಬರಾದ ನಂತರ ಒಬ್ಬರಂತೆ ಪಟಪಟನೆ ಹೇಳುತ್ತಾ ಗಾಂಧಿಯ ಜೀವನ ಕಥನವನ್ನು ಅರಳಿಸುತ್ತಾರೆ. ಸ್ವಾತಂತ್ರ್ಯ ಎಂದತಕ್ಷಣ ಈ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರ ಹೆಸರನ್ನು ಉಲಿಯುತ್ತಾರೆ. ಸೊಳ್ಳೆ ಎಂದ ತಕ್ಷಣ ಅದರ ಪರಿಚಯ ಹೇಳುತ್ತಲೆ ಅದರಿಂದ ಹರಡುವ ರೋಗಗಳಾವುವು, ಈ ರೋಗಗಳು ಹರಡದಂತೆ ಮನೆಯಲ್ಲಿ ಏನೇನು ಮುಂಜಾಗ್ರತೆ ವಹಿಸಬೇಕು ಎಂದು ಮಕ್ಕಳು ವಿವರಿಸುತ್ತಾರೆ. ಹೀಗೆ ಒಂದೊಂದು ಸಂಗತಿಯ ಬಗೆಗೂ ಸಾಮೂಹಿಕವಾಗಿ ಒಬ್ಬರಾದನಂತರ ಒಬ್ಬರಂತೆ ಉತ್ತರದ ಸರಪಳಿ ಹೆಣೆಯುವ ಈ ಮಕ್ಕಳು ಇಂಟರ್‍ನ್ಯಾಷನಲ್ ಎಂದು ಕರೆದುಕೊಳ್ಳುವ ಯಾವುದೇ ಖಾಸಗಿ ಕಾನ್ವೆಂಟ್ ಸ್ಕೂಲಿನಲ್ಲಿ ಓದುತ್ತಿಲ್ಲ. ಹತ್ತಾರು ಅವಕಾಶಗಳಿರುವ ಸರಕಾರಿ ಶಾಲೆಯ ಮಕ್ಕಳೂ ಅಲ್ಲ. ಬಳ್ಳಾರಿ ಜಿಲ್ಲೆ ಕೊಟ್ಟೂರು ತಾಲೂಕಿನ ಕೂಡ್ಲಿಗಿಯಿಂದ ಪಶ್ಚಿಮಕ್ಕೆ 10 ಕಿಲೋಮೀಟರ್ ದೂರದಲ್ಲಿರುವ ಗಜಾಪುರದ ಅಂಗನವಾಡಿ ಬಿ ಕೇಂದ್ರದ ಮಕ್ಕಳು.

ಹೌದು ಅಂಗನವಾಡಿ ಕಾರ್ಯಕರ್ತೆ ಇಷ್ಟೆಲ್ಲಾ ಪ್ರಯೋಗ ಮಾಡಿದ್ದಾರಾ? ಎಂದು ನೀವು ಈ ಪುಟ್ಟ ಶಾಲೆಯನ್ನು ಪ್ರವೇಶಿಸಿದರೆ, ಹುಬ್ಬೇರಿಸುವಂತೆ ಈ ಅಂಗನವಾಡಿ ಹತ್ತಾರು ಹೊಸ ಹೊಸ ಪ್ರಯೋಗಗಳ ಕಲಿಕಾ ಸಾಮಗ್ರಿಗಳ ಅಕ್ಷಯ ಪಾತ್ರೆಯಂತೆ ಗಮನ ಸೆಳೆಯುತ್ತದೆ. ಮಕ್ಕಳ ಸೃಜನಶೀಲತೆಯನ್ನು ಅವರದೇ ಪರಿಸರದಲ್ಲಿ ಬಳಸಿ ಬಿಸಾಡಿದ, ಮಕ್ಕಳಿಂದಲೇ ಸಂಗ್ರಹಿಸಿದ ವಸ್ತುಗಳನ್ನು ಬಳಸಿಯೇ ತಯಾರಿಸಲಾಗಿದೆ. ಮನೆಗಳಲ್ಲಿ ಲಭ್ಯವಿರುವ ಬೀಜಗಳನ್ನು ಕಲೆ ಹಾಕಿ ಸಂಗ್ರಹ ಮಾಡಲಾಗಿದೆ. ಒಂದೊಂದು ಬೀಜವನ್ನು ತೋರಿಸಿದಾಗಲೂ ಆ ಬೀಜದ ಬೆಳೆ, ಹಣ್ಣು, ಕಾಯಿ, ಬೆಳೆಯುವ ಕಾಲಮಾನ, ಬೆಳೆಯ ಅವಧಿ ಇತ್ಯಾದಿಗಳನ್ನು ಮಕ್ಕಳು ಹೇಳುತ್ತಾರೆ.

ಪ್ರತಿದಿನ ಹನ್ನೊಂದು ಗಂಟೆಯ ಹೊತ್ತಿಗೆ ಒಬ್ಬ ಮಗು ಶಾಲೆಯಿಂದ ಹೊರಗಡೆ ಬಂದು ವಾತಾವರಣವನ್ನು ಅವಲೋಕಿಸಿ, ಮಕ್ಕಳಿಗೆ ಈ ದಿನದ ಹವಾಮಾನ ಹೇಗಿದೆ ಎಂದು ವಿವರಿಸುತ್ತದೆ. ಪ್ರತೀ ಮಕ್ಕಳಿಗೂ ಅವರದೇ ಆದ ಒಂದು ಚೀಲವಿದೆ. ಆ ಮಗು ಒಂದು ವಾರದಲ್ಲಿ ಬರೆಯುವ ಡ್ರಾಯಿಂಗ್, ಬರಹದ ಪುಟಗಳನ್ನು ಆಯಾ ಮಗುವಿನ ಚೀಲದಲ್ಲಿ ಶೇಖರಿಸಲಾಗುತ್ತದೆ. ವಾರಕ್ಕೊಮ್ಮೆ ಪೋಷಕರನ್ನು ಕರೆಸಿ ಆಯಾ ಮಕ್ಕಳ ವಾರದ ಚಟುವಟಿಕೆಯನ್ನು ವಿವರಿಸಲಾಗುತ್ತದೆ. ಕನ್ನಡ ಇಂಗ್ಲಿಷ್ ಅಂಕೆಸಂಖ್ಯೆಯ ಅಕ್ಷರಗಳನ್ನು ಗುರುತಿಸುತ್ತಲೇ ಓದುವ ಪ್ರಯತ್ನ ಮಾಡುವ ಮಕ್ಕಳನ್ನು ನೋಡಿ ಪ್ರತಿ ತಂದೆತಾಯಿ ಅಥವಾ ಪೋಷಕರಿಗೆ ತಮ್ಮ ಮಗು ಏನೇನು ಕಲಿಯುತ್ತಿದೆ ಎನ್ನುವ ಸ್ಪಷ್ಟತೆ ಸಿಕ್ಕು ಖುಷಿಗೊಳ್ಳುತ್ತಾರೆ.

ಹಳ್ಳಿಯಲ್ಲಿ ಬಳಸಿ ಬಿಸಾಡುವ ಅನೇಕ ಚಿಕ್ಕಪುಟ್ಟ ವಸ್ತುಗಳೆಲ್ಲಾ ಕಲಿಕಾ ಸಾಮಗ್ರಿಗಳಾಗಿ ಅಂಗನವಾಡಿ ಸೇರುತ್ತವೆ. ದಿನಬಳಕೆಯ ವಸ್ತುಗಳ ಖಾಲಿ ಸಾಮಾನುಗಳಿಂದ ಆಯಾ ಸಾಮಗ್ರಿಯ ಬಳಕೆಯ ಬಗ್ಗೆ ಕಲಿತ ಮಕ್ಕಳು ಅದನ್ನು ಮನೆಯಲ್ಲಿ ತಂದೆತಾಯಿಯರಿಗೆ ವಿವರಿಸುತ್ತಾರೆ. ಪ್ರತೀ ವಾರ ಒಂದು ವಿಷಯ ಆಯ್ದುಕೊಂಡು ಆ ವಿಷಯದ ಬಗ್ಗೆ ಚಿತ್ರಗಳನ್ನು ತೋರಿಸುತ್ತಾ ಅವುಗಳ ಲಕ್ಷಣಗಳನ್ನು ವಿವರಿಸುತ್ತಾ ಹೋಗುತ್ತಾರೆ. ಒಂದು ಚಿತ್ರವನ್ನು ತೋರಿಸಿದ ತಕ್ಷಣ ಮಕ್ಕಳು ಆ ಚಿತ್ರಕ್ಕೊಂದು ಕತೆ ಕಟ್ಟುತ್ತಾರೆ. ಮೋಡ, ಹವಾಮಾನ, ಹೊಲಗಳಲ್ಲಿ ಬೆಳೆಯುವ ಬೆಳೆಗಳು, ಸುತ್ತಮುತ್ತಣ ಪರಿಸರ ಎಲ್ಲದರ ಬಗ್ಗೆಯೂ ಮಕ್ಕಳು ಮಾತನಾಡುತ್ತಾರೆ. ಖಾಲಿ ರಟ್ಟಿನ ಬಾಕ್ಸ್‌ಗಳನ್ನು ಬಳಸಿ ಮನೆ, ಆಸ್ಪತ್ರೆ, ಶಾಲೆಯ ಮಾದರಿಗಳನ್ನು ತಯಾರಿಸಿ ಸ್ವಚ್ಛ ಹಳ್ಳಿಯೊಂದರ ಚಿತ್ರಣವನ್ನು ಕಣ್ಣಮುಂದೆ ತರುತ್ತಾರೆ. ತೂಗುಹಾಕಿದ ಚೀಲಗಳ ಬಣ್ಣವನ್ನು ಗುರುತಿಸಿ ಆಯಾ ಬಣ್ಣದ ಹತ್ತಾರು ಸಂಗತಿಗಳನ್ನು ಜೋಡಿಸಿ ಹೇಳುತ್ತಾರೆ. ಹೀಗೆ ಮಕ್ಕಳ ಗ್ರಹಿಕೆಯನ್ನು ಸೂಕ್ಷ್ಮಗೊಳಿಸಲಾಗಿದೆ. ಮಕ್ಕಳು ಪ್ರತಿಯೊಂದರ ಬಗ್ಗೆಯೂ ತಿಳಿದುಕೊಳ್ಳುವ ಕುತೂಹಲಿಗಳಾಗಿದ್ದಾರೆ. ಸಮಗ್ರ ಬಾಲವಿಕಾಸ ಯೋಜನೆಯ ಪೂರ್ವ ಪ್ರಾಥಮಿಕ ಶಿಕ್ಷಣದ ಉದ್ದೇಶ ಇಲ್ಲಿ ಸಾಕಾರಗೊಂಡಿದೆ. ಇದನ್ನು ಅವಿರತ ಶ್ರಮಿಸಿ ರೂಪಿಸಿದವರು ಇಲ್ಲಿನ ಅಂಗನವಾಡಿ ಕಾರ್ಯಕರ್ತೆ ಬಿ.ವಸಂತ.

ಅಂಗನವಾಡಿ ಕಾರ್ಯಕರ್ತೆಯಾಗಿ ಕಳೆದ ಏಳು ವರ್ಷದಿಂದ ಕೆಲಸ ಮಾಡುವ ವಸಂತ ಅವರು ತನಗಿರುವ ಅಂಗವೈಕಲ್ಯವನ್ನು ಮರೆತು ಮಕ್ಕಳ ಜತೆ ಮಕ್ಕಳಂತೆಯೇ ಬೆರೆಯುತ್ತಾರೆ. ನಾಳೆ ಮಕ್ಕಳಿಗೆ ಯಾವ ಪ್ರಯೋಗ ಮಾಡಬೇಕು, ಹೊಸದೇನನ್ನು ಕಲಿಸಬೇಕು ಎನ್ನುವ ಯೋಚನೆಯೇ ಅವರನ್ನು ಕ್ರಿಯಾಶೀಲವಾಗಿಟ್ಟಿದೆ. ‘ನನಗಿನ್ನೂ ತುಂಬಾ ಕನಸುಗಳಿವೆ ಸರ್, ನಮ್ಮ ಇಲಾಖೆ ಮತ್ತು ಊರಿನ ಗ್ರಾಮಸ್ಥರಿಂದ ಒಳ್ಳೆಯ ಪ್ರೋತ್ಸಾಹವಿದೆ. ಆದರೆ ಈ ತರಹದ ಪ್ರಯೋಗಗಳಿಗೆ ಇಲಾಖೆಯಿಂದ ಹಣ ಕೊಡುವ ನಿಯಮವಿಲ್ಲ. ಹಾಗಾಗಿ ಅಗತ್ಯವಿದ್ದ ಹಣವನ್ನು ನಾವೇ ಕೈಯಿಂದ ಹಾಕಬೇಕು. ಅಥವಾ ಹಣವಿಲ್ಲದೆ ಪುಕ್ಕಟೆಯಾಗಿ ಸಿಗುವ ವಸ್ತುಗಳನ್ನೆ ಬಳಸಿ ಪ್ರಯೋಗಗಳನ್ನು ಮಾಡಬೇಕು’ ಎನ್ನುತ್ತಾರೆ.

ಪತ್ರಕರ್ತರಾದ ಗಜಾಪುರದ ಭೀಮಣ್ಣ ‘ಇಲ್ಲಿ ಆಟದ ಜೊತೆಗೆ ಮಕ್ಕಳ ಕಲಿಕೆ ವಿಶಿಷ್ಟವಾಗಿದೆ. ಈ ಕೇಂದ್ರ ಇತರೆ ಅಂಗನವಾಡಿಗಳಿಗೆ ಮಾದರಿಯಂತಿದೆ’ ಎನ್ನುತ್ತಾರೆ. ‘ನಾವು ಬಡವರು ಕಾನ್ವೆಂಟಿಗೆ ಕಳಿಸೋವಷ್ಟು ದುಡ್ಡಿಲ್ಲ ತನ್ನ ಮಗಳು ಕಾನ್ವೆಂಟಿಗೆ ಹೋಗುವ ಮಕ್ಕಳಿಗಿಂತ ಚೆನ್ನಾಗಿ ಓದ್ತಾಳೆ’ ಎಂದು ಅಂಗನವಾಡಿಯಲ್ಲಿರುವ ತನ್ನ ಮಗಳ ಬಗ್ಗೆ ಭಾಗ್ಯಮ್ಮ ಹೆಮ್ಮೆಯ ಮಾತುಗಳನ್ನಾಡುತ್ತಾರೆ. ಶಿಶು ಅಭಿವೃದ್ಧಿ ತಾಲೂಕು ಅಧಿಕಾರಿ ಎ.ಆರ್. ಮಧುಸೂದನ ಅವರು ‘ಅಂಗನವಾಡಿ ಕಾರ್ಯಕರ್ತೆ ವಸಂತ ಅವರು ಪೂರ್ವ ಪ್ರಾಥಮಿಕ ಮಕ್ಕಳ ಶಿಕ್ಷಣವನ್ನು ಕಲಿಕಾ ಸಾಮಗ್ರಿಗಳನ್ನು ಬಳಸಿ, ಹಲವು ಹೊಸ ಪ್ರಯೋಗಗಳನ್ನು ಮಾಡಿ ಪರಿಣಾಮಕಾರಿಯಾಗಿ ಕಲಿಸುತ್ತಿದ್ದಾರೆ. ಈ ಮಾದರಿಯನ್ನು ತಾಲೂಕಿನ ಇತರೆ ಅಂಗನವಾಡಿಗಳಲ್ಲಿ ಅಳವಡಿಸಿಕೊಳ್ಳಲು ತಿಳಿಸಿದ್ದೇವೆ’ ಎನ್ನುತ್ತಾರೆ. ●

ರಾಷ್ಟ್ರಕವಿ ಕುವೆಂಪು ಅವರ ಜನ್ಮ ದಿನದಂದು ಸರಳ ವಿವಾಹ

ವೇದ ಮಂತ್ರಗಳಿಲ್ಲ, ಅಕ್ಷತೆ ಬದಲಾಗಿ ಹೂ ಸಿಂಚನ

ಹಗರಿಬೊಮ್ಮನಹಳ್ಳಿಯಲ್ಲಿ ಅಪರೂಪದ ಸಾಮೂಹಿಕ ವಿವಾಹ ವಧು ವರರ ತಲೆಯ ಮೇಲೆ ಅಕ್ಷತೆ ಬದಲಾಗಿ ಹೂ ಸಿಂಚನವಾಯಿತು. ಪುರೋಹಿತರ ಮಂತ್ರವೇದ ಘೋಷಗಳ ಬದಲಾಗಿ ಪ್ರತಿಜ್ಞಾ ವಚನ ಬೋಧನೆ ಮಾಡಲಾಯಿತು. ಕಾಲಮಾನವನ್ನೂ ನೋಡಲಿಲ್ಲ.

ವಿವಾಹದ ಬಳಿಕ ಎಲ್ಲ ವಧುವರರಿಗೆ ಹೂ, ಹಣ್ಣುಗಳ ಸಸಿಗಳನ್ನು ಕೊಡುಗೆಯಾಗಿ ನೀಡಲಾಯಿತು.

ಪಟ್ಟಣದ ಹಳೇ ಊರಿನ ಸಮುದಾಯ ಭವನದಲ್ಲಿ ಡಿಸೆಂಬರ್ 29, 2019 ರಂದು ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನಾಚರಣೆ ಅಂಗವಾಗಿ ದೇವದಾಸಿ ಮಹಿಳೆಯರ ವಿಮೋಚನಾ ಸಂಘ ಮತ್ತು ಜ್ಯೋತಿಬಸು ಸ್ಮಾರಕ ಸಾಮಾಜಿಕ ಶಿಕ್ಷಣ ದತ್ತಿಯಿಂದ ಹಮ್ಮಿಕೊಂಡಿದ್ದ ಮೂರನೇ ವರ್ಷದ ಸರಳ ಸಾಮೂಹಿಕ ವಿವಾಹದಲ್ಲಿ ನಡೆಯಿತು.

ವಿವಾಹದಲ್ಲಿ 13 ಜೋಡಿ ವಧು ವರರು ದಾಂಪತ್ಯಕ್ಕೆ ಕಾಲಿರಿಸಿದರು. ಇವರಲ್ಲಿ ಒಂದು ಜೋಡಿ ಅಂತರ ಧರ್ಮೀಯರಾಗಿದ್ದು ವಿಶೇಷವಾಗಿತ್ತು. ಆಲವು ಗ್ರಾಮದ ಆಯೇಷಾ ಬೇಗಂ, ಪಟ್ಟಣದ ಪರಿಶಿಷ್ಟ ಜಾತಿಯ ಅಭಿಷೇಕ್ ಅವರನ್ನು ವಿವಾಹವಾದರು. ಇನ್ನುಳಿದಂತೆ 12 ಜೋಡಿ ವಧುವರರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದರು.



ಸಂಡೂರಿನ ಪ್ರಭು ಸ್ವಾಮೀಜಿ ವಧು, ವರರಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ’ನಾವಿಂದು ದಾಂಪತ್ಯಕ್ಕೆ ಜೀವನಕ್ಕೆ ಅಡಿ ಇಡುತ್ತಿದ್ದೇವೆ ಜೀವನವು ಸುಖ, ದುಃಖಗಳ ಸಂಗಮ ಎಂದು ಅರಿತು ಸಮಾನವಾಗಿ ಸ್ವೀಕರಿಸುತ್ತೇವೆ. ಸತಿಪತಿಗಳ ನಡುವಿನ ಸಾಮರಸ್ಯವೇ ಸಂಸಾರದ ಗುಟ್ಟು ಎಂದು ತಿಳಿದು ನಡೆಯುತ್ತೇವೆ. “ಒಂದೇ ಮಗು, ಮನೆ ತುಂಬಾ ನಗು’ ಎನ್ನುವುದನ್ನು ಅರಿತು ಬಾಳುತ್ತೇವೆ. ನಮಗೆ ಜನಿಸಿದ ಮಗುವಿಗೆ ಉತ್ತಮ ಸನ್ನದು, ಸಂಸ್ಕಾರ ಹಾಗೂ ಶಿಕ್ಷಣವನ್ನು ನೀಡಿ ಉತ್ತಮ ವ್ಯಕ್ತಿಯನ್ನಾಗಿ ಮಾಡುತ್ತೇವೆಂದು ಗುರುಗಳ ಮತ್ತು ನಿಮ್ಮೆಲ್ಲರ ಸಮಕ್ಷಮದಲ್ಲಿ ಪ್ರತಿಜ್ಞೆ ಮಾಡುತ್ತೇವೆ’ ಎಂದು ಹೇಳಿದಾಕ್ಷಣ ಮಾಂಗಲ್ಯ ಧಾರಣೆ ನಡೆಯಿತು. ಕೇವಲ 30 ನಿಮಿಷದಲ್ಲಿ ವಿವಾಹ ಪ್ರಕ್ರಿಯೆ ಮುಗಿದು ಹೋಗಿತ್ತು.

ವಧು ವರರಿದ್ದ ಸ್ಥಳಕ್ಕೆ ಬಂದ ಪ್ರಭು ಸ್ವಾಮೀಜಿ, ತಹಶೀಲ್ದಾರ್ ಆಶಪ್ಪ ಪೂಜಾರಿ, ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ಎಚ್. ವಿಶ್ವನಾಥ, ಲೇಖಕಿ ಸುಧಾ ಚಿದಾನಂದಗೌಡ, ಹುರುಕಡ್ಡಿ ಶಿವಕುಮಾರ್ ಹೂ ಮತ್ತು ಹಣ್ಣಿನ ಸಸಿಗಳನ್ನು ನೀಡಿ ಶುಭ ಹಾರೈಸಿದರು. ಇವುಗಳನ್ನು ಮನೆಯ ಮುಂದೆ ಜತನ ಮಾಡುವಂತೆ ತಿಳಿಸಿದರು. ಸಿಹಿ ಊಟದ ವ್ಯವಸ್ಥೆ ಮಾಡಲಾಗಿತ್ತು.

ಸಂಘದ ರಾಜ್ಯ ಗೌರವ ಅಧ್ಯಕ್ಷ ಯು. ಬಸವರಾಜ, ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ. ಮಾಳಮ್ಮ, ಸಿಐಟಿಯು ರಾಜ್ಯ ಉಪಾಧ್ಯಕ್ಷ ಆರ್. ಎಸ್. ಬಸವರಾಜ, ಕಾರ್ಯದರ್ಶಿ ಎಸ್. ಜಗನ್ನಾಥ, ಸಾಹಿತಿ ಹುರಕಡ್ಡಿ ಶಿವಕುಮಾರ್, ಪ್ರಗತಿಪರ ರೈತ ಆಂಜನೇಯ ರೆಡ್ಡಿ, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಜಿ. ಸರೋಜಾ, ಮೈಲಮ್ಮ ಚಾಂಡ್‌ಬೀ, ವಿರೂಪಾಕ್ಷಪ್ಪ, ಶಿಕ್ಷಕ ರೆಡ್ಡಿ ನಾಯ್ಕ ಇದ್ದರು. ●

‘ದೇಶದ ಮೊದಲ ಶಿಕ್ಷಕಿಯನ್ನು ಕೃತಜ್ಞತೆಯಿಂದ ನೆನೆಯೋಣ’



ಡಾ. ನಟರಾಜ್ ಹುಳಿಯಾರ್

ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿ ಭಾರತದಲ್ಲಿ ನಡೆದ ಸಿಪಾಯಿ ದಂಗೆಯ ಬಗ್ಗೆ ಚರಿತ್ರಕಾರರು ಮತ್ತೆ ಮತ್ತೆ ಬರೆಯುತ್ತಾರೆ. ಆದರೆ ಅದೇ ದಶಕದಲ್ಲಿ ಭಾರತದಲ್ಲಿ ನಡೆದ ವಿಶಿಷ್ಟ ಶಿಕ್ಷಣಕ್ರಾಂತಿಯ ಬಗ್ಗೆ ಚರಿತ್ರಕಾರರು ಮಾತಾಡಿದ್ದು ಕಡಿಮೆ. ಆ ಶತಮಾನದ ಐವತ್ತರ ದಶಕದಲ್ಲಿ ಹುಡುಗಿಯರನ್ನು ಶಾಲೆಗೆ ಕಳಿಸುವ ಬಗ್ಗೆ ಇಂಗ್ಲೆಂಡಿನ ಸಮಾಜವಿನ್ನೂ ಹಿಂದೆ ಮುಂದೆ ನೋಡುತ್ತಿತ್ತು.

ಆದರೆ ಆ ಕಾಲಕ್ಕಾಗಲೇ ಭಾರತದ ಮುಖ್ಯ ಸುಧಾರಕರಾದ ಮಹಾತ್ಮ ಜೋತಿಬಾ ಫುಲೆ ಅವರು ಸ್ವಾತಂತ್ರ್ಯ ಹೋರಾಟವನ್ನು ಸಾಮಾಜಿಕ ಸ್ವಾತಂತ್ರ್ಯದ ಹೋರಾಟವನ್ನಾಗಿ ಪರಿವರ್ತಿಸತೊಡಗಿದ್ದರು. ಅದೇ ಆಗ ಹದಿಹರೆಯಕ್ಕೆ ಕಾಲಿಡುತ್ತಿದ್ದ ಪತ್ನಿ ಸಾವಿತ್ರಿ ಬಾಯಿಗೆ ಅಕ್ಷರ ಕಲಿಸಲು ಶುರು ಮಾಡಿದ್ದರು.

ಹೀಗೆ ಆಕಸ್ಮಿಕವಾಗಿ ತನ್ನ ‘ಎದೆಗೆ ಬಿದ್ದ ಅಕ್ಷರ’ದ ಫಲವಾಗಿ ಸಾವಿತ್ರಿ ಬಾಯಿ ಅವರು, 1851ರಲ್ಲಿ ಜೋತಿಬಾ ಫುಲೆ ಎಲ್ಲ ಜಾತಿಯ ಹುಡುಗಿಯರಿಗಾಗಿ ತೆರೆದ ಮೊದಲ ಶಾಲೆಯಲ್ಲಿ ಭಾರತದ ಮೊದಲ ಶಿಕ್ಷಕಿಯಾಗುತ್ತಾರೆ. ಮಾವ ಈ ಕೆಲಸ ಬಿಡುವಂತೆ ಸಾವಿತ್ರಿ ಅವರಿಗೆ ತಾಕೀತು ಮಾಡುತ್ತಾರೆ. ಜೋತಿಬಾಗೆ ಶಾಲೆ ಮುಚ್ಚಲು ಹೇಳುತ್ತಾರೆ.

ಹುಡುಗಿಯರು ಅಕ್ಷರ ಕಲಿತರೆ ಗಂಡಂದಿರು ಸಾಯುತ್ತಾರೆ ಎಂದು ಸನಾತನಿಗಳು ಎಲ್ಲೆಡೆ ಪತ್ರ ಬರೆದು ಹೆದರಿಸುತ್ತಾರೆ. ಸಾವಿತ್ರಿ ಹಾಗೂ ಜೋತಿಬಾ ಮನೆ ಬಿಟ್ಟು ಹೊರಬರಬೇಕಾದ ಸನ್ನಿವೇಶ ನಿರ್ಮಾಣವಾಗುತ್ತದೆ. ಸಾವಿತ್ರಿ ಶಾಲೆಗೆ ಹೊರಟರೆ, ಸಾಂಪ್ರದಾಯಿಕರು ಆಕೆಯ ಮೇಲೆ ಸೆಗಣಿ ಎರಚುತ್ತಾರೆ. ಅದಕ್ಕೆಲ್ಲ ಜಗ್ಗದ ಆಕೆ, ಫುಲೆ ಅವರ ಸಲಹೆಯಂತೆ ಶಾಲೆಗೆ ಹೋಗುವಾಗ ಹಳೆಯ ಸೀರೆ ಉಟ್ಟು, ಶಾಲೆ ತಲುಪಿದ ಮೇಲೆ ಹೊಸ ಸೀರೆ ಉಟ್ಟು ಹುಡುಗಿಯರಿಗೆ ಪಾಠ ಹೇಳಿಕೊಡುತ್ತಾರೆ.

ಆ ಶಾಲೆಯಲ್ಲಿ ಕಲಿತ ಮೊದಲ ಮಾತಂಗ ಜಾತಿಯ ಧನ್ಯಾಬಾಯಿ ಎಂಬ ಹುಡುಗಿ 1855ರಲ್ಲಿ ಮರಾಠಿ ಪತ್ರಿಕೆಯೊಂದರಲ್ಲಿ ಬರೆದ ಬರಹ ಈ ಮೌನಕ್ರಾಂತಿಯ ಚಾರಿತ್ರಿಕ ಮಹತ್ವಕ್ಕೆ ಸಾಕ್ಷಿಯಂತಿದೆ. ‘ನಾವು ಮನೆಗಳ ಕೆಳಗೆ ಹೂತು ಹೋಗಿದ್ದೆವು. ಹಿಂದೆ ನಮಗೆಲ್ಲ ಓದಲು ಬರೆಯಲು ಬಿಡುತ್ತಿರಲಿಲ್ಲ. ಆದರೆ ಈಗ ಯಾರೂ ನಮ್ಮನ್ನು ಬೈಯಲಾರರು. ಜೀವಂತ ಸುಡಲಾರರು. ನಾವೀಗ ಬಟ್ಟೆ ತೊಡಬಹುದು; ಪೇಟೆಗೆ ಹೋಗಬಹುದು’.

ಸಾವಿತ್ರಿ ಬಾಯಿ ಅವರ ಅಕ್ಷರಕ್ರಾಂತಿ ಇಲ್ಲಿಗೇ ನಿಲ್ಲುವಂತಿರಲಿಲ್ಲ. ಶಿಕ್ಷಕಿಯಾದ ಮರುವರ್ಷವೇ ‘ಮಹಿಳಾ ಸೇವಾಮಂಡಳ’ ರೂಪಿಸಿದರು. ಜೋತಿಬಾ ಮತ್ತು ಸಾವಿತ್ರಿ ಆ ಮೂರು?ನಾಲ್ಕು ವರ್ಷದ ಅವಧಿಯಲ್ಲಿ ಶೂದ್ರರು, ದಲಿತರಿಗಾಗಿ ಹದಿನೆಂಟು ಶಾಲೆಗಳನ್ನು ತೆರೆದರು. ಈ ಪ್ರಯತ್ನಗಳಿಗೆ ವಿರೋಧಗಳೂ ಮುಂದುವರಿದವು. ‘ಅಸ್ಪೃಶ್ಯರಿಗೆ ವಿದ್ಯೆ ಕಲಿಸಿ ನೀನೂ ನಿನ್ನ ಪತಿಯೂ ಸಮಾಜದಲ್ಲಿ ಅಸ್ಪೃಶ್ಯರಾಗಿದ್ದೀರಿ’ ಎಂದು ಸಾವಿತ್ರಿಯ ಅಣ್ಣನೇ ಖಂಡಿಸತೊಡಗಿದ. ಆಗ ಸಾವಿತ್ರಿ, ‘ನಾಗರಹಬ್ಬದ ದಿನ ವಿಷ ಕಕ್ಕುವ ಹಾವುಗಳನ್ನು ಹಿಡಿದು ಹಾಲೆರೆದು ಪೂಜಿಸುತ್ತೀರಿ; ಆದರೆ ಮಹರ್ ಹಾಗೂ ಮಾಂಗ್ ಜಾತಿಯ ಮನುಷ್ಯರನ್ನು ಅಸ್ಪೃಶ್ಯರಾಗಿಸಿದ್ದೀರಲ್ಲ?’ ಎಂದು ಅವನ ಕಣ್ಣು ತೆರೆಸಲೆತ್ನಿಸಿದರು. ಸಾವಿತ್ರಿ ಬಾಯಿ ಈ ಬಗ್ಗೆ ಜೋತಿಬಾಗೆ ಬರೆಯುತ್ತಾ ‘ಎಂಥ ಕಷ್ಟ ಬಂದರೂ ನಾವು ನಮ್ಮ ಹಾದಿಯಿಂದ ಕದಲಬಾರದು; ನಾಳೆ ನಮ್ಮದು’ ಎಂದದ್ದು ಇವತ್ತಿಗೂ ನನ್ನಂಥವರಲ್ಲಿ ಸ್ಫೂರ್ತಿ ಹುಟ್ಟಿಸುತ್ತದೆ.

ಭಾರತದ ಪ್ರಥಮ ಮುದ್ರಿತ ಕವನ ಸಂಕಲನ ಎನ್ನಲಾದ ‘ಕಾವ್ಯ ಫುಲೆ’ ಸೇರಿದಂತೆ ನಾಲ್ಕು ಪುಸ್ತಕಗಳನ್ನು ಪ್ರಕಟಿಸಿದ ಸಾವಿತ್ರಿ ಬಾಯಿ, ಕಾವ್ಯವನ್ನು ಜಾತಿ ಪದ್ಧತಿ ಹಾಗೂ ಮನುಧರ್ಮಶಾಸ್ತ್ರದ ವಿರುದ್ಧ ಅಸ್ತ್ರವಾಗಿ ಬಳಸಿದರು.ತಮ್ಮ ಮನೆಯ ಬಾವಿಯನ್ನು ದಲಿತರಿಗೂ ತೆರೆದರು.

1860ರಲ್ಲಿ ವಿಧವೆಯರ ತಲೆ ಬೋಳಿಸುವುದನ್ನು ವಿರೋಧಿಸಲು ಕ್ಷೌರಿಕರನ್ನು ಸಂಘಟಿಸಿದರು. ದಲಿತ ಹುಡುಗಿ ಮತ್ತು ಬ್ರಾಹ್ಮಣ ಹುಡುಗನ ಪ್ರೇಮವಿವಾಹಕ್ಕೆ ಇಂಬಾಗಿ ನಿಂತರು. ವಿಧವಾವಿವಾಹ ಕುರಿತು ಎಲ್ಲೆಡೆ ಅರಿವು ಮೂಡಿಸಿದರು. ವೇಶ್ಯೆಯರ, ವಿಧವೆಯರ ಮಕ್ಕಳು ಅವರಲ್ಲಿ ಆಸರೆ ಪಡೆದರು. ಜೋತಿಬಾ ನಿರ್ಗಮನದ ನಂತರ ಸತ್ಯಶೋಧಕ ಸಮಾಜದ ಸಾಮಾಜಿಕ ಚಳವಳಿಯನ್ನೂ ಮುಂದುವರಿಸಿದ ಸಾವಿತ್ರಿ ಬಾಯಿ, ಪ್ಲೇಗಿಗೆ ತುತ್ತಾದ ರೋಗಿಗಳ ಆರೈಕೆ ಮಾಡುತ್ತಿರುವಾಗ ಪ್ಲೇಗಿನ ಸೋಂಕು ತಗುಲಿ 10 ಮಾರ್ಚ್ 1897ರಂದು ತೀರಿಕೊಂಡರು.

ಸಾವಿತ್ರಿ ಬಾಯಿ ಮತ್ತು ಜೋತಿಬಾ ಅವರ ಶಿಕ್ಷಣದ ಕೇಂದ್ರದಲ್ಲಿ ಮಹಿಳೆ ಹಾಗೂ ಶೂದ್ರಾತಿಶೂದ್ರರಿದ್ದರು. ಸಂಸ್ಕೃತಿಯ ಬದಲಾವಣೆಗೆ ಸ್ತ್ರೀಯರ ಮಾನಸಿಕ ಪರಿವರ್ತನೆ ಅತ್ಯಂತ ಮುಖ್ಯ ಎಂಬ ಬಗ್ಗೆ ಇಬ್ಬರಿಗೂ ಸ್ಪಷ್ಟತೆಯಿತ್ತು. ಇಂಥದೊಂದು ಮಹತ್ವದ ಕ್ರಾಂತಿ ಗಂಡಹೆಂಡತಿ ನಡುವಣ ಅದ್ಭುತ ಸಂಬಂಧದ ಮೂಲಕ ಆದದ್ದು ಕೂಡ ಗಮನಾರ್ಹ. ಮುಂದೊಮ್ಮೆ ಅಂಬೇಡ್ಕರ್ ಅವರು ಬುದ್ಧ, ಕಬೀರರ ಜೊತೆಗೆ ಜೋತಿಬಾ ಫುಲೆ ಅವರನ್ನೂ ತಮ್ಮ ಗುರುವೆಂದು ಕರೆದದ್ದು ಆಶ್ಚರ್ಯವಲ್ಲ. ಬಾಬಾಸಾಹೇಬರು ಸಮಾಜವನ್ನು, ಶಿಕ್ಷಣದ ವ್ಯಾಪ್ತಿಯನ್ನು ಗ್ರಹಿಸಿದ ರೀತಿಯಲ್ಲೂ ಜೋತಿಬಾ ಚಿಂತನೆಗಳ ಪ್ರೇರಣೆಗಳಿದ್ದವು.

ಈಚಿನ ವರ್ಷಗಳಲ್ಲಿ ಕರ್ನಾಟಕದಲ್ಲಿ ದಲಿತ ಸಂಘಟನೆಗಳು ಹಾಗೂ ಬಹುಜನ ಸಮಾಜ ಪಕ್ಷ, ಸಾವಿತ್ರಿ ಬಾಯಿ ಹಾಗೂ ಜೋತಿಬಾ ಫುಲೆ ಅವರನ್ನು ಆಗಾಗ್ಗೆ ನೆನೆಸಿಕೊಳ್ಳುತ್ತಾ ಬಂದಿವೆ. ಕಳೆದ ಹದಿನೈದು ವರ್ಷಗಳಿಂದ ಕರ್ನಾಟಕ ಸರ್ಕಾರ, ಬಾಲಕಿಯರಿಗೆ ಹದಿನೆಂಟು ವರ್ಷವಾಗುವವರೆಗೆ ಒದಗಿಸುತ್ತಿರುವ ಉಚಿತ ಶಿಕ್ಷಣ ಯೋಜನೆಯ ಹಿಂದೆ ಸಾವಿತ್ರಿ ಬಾಯಿ ಅಂತಹವರ ಸ್ಫೂರ್ತಿಯೂ ಇದೆ.

ಕನ್ನಡದಲ್ಲಿ ಸಮತಾ ದೇಶಮಾನೆ ಹಾಗೂ ಇನ್ನಿತರರ ಕೆಲವು ಪುಸ್ತಕಗಳಲ್ಲಿ, ಸಂಶೋಧನಾ ಪ್ರಬಂಧಗಳಲ್ಲಿ ಸಾವಿತ್ರಿ ಬಾಯಿ ಅವರ ಮಹತ್ವವನ್ನು ಚರ್ಚಿಸಲಾಗಿದೆ. ಈ ಅಧ್ಯಯನಗಳು ಇನ್ನೂ ಆಳವಾಗಿ ನಡೆದು ಸಾವಿತ್ರಿ ಬಾಯಿ ಅವರ ಜೀವನದ ಸಾರ್ಥಕತೆ ನಮ್ಮನ್ನು ತಟ್ಟಬೇಕಾಗಿದೆ. ಭಾರತದ ಸ್ತ್ರೀವಾದವನ್ನು ಸಾವಿತ್ರಿ ಬಾಯಿ ಅಂತಹವರ ಹೋರಾಟದ ತಳಹದಿಯ ಮೇಲೆ ಕಟ್ಟಿ ಹೊಸ ರೀತಿಯ ಸ್ತ್ರೀವಾದವನ್ನು ರೂಪಿಸಿಕೊಳ್ಳುವ ಅಗತ್ಯವೂ ನಮ್ಮೆದುರಿಗಿದೆ.

ಇಂದು ಸಾವಿತ್ರಿ ಬಾಯಿ ಅವರ ಇಡೀ ಶಿಕ್ಷಣ ಪ್ರಯಾಣ ಹಲವು ಸಂದೇಶಗಳನ್ನು ಹೊರಡಿಸುತ್ತದೆ. ಭಾರತದಲ್ಲಿ ಇದೀಗ ಅಕ್ಷರ ಕಲಿಯಹೊರಟಿರುವ ಮೊದಲ ತಲೆಮಾರಿನ ಹುಡುಗ, ಹುಡುಗಿಯರಿದ್ದಾರೆ. ಅಂಥವರಿಗೆ ಸಾವಿತ್ರಿ ಬಾಯಿ ಅವರ ರೀತಿಯ ಬದ್ಧತೆಯಿಂದ ವಿದ್ಯೆ ಕಲಿಸಬೇಕಾದ ಜರೂರು ನಮ್ಮೆದುರಿಗಿದೆ. ಈಗ ಸರ್ಕಾರಿ ವಲಯದಲ್ಲಿ ಪ್ರೈಮರಿ ಶಿಕ್ಷಣದ ಅರ್ಧ ಭಾಗ ಹಾಗೂ ಖಾಸಗಿ ಶಿಕ್ಷಣದಲ್ಲಿ ಬಹುತೇಕ ಭಾಗ ಬೋಧನೆಯ ಜವಾಬ್ದಾರಿ ಮಹಿಳೆಯರ ಕೈಯಲ್ಲಿದೆ.

ಈ ಮಹತ್ವದ ಅಂಶವನ್ನು ಶಿಕ್ಷಣವನ್ನು ಸಮಾಜ ಬದಲಾವಣೆಯ ಸಾಧನವನ್ನಾಗಿ ಕಾಣುವ ಎಲ್ಲರೂ ಆಳವಾಗಿ ಗ್ರಹಿಸಬೇಕು. ಈ ಶಿಕ್ಷಕಿಯರು ನಿಜವಾದ ಅರ್ಥದಲ್ಲಿ ಶಿಕ್ಷಣ ಪಡೆದು ಪಾಠ ಮಾಡತೊಡಗಿದರೆ, ಮಕ್ಕಳ ತಲೆಯಲ್ಲಿರುವ ಹಲವು ವಿಕಾರಗಳನ್ನು ಹೊಡೆದೋಡಿಸಬಹುದು. ನಮ್ಮ ಪ್ರೈಮರಿ ಶಿಕ್ಷಕ ಶಿಕ್ಷಕಿಯರಿಂದ ಹಿಡಿದು ವಿಶ್ವವಿದ್ಯಾಲಯಗಳವರೆಗೂ ಇರುವ ಶಿಕ್ಷಕವರ್ಗ ಕ್ರಾಂತಿಜ್ಯೋತಿ ಸಾವಿತ್ರಿ ಬಾಯಿ ಅವರ ಜೀವನದ ಎಳೆಯಿಂದ ಸ್ವಲ್ಪವಾದರೂ ಸ್ಫೂರ್ತಿ ಪಡೆದರೆ ನಮ್ಮ ಶಿಕ್ಷಣಲೋಕದ ಬಗೆಬಗೆಯ ಬೇಜವಾಬ್ದಾರಿತನಗಳು ಎಷ್ಟೋ ಕಡಿಮೆಯಾಗಬಲ್ಲವು.

ಈ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರ ಹಾಗೂ ಭಾರತ ಸರ್ಕಾರ ಸಾವಿತ್ರಿ ಬಾಯಿ ಫುಲೆ ಅವರ ಜನ್ಮದಿನವನ್ನು ಶಿಕ್ಷಕಿಯರ ದಿನಾಚರಣೆಯನ್ನಾಗಿ ಘೋಷಿಸಿದರೆ ಅರ್ಥಪೂರ್ಣವಾಗಬಲ್ಲದು. ಆ ನೆಪದಲ್ಲಾದರೂ ಭಾರತದ ಈ ಚಾರಿತ್ರಿಕ ಮಹತ್ವದ ಶಿಕ್ಷಕಿಯನ್ನು ನೆನೆದು, ನಮ್ಮ ಸಾಮಾಜಿಕ ಸಂದರ್ಭವನ್ನು ಗಮನದಲ್ಲಿಟ್ಟುಕೊಂಡು ಅವರು ರೂಪಿಸಲೆತ್ನಿಸಿದ ಶಿಕ್ಷಣದ ಅರ್ಥವನ್ನು ಇನ್ನಷ್ಟು ವಿಸ್ತರಿಸಬಹುದು.

ಕೃಪೆ: ಪ್ರಜಾವಾಣಿ

ಕಾರ್ಮಿಕರ ಹಕ್ಕನ್ನು ದಮನ ಮಾಡುತ್ತಿರುವ ಕೇಂದ್ರದ ವಿರುದ್ಧ ಉಗ್ರ ಹೋರಾಟ : ಎಸ್. ವರಲಕ್ಷ್ಮಿ



ಕೇಂದ್ರ ಸರ್ಕಾರದ ಮೋಟರ್ ವಾಹನ ಕಾಯ್ದೆ ತಿದ್ದುಪಡಿ ವಿರುದ್ಧ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಸಿಐಟಿಯು ರಾಜ್ಯ ಸಮಿತಿಯ ಅಧ್ಯಕ್ಷೆ ಎಸ್. ವರಲಕ್ಷ್ಮಿ ಎಚ್ಚರಿಸಿದರು. ಡಿಸೆಂಬರ್ 29, 2019 ಹೊಸಪೇಟೆಯ ಅಂಬೇಡ್ಕರ ವೃತ್ತದಲ್ಲಿ ಫೆಡರೇಶನ್ ಆಫ್ ಕರ್ನಾಟಕ ಆಟೋರಿಕ್ಷಾ ಡ್ರೈವರ್ ಯೂನಿಯನ್ ಹಮ್ಮಿಕೊಂಡಿದ್ದ 2ನೇ ರಾಜ್ಯ ಸಮ್ಮೇಳನದ ಬಹಿರಂಗ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾನಾ ರೂಪದಲ್ಲಿ ಸರಕಾರಗಳಿಗೆ ಆಟೋ ಚಾಲಕರು ತೆರಿಗೆ ಪಾವತಿಸುತ್ತಿದ್ದರೂ ಅಭಿವೃದ್ಧಿ ಕಡೆ ಗಮನ ನೀಡುತ್ತಿಲ್ಲ. ಈ ನಡುವೆ ಹಳೆಯ ಆಟೋಗಳನ್ನು ಓಡಿಸುವುದಕ್ಕೆ ಪರವಾನಿಗೆ ನೀಡುತ್ತಿಲ್ಲ. ಹಾಗಾಗಿ ಹೊಸ ಆಟೋ ಖರೀದಿಗೆ ಸಬ್ಸಿಡಿ ಸಾಲ ಸೌಲಭ್ಯವನ್ನು ನೀಡಬೇಕು. ಗ್ಯಾಸ್ ಬೆಲೆ ಏರಿಕೆಯಿಂದ ಆಟೋ ಚಾಲಕರು ಕಂಗಾಲಾಗಿ ಹೋಗಿದ್ದಾರೆ. ದುಡಿದ ಹಣ ಗ್ಯಾಸ್‌ಗೆ ಹೋಗುತ್ತಿದ್ದು ಸರಕಾರ ಸಬ್ಸಿಡಿ ದರದಲ್ಲಿ ಗ್ಯಾಸ್ ಒದಗಿಸಬೇಕು ಎಂದರು. ವಾಹನ ಕಾಯ್ದೆ ತಿದ್ದುಪಡಿಯಿಂದ ಕೇಂದ್ರ ಸರ್ಕಾರ ಕಾರ್ಮಿಕರ ಹಕ್ಕನ್ನು ದಮನ ಮಾಡುತ್ತಿದೆ. ಹೀಗಾಗಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡಲಾಗುವುದು ಎಂದರು.


ಕಾಯ್ದೆಯಲ್ಲಿ ಹತ್ತು ಪಟ್ಟು ದಂಡವನ್ನು ತೆರಬೇಕಾಗಿರುವುದು ಚಾಲಕರಿಗೆ ಹೊರೆಯಾಗಲಿದೆ. ಆಟೋ ಚಾಲಕರ ಹಿತವನ್ನು ಕೇಂದ್ರ ಸರಕಾರ ಕಾಪಾಡುತ್ತಿಲ್ಲ, ಆಟೋ ಚಾಲಕರ ಕಲ್ಯಾಣ ಮಂಡಳಿ ಸ್ಥಾಪನೆಗಾಗಿ ಅನೇಕ ವರ್ಷಗಳಿಂದ ಬೇಡಿಕೆ ಇದೆ. ಆದರೆ, ಅದು ಅನುಷ್ಠಾನಗೊಳ್ಳುತ್ತಿಲ್ಲ, ಅದು ಭರವಸೆಯಾಗಿ ಉಳಿದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸಿ.ಐ.ಟಿ.ಯು ರಾಜ್ಯ ಸಮಿತಿ ಉಪಾಧ್ಯಕ್ಷ ಆರ್.ಎಸ್. ಬಸವರಾಜ ಮಾತನಾಡಿ, ಆಟೋ ಚಾಲಕರು ಒಗ್ಗಟ್ಟು ಪ್ರದರ್ಶಿಸುವುದರಿಂದ ಹಕ್ಕುಗಳನ್ನು ಪಡೆದು ಕೊಳ್ಳಬಹುದು. ಕೇಂದ್ರ ಸರಕಾರ ಎನ್‌ಆರ್‌ಸಿ ಹಾಗೂ ಸಿಎಎ ಧರ್ಮಾಧಾರಿತ ಆಧಾರದ ಮೇಲೆ ಅನುಷ್ಠಾನ ಮಾಡಲು ಮುಂದಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಇದಕ್ಕೂ ಮುನ್ನ ಗಾಂಧಿ ಚೌಕನಿಂದ ಪುಣ್ಯಮೂರ್ತಿ ವೃತ್ತ, ಬಸ್ ನಿಲ್ದಾಣ, ರೋಟರಿ ವೃತ್ತದ ಮೂಲಕ ಅಂಬೇಡ್ಕರ ವೃತ್ತದವರೆಗೆ ಮೆರವಣಿಗೆ ಮಾಡಲಾಯಿತು.

ಎಫ್.ಕೆ.ಆರ್.ಡಿ.ಯು ಅಧ್ಯಕ್ಷರಾದ ಮೀನಾಕ್ಷಿ ಸುಂದರಂ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಕಾರ್ಯದರ್ಶಿ ಕೆ.ಎಂ. ಸಂತೋಷ್, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಯು. ಬಸವರಾಜ, ಸಿ.ಐ.ಟಿ.ಯುನ ಜಿಲ್ಲಾ ಸಮಿತಿ ಅಧ್ಯಕ್ಷ ಆರ್. ಭಾಸ್ಕರ ರೆಡ್ಡಿ, ಪ್ರಧಾನ ಕಾರ್ಯದರ್ಶಿ ಜೆ. ಸತ್ಯಬಾಬು, ಮುಖಂಡರಾದ ಜಂಬಯ್ಯ ನಾಯಕ, ಕೆ. ನಾಗರತ್ನಮ್ಮ ಮತ್ತು ಇತರರು ಇದ್ದರು. ●

ಹೋರಾಟದ ಮತ್ತು ನಿರೀಕ್ಷೆಯ ಭಾವದೊಂದಿಗೆ ಹೊಸ ವರ್ಷ 2020 ಆರಂಭ

ವ್ಯಂಗ್ಯಚಿತ್ರ: ಸಾತ್ವಿಕ್ ಗಡೆ,
ದಿ ಹಿಂದು



ಸಂವಿಧಾನ ಮತ್ತು ನಾಗರಿಕರ ಹಕ್ಕುಗಳ ಮೇಲೆ ಆಕ್ರಮಣಗಳನ್ನು ನಡೆಸಿ ಹಿಂದುತ್ವ ಆಳ್ವಿಕೆಯನ್ನು ಸ್ಥಾಪಿಸಲು ಮೋದಿ ಸರಕಾರ ಪ್ರಮುಖ ಹೆಜ್ಜೆಗಳನ್ನಿಟ್ಟಿರುವುದನ್ನು ಕಂಡ 2019ರ ವರ್ಷ ಒಂದು ಮಹತ್ವದ ಕ್ಷಣದಲ್ಲಿ ಅಂತ್ಯಗೊಂಡಿದೆ–ಪ್ರಜಾಪ್ರಭುತ್ವ ಮತ್ತು ಸಂವಿಧಾನದ ರಕ್ಷಣೆಯಲ್ಲಿ ಜನಗಳ ಎದುರೇಟು ಆರಂಭವಾಗಿದೆ. ಹೊಸ ವರ್ಷ ಜನವರಿ 8ರಂದು ಇನ್ನೊಂದು ಬಲಿಷ್ಟ ಪ್ರತಿಭಟನಾ ಕಾರ್ಯಾಚರಣೆಯನ್ನು ಕಾಣಲಿದೆ. ಹೊಸ ವರ್ಷ 2020 ಒಂದು ಹೋರಾಟದ ಮತ್ತು ನಿರೀಕ್ಷೆಯ ಭಾವದೊಂದಿಗೆ ಆರಂಭವಾಗುತ್ತಿದೆ. ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ದುಡಿಯುವ ಜನಗಳ ಹಕ್ಕುಗಳ ರಕ್ಷಣೆಯ ಹೋರಾಟ ಸಾಗಿದೆ. ಇದನ್ನು ಮುಂದೊಯ್ಯುವ ಪ್ರತಿಜ್ಞೆ ಮಾಡೋಣ.

ಪ್ರಕಾಶ ಕಾರಟ್



ಈಗ ಕೊನೆಗೊಂಡಿರುವ ವರ್ಷ 2019 ದೇಶದಲ್ಲಿ ಒಂದು ಪೂರ್ಣ ಪ್ರಮಾಣದ ಹಿಂದುತ್ವ ಸರ್ವಾಧಿಕಾರಶಾಹಿ ಆಳ್ವಿಕೆಯ ಹೇರಿಕೆಯನ್ನು, ಒಂದು ತ್ವರಿತವಾಗಿ ಹದಗೆಡುತ್ತಿರುವ ಆರ್ಥಿಕ ಸನ್ನಿವೇಶವನ್ನು ಮತ್ತು ಸಂವಿಧಾನದ ಮೇಲೆ ಹಾಗೂ ನಾಗರಿಕರ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಸತತ ಆಘಾತಗಳನ್ನು ಕಂಡಿತು. ವರ್ಷದ ಕೊನೆಯ ವೇಳೆಗೆ ಸಂವಿಧಾನದ ರಕ್ಷಣೆಗೆ ಮತ್ತು ಜಾತ್ಯತೀತ–ಪ್ರಜಾಪ್ರಭುತ್ವದ ಮೇಲೆ ಆಕ್ರಮಣಗಳನ್ನು ವಿರೋಧಿಸಿ ಒಂದು ಸ್ವಯಂಸ್ಫೂರ್ತಿಯ ಮತ್ತು ಬಲಿಷ್ಟ ಪ್ರತಿಭಟನಾ ಆಂದೋಲನವನ್ನೂ ಕಂಡಿತು.

ಮೇ 2019ರ ಲೋಕಸಭಾ ಚುನಾವಣೆಯನ್ನು ಬಿಜೆಪಿ ಫುಲ್ವಾಮ ಭಯೋತ್ಪಾದಕ ದಾಳಿ ಮತ್ತು ಅದಕ್ಕೆ ಪ್ರತೀಕಾರವಾಗಿ ಬಾಲಕೋಟ್ ಪ್ರಹಾರದ ಹಿನ್ನೆಲೆಯಲ್ಲಿ ಸೃಷ್ಟಿಸಿದ ಒಂದು "ರಾಷ್ಟ್ರವಾದಿ" ಪ್ರಚಾರದ ಬೆನ್ನೇರಿ ಗೆದ್ದುಕೊಂಡಿತು. ಹೆಚ್ಚಿನ ಬಹುಮತದಿಂದ ಅಧಿಕಾರಕ್ಕೆ ಮರಳಿದ ಮೋದಿ ಸರಕಾರ ತನ್ನ ಹಿಂದುತ್ವ ಅಜೆಂಡಾವನ್ನು ಹೇರಲು ತ್ವರಿತ ಕ್ರಮಗಳನ್ನು ಕೈಗೊಂಡದ್ದನ್ನು ನೋಡಿದೆವು.

2019ರ ಉಳಿದ ಏಳು ತಿಂಗಳಲ್ಲಿ ಕಲಮು 370ನ್ನು ನಿಷ್ಕ್ರಿಯಗೊಳಿಸಲಾಯಿತು ಹಾಗೂ ಜಮ್ಮು ಮತ್ತು ಕಾಶ್ಮೀರವನ್ನು ಒಂದು ರಾಜ್ಯವಾಗಿ ಕಳಚಿ ಹಾಕಿದ್ದು ಕಾಣ ಬಂತು; ಬಾಬ್ರಿ ಮಸೀದಿ ಇದ್ದ ಸ್ಥಳದಲ್ಲಿ ಒಂದು ರಾಮಮಂದಿರ ಕಟ್ಟುವ ಪರವಾದ ಸುಪ್ರಿಂ ಕೋರ್ಟ್ ತೀರ್ಪು ಬಂತು; ಸಂಸತ್ತು ಪೌರತ್ವ ತಿದ್ದುಪಡಿ ಕಾಯ್ದೆಯನ್ನು ಅಂಗೀಕರಿಸಿತು. ಇವು ಮೂರೂ ಹಿಂದುತ್ವ ಅಜೆಂಡಾದ ಪ್ರಮುಖ ಹೆಜ್ಜೆಗಳು.

ಸಂವಿಧಾನಕ್ಕೆ ಮೋಸ ಮಾಡಿ ಮತ್ತು ಒಕ್ಕೂಟ ನೀತಿಯನ್ನು ಉಲ್ಲಂಘಿಸಿ ಕಲಮು 370ನ್ನು ನಿಷ್ಪ್ರಯೋಜಕಗೊಳಿಸಲಾಯಿತು ಹಾಗೂ ಜಮ್ಮು ಮತ್ತು ಕಾಶ್ಮೀರವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ಮಾಡಲಾಯಿತು. ಸಂಪೂರ್ಣ ರಾಜ್ಯದ ಬಾಯಿ ಮುಚ್ಚಿಸಲಾಯಿತು, ಕಣಿವೆಯ ನಾಗರಿಕರಿಗೆ ಅವರ ಮೂಲ ಹಕ್ಕುಗಳನ್ನೇ ವಂಚಿಸಲಾಯಿತು– ಚಲನೆಯ, ಮುಕ್ತವಾಗಿ ಮಾತಾಡುವ, ಸಭೆ ಸೇರುವ, ಅಷ್ಟೇ ಏಕೆ ಬದುಕು ಮತ್ತು ಸ್ವಾತಂತ್ರ್ಯದ ಹಕ್ಕುಗಳೂ ಇಲ್ಲದಂತೆ ಮಾಡಲಾಗಿದೆ. ನೂರಾರು ರಾಜಕೀಯ ಮುಖಂಡರನ್ನು, ಕಾರ್ಯಕರ್ತರನ್ನು ಸ್ಥಾನಬದ್ಧತೆಯಲ್ಲಿ ಇಡಲಾಗಿದೆ, ಜಗತ್ತಿನಲ್ಲೇ ಅತಿ ದೀರ್ಘ ಅವಧಿಯ ಇಂಟರ್ನೆಟ್ ಸ್ಥಬ್ಧತೆಯನ್ನು ಹೇರಲಾಗಿದೆ. ಈ ಎಲ್ಲ ಕರಾಳ ಕ್ರಮಗಳ ಹಿಂದೆ ಇರುವುದು ಭಾರತೀಯ ಒಕ್ಕೂಟದ ಏಕೈಕ ಮುಸ್ಲಿಂ ಬಹುಸಂಖ್ಯಾತ ರಾಜ್ಯದ ಅಸ್ತಿತ್ವವೇ ಇಲ್ಲದಂತೆ ಮಾಡುವ ದೃಢನಿರ್ಧಾರ.



ಅಯೋಧ್ಯಾ ವಿವಾದದ ಮೇಲೆ ಸುಪ್ರಿಂ ಕೋರ್ಟಿನ ತೀರ್ಪು ಸಂವಿಧಾನದ ಜಾತ್ಯತೀತ ನೀತಿಗೆ ಕೊಟ್ಟಿರುವ ಮತ್ತೊಂದು ಆಘಾತ. ಆ ತೀರ್ಪು, ಜಾತ್ಯತೀತತೆಯ ನಾಮ ಜಪ ಮಾಡುತ್ತಲೇ ಒಂದು ಮಾಲಕತ್ವದ ಅಹವಾಲಿನಲ್ಲಿ ನಿಜಸಂಗತಿಗಳು ಮತ್ತು ಸಾಕ್ಷ್ಯಗಳ ಆಧಾರದಲ್ಲಿ ನಿರ್ಧರಿಸುವ ಬದಲು, ಅಂತಿಮವಾಗಿ, ವಿವಾದದ ಒಂದು ಪಕ್ಷದ ನಂಬಿಕೆಗೆ ಇನ್ನೊಂದು ಪಕ್ಷದ ನಂಬಿಕೆಗಿಂತ ಆದ್ಯತೆ ಕೊಟ್ಟಿತು. ಬಹುಸಂಖ್ಯಾತವಾದದೊಂದಿಗೆ ಈ ರಾಜಿ ಸಂವಿಧಾನದ ಅಡಿಯಲ್ಲಿರುವ ಸಂಸ್ಥೆಗಳನ್ನು ಎಷ್ಟರ ವರೆಗೆ ಶಿಥಿಲಗೊಳಿಸಲಾಗಿದೆ ಎಂಬುದನ್ನು ಸೂಚಿಸುತ್ತದೆ.

ಮೋದಿ ಸರಕಾರ ಕೈಗೊಂಡ ಮುಂದಿನ ಕ್ರಮ ಎಂದರೆ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಪೌರತ್ವ (ತಿದ್ದುಪಡಿ) ಮಸೂದೆಯನ್ನು ಅಂಗೀಕರಿಸಿದ್ದು. ಈ ತಿದ್ದುಪಡಿ ಮೊತ್ತಮೊದಲ ಬಾರಿಗೆ ಮತೀಯ ಸಂಯೋಜನೆಯ ಆಧಾರದಲ್ಲಿ ಪೌರತ್ವದ ಮಾನದಂಡವನ್ನು ಸೇರಿಸಿದೆ. ಮುಸ್ಲಿಮರನ್ನು ಮಾತ್ರ ಪ್ರತ್ಯೇಕಿಸಿ ಕಾನೂನುಬಾಹಿರ ವಲಸಿಗರ ನಡುವೆ ಅವರನ್ನು ಪೌರತ್ವದ ಪರಿಗಣನೆಯಿಂದಲೇ ಹೊರಗಿಡುತ್ತದೆ. ಸಿಎಎ ಜೊತೆಗೆ ರಾಷ್ಟ್ರೀಯ ಪೌರತ್ವ ರಿಜಿಸ್ಟರನ್ನು ಜಾರಿಗೊಳಿಸುವುದು ಬಿಜೆಪಿಯ ಅಜೆಂಡಾ. ಸಿಎಎ ಮತ್ತು ಎನ್‌ಆರ್‌ಸಿಯನ್ನು ಒಟ್ಟಿಗಿಟ್ಟೇ ನೋಡಬೇಕು. ಸಿಎಎ ಹಿಂದುಗಳು ಮತ್ತು ಇತರ ಮುಸ್ಲಿಮೇತರರು ಪೌರತ್ವ ಪಡೆಯಲು ಅನುಕೂಲ ಮಾಡಿಕೊಟ್ಟರೆ, ಎನ್‌ಆರ್‌ಸಿ ಮುಸ್ಲಿಮರನ್ನು ಪೌರತ್ವ ಪಟ್ಟಿಯಿಂದ ಹೊರಗಿಡಲು ಅವರನ್ನು "ನುಸುಳುಕೋರರು' ಎಂದು ಗುರಿ ಮಾಡುತ್ತದೆ.

ಹೀಗೆ 2019 ಹಿಂದುತ್ವ ಆಳ್ವಿಕೆಯನ್ನು ಸ್ಥಾಪಿಸಲು ಮೋದಿ ಸರಕಾರ ಪ್ರಮುಖ ಹೆಜ್ಜೆಗಳನ್ನಿಟ್ಟಿರುವುದನ್ನು ಕಂಡಿದೆ.

ಇನ್ನೊಂದು ಆಯಾಮದಲ್ಲೂ 2019 ಗಮನಾರ್ಹವಾಗಿದೆ. ವಿಭಜನಕಾರೀ ಹಿಂದುತ್ವ ಧೋರಣೆಗಳನ್ನು, ದೇಶದ ಅರ್ಥವ್ಯವಸ್ಥೆ ತ್ವರಿತವಾಗಿ ಹದಗೆಡುತ್ತಿರುವ ಸಮಯದಲ್ಲಿ ಮುಂದೊತ್ತಲಾಗುತ್ತಿದೆ. ಜಿಡಿಪಿಯನ್ನು ಲೆಕ್ಕ ಹಾಕುವ ವಿಧಾನವನ್ನು ಮೋಸದಿಂದ ಪರಿಷ್ಕರಿಸಿದರೂ ಜಿಡಿಪಿ ವೃದ್ಧಿ ದರ ಇತ್ಯಾದಿ ಇಳಿಕೆಯನ್ನೇ ತೋರಿಸುತ್ತಿವೆ, ಸತತವಾಗಿ ಏಳು ತ್ರೈಮಾಸಿಕಗಳಲ್ಲಿ ಜಿಡಿಪಿ ವೃದ್ಧಿ ದರ ನಿರಂತರವಾಗಿ ಇಳಿಯುತ್ತಲೇ ಬರುತ್ತಿದೆ. ಕಳೆದ ತ್ರೈಮಾಸಿಕ (ಜುಲೈನಿಂದ ಸಪ್ಟಂಬರ್) ಜಿಡಿಪಿ ವೃದ್ಧಿ 4.5% ಮಾತ್ರ ತೋರಿಸಿದೆ.ಇದು ಕಳೆದ ಆರು ವರ್ಷಗಳಲ್ಲೇ ಅತಿ ಕಡಿಮೆ. 2017–18ರ ರಾಷ್ಟ್ರೀಯ ಅಂಕಿ–ಅಂಶ ಕಚೇರಿ(ಎನ್‌ಎಸ್‌ಒ) ಯ ಬಳಕೆದಾರರ ವೆಚ್ಚ ಕುರಿತ ದತ್ತಾಂಶಗಳ ಪ್ರಕಾರ ಬಳಕೆದಾರರು ವೆಚ್ಚ ಮಾಡುವ ಪ್ರಮಾಣ ಕಳೆದ 40ವರ್ಷಗಳಲ್ಲೇ ಅತೀ ಕೆಳಗಿನ ಮಟ್ಟಕ್ಕೆ ಇಳಿದಿದೆ.

ಸರಕಾರ ಬಚ್ಚಿಡಲು ಪ್ರಯತ್ನಿಸಿದ ಉದ್ಯೋಗದ ಅಂಕಿ–ಅಂಶಗಳು ನಿರುದ್ಯೋಗ ದರ ಕಳೆದ 45 ವರ್ಷಗಳಲ್ಲೆ ಅತೀ ಹೆಚ್ಚಿನ ಮಟ್ಟಕ್ಕೆ ಏರಿದ್ದನ್ನು ತೋರಿಸಿದೆ. ಬೇಡಿಕೆಯ ಸಂಕುಚನದೊಂದಿಗೆ ಈಗ ಹಣದುಬ್ಬರದ ಬೆದರಿಕೆಯೂ ಇದೆ. ನವಂಬರ್ ತಿಂಗಳ ಬಳಕೆದಾರ ಬೆಲೆ ಸೂಚ್ಯಂಕ ಹಣದುಬ್ಬರ 5.5%ಕ್ಕೆ ಏರಿದೆ ಎಂಬುದನ್ನು ತೋರಿಸಿದೆ. ಡಿಸೆಂಬರ್‌ನಲ್ಲಿ ಇದು 6% ದಾಟುವ ಸಂಭವವಿದೆ.

ಮೋದಿ ಸರಕಾರ ಆರ್ಥಿಕ ಮಂದಗತಿಯನ್ನು ನಿರ್ವಹಿಸಲು ಕೈಗೊಂಡ ಕ್ರಮಗಳು ಅದು ಆರ್ಥಿಕ ಬಿಕ್ಕಟ್ಟನ್ನು ಎದುರಿಸುವಲ್ಲಿ ವಿಫಲವಾಗಿರುವುದನ್ನು ಎತ್ತಿ ತೋರಿದೆ. ಗ್ರಾಮೀಣ ಬಡವರು ಮತ್ತು ಜನಸಾಮಾನ್ಯರ ಖರೀದಿ ಸಾಮರ್ಥ್ಯವನ್ನು ಹೆಚ್ಚಿಸಲು ಅವರ ಜೇಬುಗಳಿಗೆ ಹೆಚ್ಚಿನ ಹಣ ಸಿಗುವಂತೆ ಮಾಡಲು ಸರಕಾರದ ವೆಚ್ಚಗಳನ್ನು ಹೆಚ್ಚಿಸುವ ಬದಲು ಕಾರ್ಪೊರೇಟ್‌ಗಳಿಗೆ ಮತ್ತು ವಿದೇಶಿ ಬಂಡವಾಳಕ್ಕೆ ಹಲವಾರು ರಿಯಾಯ್ತಿಗಳನ್ನು ಈ ಸರಕಾರ ಪ್ರಕಟಿಸಿತು. ವಿದೇಶಿ ಬಂಡವಾಳ ಹರಿವಿನ ಮೇಲೆ ಹಾಕಿದ್ದ ಸರ್ಚಾರ್ಜ್‌ನ್ನು ಹಿಂತೆಗೆದುಕೊಂಡಿತು, ಮತ್ತು ಕಾರ್ಪೊರೇಟ್ ತೆರಿಗೆಯನ್ನು 8% ದಷ್ಟು ತೀವ್ರವಾಗಿ ಇಳಿಸಿತು. ಈ ಯಾವ ಕ್ರಮವೂ ಹೂಡಿಕೆಯನ್ನು ಹೆಚ್ಚಿಸಲು ನೆರವಾಗಿಲ್ಲ. ಏಕೆಂದರೆ ಈಗಿರುವ ಮುಖ್ಯ ಪ್ರಶ್ನೆಯೆಂದರೆ ಅರ್ಥವ್ಯವಸ್ಥೆಯಲ್ಲಿ ಬೇಡಿಕೆಯನ್ನು ಉತ್ತೇಜಿಸುವುದು ಹೇಗೆ ಎಂಬುದೇ ಆಗಿದೆ.

ಇನ್ನೊಂದು ಹಾನಿಕಾರಕ ನಿಲುವು ಎಂದರೆ ಎರಡನೇ ಮೋದಿ ಸರಕಾರ ಕೈಗೊಂಡಿರುವ ಭರದ ಖಾಸಗೀಕರಣ. ಬಿಪಿಸಿಎಲ್ ಸೇರಿದಂತೆ ಹಲವಾರು ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಮಾರಾಟ ಮಾಡಲು ಪಟ್ಟಿ ಮಾಡಲಾಗಿದೆ. ಈ ಮಾರಾಟಗಳಿಂದ ಬಂದ ಹಣವನ್ನು ಸರಕಾರದ ರೆವಿನ್ಯೂ ಕೊರತೆಯನ್ನು ತುಂಬಲು ಬಳಸಲಾಗುತ್ತದೆ. ರೈಲ್ವೆ, ರಕ್ಷಣಾ ಉತ್ಪಾದನೆ, ಗಣಿಗಾರಿಕೆ ಮತ್ತು ಇನ್ನೂ ಹಲವಾರು ಕ್ಷೇತ್ರಗಳಲ್ಲಿ ಖಾಸಗೀ ವಲಯದ ಪ್ರವೇಶಕ್ಕೆ ಪ್ರೋತ್ಸಾಹ ನೀಡಲಾಗುತ್ತಿದೆ.

ಹಿಂದುತ್ವ ಆಳ್ವಿಕೆ ಪಸರಿಸಿರುವ ಪ್ರತಿಗಾಮಿ ಸಾಮಾಜಿಕ ಮೌಲ್ಯಗಳು ಮಹಿಳೆಯರು ಮತ್ತು ಯುವತಿಯರ ಮೇಲೆ ದುಷ್ಟ ಪರಿಣಾಮ ಬೀರುತ್ತಿವೆ. ಮಹಿಳೆಯರ ಮೇಲೆ ಲೈಂಗಿಕ ದಾಳಿಗಳು ಆತಂಕಕಾರೀ ರೀತಿಯಲ್ಲಿ ಹೆಚ್ಚುತ್ತಿವೆ. ಹೈದರಾಬಾದಿನಲ್ಲಿ ಒಬ್ಬ ಪಶುವೈದ್ಯೆಯ ಅಮಾನುಷ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಹಾಗೂ ಉನ್ನಾವ್‌ನಲ್ಲಿ ಸಾಮೂಹಿಕ ಅತ್ಯಾಚಾರಕ್ಕೆ ಒಳಗಾದವಳ ಕೊಲೆ ಕಣ್ಣಿಗೆ ರಾಚುವಂತಹ ಉದಾಹರಣೆಗಳು. ಹಿಂದುತ್ವ ಆಳ್ವಿಕೆಯ ಅಡಿಯಲ್ಲಿ ಪಿತೃಪ್ರಧಾನತೆ ಮತ್ತು ಸ್ತ್ರೀದ್ವೇಷದ ವಿಚಾರಗಳು ದಂಡಿಯಾಗಿ ಬೆಳೆದಿವೆ.

ಮೋದಿ ಸರಕಾರದ ಎರಡನೇ ಅಧಿಕಾರಾವಧಿಯಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳೊಂದಿಗೆ ಮಿಲಿಟರಿ ಮತ್ತು ಸಾಮರಿಕ ಸಂಬಂಧಗಳು

ಪುಟ 14 ನೋಡಿ



ಮೆರವಣಿಗೆ

ಮಹಿಳೆಯರ ಹಕ್ಕುಗಳ ರಕ್ಷಣೆಗಾಗಿ ದೇಶದ ಸಂವಿಧಾನವನ್ನು ರಕ್ಷಿಸುವ ಪಣತೊಟ್ಟ

ಹನ್ನೆರಡನೇ ರಾಷ್ಟ್ರೀಯ ಜನವಾದಿ ಮಹಿಳಾ ಸಮ್ಮೇಳನ

ವಿಮಲಾ .ಕೆ.ಎಸ್

ಸುತ್ತೆಲ್ಲ ಹಿಂಸೆಯೇ ತುಂಬಿ, ಕ್ರೌರ್ಯದ ಹಲವು ಮುದ್ರೆಗಳು ಬೆಂಬಿಡದೇ ಕಾಡುತ್ತಿವೆ. ಅತ್ಯಾಚಾರ ದೌರ್ಜನ್ಯಗಳು ಹಸುಗೂಸಿನಿಂದ ವಯೋವೃದ್ಧೆಯರ ಮೇಲೂ ನಡೆಯುತ್ತಿವೆ. ದೇಶದ ಪ್ರಜೆಗಳಿಗೆ ಸ್ಥಿರತೆ, ಘನತೆಯ ಬದುಕು ನೀಡುವ ಭರವಸೆ ಮೂಡಿಸುವ ಬದಲು ಸರ್ಕಾರವೇ ಅಸ್ಥಿರತೆಯನ್ನು ಹುಟ್ಟು ಹಾಕಿ ಘನತೆಯ ಬದುಕಿಗೆ ಕೊಳ್ಳಿ ಇಡುತ್ತಿದೆ. ಈ ಸಂದರ್ಭದಲ್ಲಿ ಮಹಿಳೆಯರ ಘನತೆಯ ಬದುಕು ಮತ್ತು ಅಸ್ಮಿತೆಗಾಗಿ ಹೋರಾಡುತ್ತಿರುವ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಹನ್ನೆರಡನೇ ರಾಷ್ಟ್ರೀಯ ಸಮ್ಮೇಳನ ಮುಂಬೈನಲ್ಲಿ ನಡೆಯಿತು.

ಡಿಸೆಂಬರ್ 27 ರಿಂದ 30 2019 ರ ವರೆಗೆ ನಡೆದ ಸಮ್ಮೇಳನದಲ್ಲಿ ಮಣಿಪುರ, ತ್ರಿಪುರಾ, ಅಸ್ಸಾಂ, ಜಮ್ಮು ಕಾಶ್ಮೀರಗಳೂ ಸೇರಿದಂತೆ 23 ರಾಜ್ಯಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ದೇಶದ ಉಳಿದ ಭಾಗಗಳಂತೆ ಮುಂಬೈನಲ್ಲಿ ಕೂಡಾ ಜನರ ಮೆರವಣಿಗೆ ಸಂಘರ್ಷಗಳ ಮೇಲೆ ಕಡಿವಾಣ ಹಾಕುವ ನಿಟ್ಟಿನಲ್ಲಿ ನಿಷೇಧಗಳು ಜಾರಿಯಲ್ಲಿವೆ. ಆಜಾದ್ ಮೈದಾನದ ಒಳಗೆ ಮಾತ್ರ ಸಾರ್ವಜನಿಕ ಸಭೆ ಮಾಡಲು ಅನುವು ಮಾಡುತ್ತಿದ್ದ ಪರಿಪಾಠಕ್ಕೆ ಬದಲಾಗಿ ಆಜಾದ್ ಮೈದಾನದ ಹೊರ ವರ್ತುಲದಲ್ಲಿ ಮೆರವಣಿಗೆ ನಡೆಸಿ ಆಜಾದ್ ಮೈದಾನದಲ್ಲಿ ಬಹಿರಂಗ ಸಭೆ ನಡೆಸುವ ಮೂಲಕ ಸಮ್ಮೇಳನ ಪ್ರಾರಂಭವಾಯಿತು.

ಸಮ್ಮೇಳನದ ಉದ್ಘಾಟನಾ ಸಮಾರಂಭ ಬೈಕುಲಾದ ಸಾಬೂ ಸಿದ್ದಿಕಿ ಪಾಲಿಟೆಕ್ನಿಕ್ ಸಭಾಂಗಣದಲ್ಲಿ ಪ್ರಗತಿಶೀಲ ನಟಿ ಸ್ವರ ಭಾಸ್ಕರ್ ರವರಿಂದ ಉದ್ಘಾಟನೆಗೊಂಡಿತು. ನವ ಪೀಳಿಗೆಯ



ಬಹಿರಂಗ ಸಭೆ ವೇದಿಕೆ

ಭರವಸೆಯ ಬೆಳಕಿನಂತೆ ಕಂಡ ಸ್ವರ ಭಾಸ್ಕರ್ ದೇಶದಲ್ಲಿಂದು ನಡೆಯುತ್ತಿರುವ ಕೋಮುತ್ವೇಷದ ವಾತಾವರಣ ಅದರ ವಿರುದ್ಧ ದಣಿವರಿಯದ ಹೋರಾಟ ನಡೆಸುತ್ತಿರುವ ಜನವಾದಿಯಂಥಹ ಸಂಘಟನೆಯ ರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸುವ ಅವಕಾಶವೇ ತನಗೆ ಸಂದ ಮಹಾನ್ ಗೌರವವೆಂದು ಹೇಳಿದರು. ದೇಶದ ಸ್ವಾತಂತ್ರ ಹೋರಾಟದ ಮೌಲ್ಯಗಳು ಕುಸಿಯುತ್ತಿರುವ ಸಂದರ್ಭದಲ್ಲಿ ಮಹಿಳೆಯರ ಹೋರಾಟದ ಕಿಚ್ಚು ಉಳಿಸುತ್ತಿರುವ ಜನವಾದಿಯ ಪ್ರಯತ್ನವನ್ನು ಶ್ಲಾಘಿಸಿದರು. ಬೆಳ್ಳಿ ಪರದೆಯಲ್ಲಿ ನಟ ನಟಿಯರು ಮಿಂಚಲು ಅಗತ್ಯವಾದ ಕೆಲಸವನ್ನು ಅಗೋಚರ ಕೈಗಳು ಸದಾ ಮಾಡುತ್ತವೆ. ಯಾರೋ ಕಟ್ಟಿದ ಬೆಳ್ಳಿ ಪರದೆಯ ಮೇಲೆ ನಾಲ್ಕು ಸಂಭಾಷಣೆ ಹೇಳಿ, ನಟಿಸಿ ತಾವು ನಟಿ ಎನಿಸಿಕೊಳ್ಳುವ, ಪ್ರಖ್ಯಾತರಾಗುವ ಸಂಗತಿಯ ಎದುರು ಜನವಾದಿಯ ಕಾರ್ಯಕರ್ತರು ಸ್ವಂತ ಬದುಕಿನಲ್ಲಿ, ಸಾರ್ವಜನಿಕ ಬದುಕಿನಲ್ಲಿ ನಿರಂತರವಾಗಿ ಸೆಣಸುವ ವೀರ ಸೇನಾನಿಗಳೆಂದು ಬಣ್ಣಿಸಿದರು. ಸಂಘಿಗಳು ನಡೆಸುತ್ತಿರುವ ಹಾವಳಿ ಅವರು ತಂದೊಡ್ಡಿರುವ ನಮ್ಮ ಮುಂದಿರುವ ಸವಾಲುಗಳನ್ನು ಸಶಕ್ತವಾಗಿ ಎದುರಿಸಲು ಮುನ್ನಡೆಯುವ ಅಗತ್ಯ ಮತ್ತು ತಾನೂ ಅದರ ಭಾಗೀದಾರಿ ಎಂದು ತಿಳಿಸಿದರು.

ದೀರ್ಘಕಾಲ ಸಂಘಟನೆಯ ಪ್ರಧಾನ ಕಾರ್ಯದರ್ಶಿಯಾಗಿ, ಉಪಾಧ್ಯಕ್ಷರಾಗಿ ಸಂಘಟನೆ ಹೆಜ್ಜೆ ಹಾಕಬೇಕಾದ ದಾರಿಯ ನೀಲನಕ್ಷೆಯನ್ನು ರೂಪಿಸಿ ಇಂದಿಗೂ ಮಾರ್ಗದರ್ಶಿಯಾಗಿರುವ ಬ್ರಂದಾ ಕಾರಟ್ ರವರು ದಿಕ್ಸೂಚಿ ಮಾತುಗಳನ್ನಾಡಿದರು. ಮಹರಾಷ್ಟ್ರ ನೆಲದ ಚೇತನಗಳಾದ ಜ್ಯೋತಿರಾವ್ ಘುಲೆ, ಸಾವಿತ್ರಿ ಬಾಯಿ ಘುಲೆ, ಬಾಬಾ ಸಾಹೇಬ್ ಅಂಬೇಡ್ಕರ್ ರವರ ಕೊಡುಗೆಗಳನ್ನು ಸ್ಮರಿಸಿದರು. ಅಂತೆಯೇ ಜನವಾದಿಯ ಮೂಲಶಕ್ತಿಗಳಾಗಿ ಮಹಾರಾಷ್ಟ್ರದ ನೆಲದಲ್ಲಿ ಹೋರಾಟದ ರಂಗೋಲಿ ಬಿಡಿಸಿದ ಆದರ್ಶಪ್ರಾಯರಾದ ಗೋದೂತಾಯಿ ಪುರುಳೇಕರ್, ರಣರಾಗಿಣಿ ಎಂದೇ ಕರೆಯಿಸಿಕೊಂಡ ಅಹಿಲ್ಯಾ ತಾಯಿ ರಂಗ್ಣೇಕರ್, ವಿಮಲ್ ರಣದಿವೆ ಯವರು ಎಂದಿಗೂ ಮರೆಯಲಾರದ ಕಣ್ಮಣಿಗಳೆಂದು ಸ್ಮರಿಸಿದರು. ಮಹಾರಾಷ್ಟ್ರದ ಸಮಾಜ ಸುಧಾರಣಾ ಪರಂಪರೆ ಮತ್ತು ಪ್ರಸಕ್ತ ವಿದ್ಯಮಾನಗಳನ್ನು ಹೋಲಿಸಿದರು. ಭಾರತದ ಭವ್ಯ ಸಾಮರಸ್ಯ ಪರಂಪರೆಯನ್ನು ನೆನಪಿಸಿಕೊಳ್ಳುತ್ತಲೇ ಇಂದಿನ ಪರಿಸ್ಥಿತಿ ಮತ್ತು ಜನವಾದಿಯ ಕಾರ್ಯಕರ್ತರು ಹೆಚ್ಚಿಸಿಕೊಳ್ಳಬೇಕಾದ ಕಾರ್ಯಕ್ಷಮತೆಯನ್ನು ಒತ್ತಿ ಹೇಳಿದರು.

ಕೆಲವೇ ವರ್ಷಗಳ ಹಿಂದೆ ಪ.ಬಂಗಾಲ ಮತ್ತು ತ್ರಿಪುರಾಗಳಲ್ಲಿ ಎಡರಂಗ ಸರ್ಕಾರಗಳ ಆಳ್ವಿಕೆಯಲ್ಲಿ ಸಾಕಷ್ಟು ಸುರಕ್ಷಿತವಾಗಿದ್ದ ಮಹಿಳಾ ಸಮೂಹವಿಂದು ಹಲವು ರೀತಿಯ ತೊಂದರೆಗಳನ್ನು ಎದುರಿಸುತ್ತಿದ್ದಾರೆ. ಗೂಂಡಾ ಧಾಳಿಗಳು, ಅತ್ಯಾಚಾರ, ಮನೆಗಳಿಗೆ ಬೆಂಕಿಹಾಕುವವರೆಗೆ ತೃಣಮೂಲ ಕಾಂಗ್ರೆಸ್ ಮತ್ತು ಬಿ.ಜೆ.ಪಿ ಗಳಿಂದ ನಡೆಯುತ್ತಿದ್ದು ಅದನ್ನು ಸಮರ್ಥವಾಗಿ ಎದುರಿಸುತ್ತಿರುವ ಜನವಾದಿಯ ಗೆಳತಿಯರಿಗೆ ಅಭಿನಂದನೆಗಳನ್ನು ತಿಳಿಸಿದರು. ಕೇರಳದಲ್ಲಿ ಎಡರಂಗದ ಸಕಾರವೇ ಇದ್ದಾಗ್ಯೂ ಸಂಘ ಪರಿವಾರ ತನ್ನ ಬಾಲ ಬಿಚ್ಚುವ ಕೆಲಸವನ್ನು ನಿರಂತರವಾಗಿ ನಡೆಸುತ್ತಿರುವುದನ್ನು ಉಲ್ಲೇಖಿಸಿದ ಅವರು ಸರ್ಕಾರದ ಜನಪರ ನೀತಿಗಳು ಮತ್ತು ಜನವಾದಿಯ ಗೆಳತಿಯರ ಸಮರ್ಥ ಉತ್ತರ, ಸಕ್ಷಮ ಕೆಲಸಗಳಿಂದಾಗಿ ಕೋಮುವಾದಿಗಳಿಗೆ ನಿರೀಕ್ಷಿತ ಜಯ ದೊರಕದ ಸ್ಥಿತಿ ಇಡೀ ದೇಶಕ್ಕೆ ಮಾದರಿ ಎಂದರು. ಮಹಿಳೆಯರ ಧಾರ್ಮಿಕ ಹಕ್ಕುಗಳಿಗೆ ಸಂಬಂಧಿಸಿದಂತೆ ಸುಪ್ರಿಂಕೋರ್ಟ ತೀರ್ಪಿನ ವಿರುದ್ಧ ಇಡೀ ಕೇರಳವನ್ನು ರಣಾಂಗಣ ಮಾಡಿದ ಸಂಘಿಗಳು, ಬಿ.ಜೆ.ಪಿಗಳ ಕುತಂತ್ರದ ವಿರುದ್ಧ ಜನವಾದಿಯ ನೇತೃತ್ವದಲ್ಲಿ ರಚನೆಯಾದ 'ಮಹಿಳಾ ಮಥಿಲ್' (ಮಹಿಳಾ ಗೋಡೆ)ಯ ಪ್ರಯತ್ನ ಸಾಮಾಜಿಕ ಪರಿವರ್ತನೆಯತ್ತ ಒಂದು ಹೆಜ್ಜೆಯೆಂದು ಗುರುತಿಸಬೇಕು. ನಮ್ಮ ಮುಂದಿರುವ ರಾಜಕೀಯ ಮತ್ತು ಸಾಮಾಜಿಕ ಸಂಕಷ್ಟಗಳನ್ನು ಎದುರಿಸಲು ನಾವು ಚರಿತ್ರೆಯ ಪುಟಗಳಿಂದ ಸ್ಫೂರ್ತಿ ಪಡೆಯಬೇಕು. ಇದು ಸಮಾಜವಾದಿ ಹೋರಾಟಗಾರ್ತಿ ಚಿಂತಕಿ ರೋಸಾ ಲಕ್ಷಂಬರ್ಗರ ಶತಮಾನದ ವರ್ಷ. 'ನೀವೇನು ಮಾಡುತ್ತೀರೋ ಮಾಡಿ– ನಾವಿದ್ದೆವು, ನಾವಿದ್ದೇವೆ, ನಾವು ಇರುತ್ತೇವೆ' ಎಂದು ಅಂದು ಅವರು ಎಸೆದ ಸವಾಲನ್ನು ಸಂಘಿಗಳಿಗೆ ನಾವಿಂದು ಹಾಕಬೇಕಿದೆ ಎಂದರು. ಜನವಾದಿಯ ಹೋರಾಟದ ಪರಂಪರೆಯನ್ನು ಮುಂದುವರೆಸುವ ತೀವ್ರ ಅಗತ್ಯವನ್ನು ಕಾರ್ಯಕರ್ತರು, ಸದಸ್ಯರು ಮನಗಾಣಬೇಕು. ದಣಿವರಿಯದೇ, ಕ್ಷಣ ಕೂರದೇ ಸಂಘಟನೆಯ ಕೆಲಸವನ್ನು ಮುಂದುವರೆಸಬೇಕು. ಮಹಿಳೆಯರ, ದಲಿತರ ದಮನಿತರ ಧ್ವನಿಯಾಗಬೇಕು ಎಂದು ಕರೆನೀಡಿದರು.

ಸಂಘರ್ಷವೇ ಬದುಕಾಗಿರುವ ಮಹಿಳಾ ಸಮೂಹದ ಮಧ್ಯೆ ಕೆಲಸ ಮಾಡುವ ಜನವಾದಿ ತನ್ನ ಪ್ರತಿ ಸಮ್ಮೇಳನದಲ್ಲಿ ಕೆಲವು ಅತಿ



ಸಮ್ಮೇಳನ ಉದ್ಘಾಟನೆ


ಬಹಿರಂಗ ಸಭೆಗೆ ಸೇರಿದ್ದ ಜನ

ಮಹತ್ವದ ಸಂಗತಿಗಳನ್ನು, ಸಂಗಾತಿಗಳನ್ನು ಗುರುತಿಸಿ ಅವರನ್ನು ಸನ್ಮಾನಿಸುತ್ತದೆ. ಮತ್ತು ತನ್ನ ಮುಂದಿನ ದಾರಿಯನ್ನು ಆ ನೆಲೆಯಲ್ಲಿ ಇನ್ನಷ್ಟು ಸ್ಪಷ್ಟಗೊಳಿಸಿಕೊಳ್ಳುತ್ತದೆ. ಆ ನಿಟ್ಟಿನಲ್ಲಿ ನಡೆಸುವ ಸಂಘರ್ಷದ ಗೋಷ್ಠಿಯಲ್ಲಿ ಸಂಘರ್ಷದ ಸಂಕೇತಗಳಾಗಿ ಈ ಸಮ್ಮೇಳನದಲ್ಲಿ ಎಂಟು ಜನರನ್ನು ವೇದಿಕೆಗೆ ಕರೆದು ಅವರ ಅನುಭವಗಳನ್ನು ಕೇಳಿ ಸನ್ಮಾನಿಸಲಾಯಿತು. ಅವರಲ್ಲಿ ರಾಜಕೀಯ ದ್ವೇಷಕ್ಕೆ ಬಲಿಯಾದವರು, ನವ ಉದಾರೀಕರಣ ನೀತಿಯ ಬಲಿಪಶುಗಳು, ಮರ್ಯಾದೆಯ ಹೆಸರಿನ ದೌರ್ಜನ್ಯದ ಸಂತ್ರಸ್ತರು, ಜಾತಿ ತಾರತಮ್ಯದ ಬಿಸಿ ಉಂಡವರು,ಸಂಘ ಪರಿವಾರದ ದ್ವೇಷ ರಾಜಕಾರಣದ ವಿರುದ್ಧ ನಿಂತವರು,ಕೃಷಿ ಬಿಕ್ಕಟ್ಟಿನ ವಿರುದ್ಧ ಪಾದಯಾತ್ರೆಯಲ್ಲಿ ಪಾಲ್ಗೊಂಡ ರೈತ ಕೂಲಿಕಾರ ಮಹಿಳೆಯರು ಇದ್ದರು. ಆಂಧ್ರ ಪ್ರದೇಶದ ಸ್ನೇಹಾ, ಹರ್ಯಾಣಾದ ಸೂರಜ್, ಗೋಮತಿ ತಮಿಳ್ನಾಡು, ಸಂಜಿನಿ ಕೇರಳ,ರೇಖಾ ಸೂತ್ರಧಾರ್ ತ್ರಿಪುರಾ, ಛಬೀಲಾ ದೇವಿ ಪ.ಬಂಗಾಲ ಹಾಗೂ ಮಹರಾಷ್ಟ್ರದ ರೈತ ಕಾಲ್ನಡಿಗೆಯ ಹೀರೋಯಿಣಿಗಳಾದ ಸಕ್ಕೂಬಾಯಿ ಮತ್ತು ಕಮ್ಲಿ ಲಹೋಟಾ ರವರುಗಳನ್ನು ಸನ್ಮಾನಿಸಲಾಯಿತು..

ಮಹಿಳೆಯರ ಹಕ್ಕುಗಳ ರಕ್ಷಣೆಗಾಗಿ – 'ಸಂವಿಧಾನ ರಕ್ಷಿಸೋಣ–ಒಟ್ಟಾಗಿ ಹೋರಾಡೋಣ ಒಟ್ಟಾಗಿ ಮುನ್ನಡೆಯೋಣ' ಘೋಷಣೆಯಡಿಯಲ್ಲಿ


ಉದ್ಘಾಟನೆ ಸಮಾರಂಭದಲ್ಲಿ ಸ್ವರಾ ಭಾಸ್ಕರ್

ಕಾವಲುಗಾರರಾಗುವ ಒತ್ತಡಗಳು ಮಹಿಳೆಯರ ಮೇಲೆ ಹೆಚ್ಚಿವೆ. ಉನ್ನಾವೋ ದಿಂದ ತೆಲಂಗಾಣದ ವರೆಗೆ ನಡೆದ ಘಟನೆಗಳಿಂದ ದೃಢಪಡುವ ಅಂಶಗಳೆಂದರೆ ಬಿ.ಜೆ.ಪಿ ತನ್ನ ಹಿಂಬಾಲಕರನ್ನು ಯಾವ ಅಂಜಿಕೆ ನಾಚಿಕಗಳೂ ಇಲ್ಲದೆಯೇ ಎಂಥಹ ಅಪರಾಧವೆಸಗಿದರೂ ರಾಜಕೀಯ ರಕ್ಷಣೆ ನೀಡುತ್ತದೆ ಮತ್ತು ಸಮರ್ಥಿಸಿಕೊಳ್ಳುತ್ತದೆ. ಮಹಿಳೆಯರಿಗೆ ಅಲ್ಪ ಸ್ವಲ್ಪ ರಕ್ಷಣೆ ನೀಡಬಲ್ಲ ಕಾಯ್ದೆಗಳನ್ನೂ ಜಾಳಾಗಿಸುವ ಕೆಲಸವೂ ನಡೆಯುತ್ತಿದೆ. ಈ ಪ್ರವೃತ್ತಿಗಳ ವಿರುದ್ಧ


ಕರ್ನಾಟಕದ ಪ್ರತಿನಿಧಿಗಳು

ಸಮ್ಮೇಳನ ನಡೆಯಿತು.

ಪ್ರತಿನಿಧಿಗಳ ಸಮಾವೇಶ 27ರ ಸಂಜೆ 7 ರಿಂದ 30ರ ಮಧ್ಯಾಹ್ನ 2 ರ ವರೆಗೆ ನಡೆಯಿತು. ಸಮ್ಮೇಳನವನ್ನು ಸುಸೂತ್ರವಾಗಿ ನಡೆಸಲು ನಡೆಸಲು ಅಗತ್ಯವಾದ ಸಮಿತಿಗಳ ನೇಮಕವೆಂಬ ಸಾಮಾನ್ಯ ಕಲಾಪಗಳ ಮೂಲಕ ಪ್ರಾರಂಭವಾದ ಸಮ್ಮೇಳನ, ಪ್ರಧಾನ ಕಾರ್ಯದರ್ಶಿಗಳ ವರದಿ ಮಂಡನೆಯ ಮೂಲಕ ಚರ್ಚೆಗೆ ವೇದಿಕೆ ಸಿದ್ಧಪಡಿಸಿತು. ಅಂತರ ರಾಷ್ಟ್ರೀಯ ವಿದ್ಯಮಾನಗಳ ವರದಿಯಲ್ಲಿ ಇಡೀ ವಿಶ್ವದ ರಾಜಕೀಯ ಬೆಳವಣಿಗೆಗಳು ಬಲಪಂಥೀಯತೆಯತ್ತ ಹೊರಳಿ ನಿಂತಿರುವುದನ್ನು ವಿಶ್ಲೇಷಿಸಲಾಗಿತ್ತು. ಸಾಮ್ರಾಜ್ಯಶಾಹಿ ದೇಶಗಳ ಕುತಂತ್ರದಿಂದಾಗಿ ಪಶ್ಚಿಮ ಏಶ್ಯಾ ವಲಯ ಸಮರಾಂಗಣವಾಗಿ ಪರಿವರ್ತಿತವಾಗಿರುವುದನ್ನು ಉಲ್ಲೇಖಿಸುತ್ತಲೇ ಅದರ ವಿರುದ್ಧ ಎದ್ದೇಳುತ್ತಿರುವ ಪ್ರತಿರೋಧವನ್ನೂ ಗುರುತಿಸಲಾಗಿದೆ. ಉದಾಹರಣೆಗೆ ಅಮೆರಿಕಾದಲ್ಲಿ ಸಾವಿರಾರು ಮಹಿಳೆಯರುನಡೆಸಿದ 'ಟ್ರಂಪ್ ನನ್ನ ಅಧ್ಯಕ್ಷರಲ್ಲ' ಎಂಬ ಪ್ರತಿಭಟನೆ, ಲ್ಯಾಟಿನ್ ಅಮೆರಿಕಾದಲ್ಲಿ ಸ್ತ್ರೀವಾದ ಪಡೆದುಕೊಂಡ ಹೊರಳು ದಾರಿ,ವಿಶ್ವದ ಹಲವು ಕಡೆ ಮೂಲಭೂತವಾದದ ವಿರುದ್ಧ ಸಿಡಿದೇಳುತ್ತಿರುವ ಮಹಿಳೆಯರು, ಚೈನಾ ಮತ್ತು ರಷ್ಯಾ ತಮ್ಮದೇ ನೆಲೆಯಲ್ಲಿ ಅಮೆರಿಕಾದ ಸರ್ವಾಧಿಕಾರದ ವಿರುದ್ಧ ಒಡ್ಡುತ್ತಿರುವ ತಡೆ, ನೇಪಾಳದಲ್ಲಿ ಎಡ ಮತನಿರಪೇಕ್ಷ ಸರ್ಕಾರದ ಗೆಲುವು ಹೀಗೆ ವಿಶ್ವದಾದ್ಯಂತ ಎದ್ದೇಳುತ್ತಿರುವ

ಜನವಾದಿಯು ದೇಶದಾದ್ಯಂತ ತಳ ಹಂತದಿಂದ ನೀತಿ–ನಿರ್ಧಾರದ ಹಂತದವರೆಗೆ ಮಹಿಳೆಯರನ್ನು ಅಣಿನೆರೆಸಿ ಸೆಣಸಾಡುತ್ತಿದೆ. ಕಾಶ್ಮೀರದಲ್ಲಿ 370ನ್ನು ನಿಷ್ಕ್ರಿಯಗೊಳಿಸಿದ್ದು, ಪೌರತ್ವ ಕಾಯ್ದೆಗೆ ತಂದ ತಿದ್ದುಪಡಿ, ರಾಷ್ಟ್ರೀಯ ನಾಗರಿಕ ರಿಜಿಸ್ಟ್ರಿ, ರಾಷ್ಟ್ರೀಯ ಜನಸಂಖ್ಯಾ ರಿಜಿಸ್ಟ್ರಿ(ಈಗ ಇದಕ್ಕೆ ದಾಖಲಾತಿಗಳನ್ನು ಒದಗಿಸಬೇಕು) ಮುಂತಾಗಿ ದೇಶದ ಸಂವಿಧಾನವನ್ನೇ ಬದಲು ಮಾಡಲು ಉಪಕ್ರಮಿಸಲಾಗಿದೆ. ಇದು ಅಲ್ಪಸಂಖ್ಯಾತರ, ಮಹಿಳೇಯರ ದಲಿತ ಆದಿವಾಸಿ ಮತ್ತಿತರ ದಮನಿತ ಜನವಿಭಾಗದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತದೆ. ಇದರ ಜೊತೆಗೇ ಮಹಿಳೆಯರ ಮೇಲೆ ಬಲ ಪಂಥೀಯ ಸಂಘಟನೆಗಳು ನಡೆಸುತ್ತಿರುವ ಪುನರಾವರ್ತಿತ ಧಾಳಿಗಳು, ಮಹಿಳೆಯರು ಮತ್ತು ಮಕ್ಕಳ ಸ್ಥಿತಿ

ಸಮ್ಮೇಳನದ ಸಂದರ್ಭದಲ್ಲಿ ಸಂಘಟನೆಯು 1998ರಲ್ಲಿ ದೆಹಲಿಯಲ್ಲಿ ನಡೆಸಿದ ರಾಷ್ಟ್ರೀಯ ದಲಿತ ಮಹಿಳೆಯರ ಸಮಾವೇಶದ ವರದಿಯನ್ನೂ ಒಳಗೊಂಡಂತೆ ವಿವಿಧ ರಾಜ್ಯಗಳಲ್ಲಿ ದಲಿತ ಮಹಿಳೆಯರ ಸಮಸ್ಯೆಗಳಿಗೆ ಜನವಾದಿ ಕಟ್ಟಿದ ಹೋರಾಟಗಳು, ಸ್ಪಂದಿಸಿದ ಪ್ರತಿಸ್ಪಂದನೆ ಕೈಗೊಂಡ ಕ್ರಮಗಳ ವಿವರವಾದ ವರದಿಯುಳ್ಳ 'ದಲಿತ ಮಹಿಳೆಯರು– ಜನವಾದಿಯ ಮಧ್ಯಪ್ರವೇಶ ಮತ್ತು ಹೋರಾಟಗಳು' ಪುಸ್ತಕ ಹಾಗೂ ಪಾಳೆಯಗಾರೀ ಮೌಲ್ಯಗಳ ಕುರಿತು ಜನವಾದಿಯ ಕೈಪಿಡಿಗಳನ್ನು ಬಿಡುಗಡೆ ಮಾಡಲಾಯಿತು.

ಹೀನಾಯವಾಗುತ್ತಿರುವುದಕ್ಕೆ ಸಾಕ್ಷಿ. ಬಿ.ಜೆ.ಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಅದರಲ್ಲಿಯೂ ಉತ್ತರಪ್ರದೇಶದಲ್ಲಿ ಸ್ಥಿತಿ ವಿಪರೀತವಾಗಿ ಹದಗೆಟ್ಟಿದೆ. ಗಾಯದ ಮೇಲೆ ಉಪ್ಪಿಟ್ಟಂತೆ ಸಾಮಾಜಿಕ ಕಲ್ಯಾಣ ವೆಚ್ಚಗಳಲ್ಲಿ ತೀವ್ರ ಕಡಿತವಾಗಿದೆ, ಉದ್ಯೋಗಾವಕಾಶ ಹೆಚ್ಚಳಕ್ಕೆ ಯಾವ ಗಮನವೂ ಇಲ್ಲ, ರೇಷನ್ ವ್ಯವಸ್ಥೆಯಲ್ಲಿ ಯಾವ ಸುಧಾರಣೆ ಇಲ್ಲ, ಆರೋಗ್ಯ ಶಿಕ್ಷಣಗಳ ಬಗ್ಗೆ ಕೇಳುವುದೇ ಬೇಡ ಎನ್ನುವ ಸ್ಥಿತಿಗೆ ದೇಶ ಬಂದು ನಿಂತಿದೆ. ಹುಸಿ ಘೋಷಣೆಗಳಾಗಿಯಷ್ಟೇ ಉಳಿದ 'ಬೇಟಿ ಬಚಾವ್ ಬೇಟಿ ಪಢಾವ್, ಉಜ್ವಲಾ ದಂಥಹ ಯೋಜನೆಗಳ ಹಿಂದಿನ ಸುಳ್ಳುಗಳನ್ನು ಬಯಲಿಗೆಳೆಯಬೇಕಿದೆ, ಎಂದು ವರದಿ ಹೇಳಿದೆ.

ಜನವಾದಿಯು ಈ ಎಲ್ಲ ವಿಪರೀತಗಳ ವಿರುದ್ಧ ದೇಶದಾದ್ಯಂತ ಹೋರಾಟ ಕಟ್ಟಿದೆ. ಆದರೆ ಬರಲಿರುವ ದಿನಗಳು ಇನ್ನಷ್ಟು ತ್ರಾಸದಾಯಕವಾಗಿರುತ್ತವೆ. ರಾಷ್ಟ್ರೀಯ ಸ್ವಯಂ ಸೇವಿಕಾ ಸಂಘ, ದುರ್ಗಾವಾಹಿನಿ, ಮತ್ತಿತರ ಸಂಘಿ ತುಕಡಿಗಳು ನಡೆಸುತ್ತಿರುವ ಪ್ರಚಾರವನ್ನು ಮಣಿಸಲು ಹೊಸ ಹೊಸ ವಿಭಾಗಗಳ ಮಧ್ಯೆ ಚಲಿಸುವ ನಮ್ಮ ಪ್ರಭಾವ ವಿಸ್ತರಿಸುವ, ಅರ್ಥ ಮಾಡಿಸುವ ಜರೂರತ್ತಿದೆ.ಮಹಿಳೆಯರ ಆಲೋಚನಾಕ್ರಮವನ್ನೇ ಬದಲಿಸುವ ನಿಟ್ಟಿನಲ್ಲಿ ನಡೆಯುವ ಸಶಕ್ತ ಪ್ರಚಾರಾಂದೋಲನಗಳಿಂದ ಮಾತ್ರವೇ ಇದು ಸಾಧ್ಯವೇ ಹೊರತೂ ಮೇಲ್ತೋರಿಕೆಯ ಯಾವ ಚಟುವಟಿಕೆಗಳಿಂದಲೂ ಸಾಧ್ಯವಿಲ್ಲ. ಅಖಿಲ ಭಾರತ ಸಮ್ಮೇಳನದ ಮುಂದಿನ ಗುರಿಗಳಲ್ಲಿ ಇದನ್ನು ಸ್ಪಷ್ಟಪಡಿಸಿಕೊಳ್ಳಬೇಕೆಂದು ವರದಿ ಉಲ್ಲೇಖಿಸಿದೆ.

28 ಡಿಸೆಂಬರ್ 2019 ರಂದು ನೆರೆಯ ಬಾಂಗ್ಲಾ ದೇಶದ ಬಾಂಗ್ಲಾದೇಶ್ ಮಹಿಳಾ ಪರಿಷದ್ ನ ಡಾ. ಫೌಝಿಯಾ ಮೋಸ್ಲೆಮ್ ರವರು ಶುಭಕೋರುವ ಮಾತುಗಳೊಂದಿಗೆ ಸಮ್ಮೇಳನದ ಕಲಾಪಗಳು ಪ್ರಾರಂಭವಾದವು. ಬಾಂಗ್ಲಾ ದೇಶದಲ್ಲಿನ ತಮ್ಮ ಅನುಭವಗಳನ್ನು ಹಂಚಿಕೊಂಡ ಅವರು ಸಮ್ಮೇಳನಕ್ಕೆ ಶುಭಕೋರಿದರು. ಬಾಂಗ್ಲಾದೇಶದಲ್ಲಿಯೂ ಹೆಚ್ಚುತ್ತಿರುವ ದೌರ್ಜನ್ಯಗಳು, ಜನವಿರೋಧಿ ನೀತಿಗಳ ನೇರ ಬಲಿ ಮಹಿಳೆಯರು ಎಂಬಿತ್ಯಾದಿ ಮಾತುಗಳಿಂದ ವಿಶ್ವದಾದ್ಯಂತ ಕಟ್ಟಬೇಕಾದ ಮಹಿಳಾ ಚಳುವಳಿಯ ಸಣ್ಣ ಕಲ್ಪನೆಯನ್ನು ಪಡೆಯಲು ಸಾಧ್ಯವಾಯಿತು. ಸಮ್ಮೇಳನಕ್ಕೆ ಕಿಸಾನ್ ಸಭಾ, ಸಿ.ಐ.ಟಿ.ಯು, ಎಸ್.ಎಫ್.ಐ ಡಿ.ವೈ.ಎಫ್.ಐ, ಕೃಷಿಕೂಲಿಕಾರ ಸಂಘಟನೆಗಳ ಪ್ರತಿನಿಧಿಗಳು ಆಗಮಿಸಿ ಶುಭ ಕೋರಿದರು.

29–12–2019ರಂದು ದೇಶದ ಮಹಿಳೆಯರನ್ನು ಬಾಧಿಸುವ ಕೆಳಗೆ ಕಾಣಿಸಿರುವ ಪ್ರಮುಖ ಎಂಟು ವಿಷಯಗಳ ಕುರಿತು ವಿಸ್ತೃತ ಚರ್ಚೆಗಾಗಿ ಎಂಟು ಕಮಿಷನ್ ಗಳಲ್ಲಿ ಮಂಡಿಸಿದ ವರದಿಗಳ ಮೂಲಕ ಚರ್ಚೆ ಮಾಡಲಾಯಿತು.

- ಪ್ರತಿಗಾಮೀ ಸಿದ್ಧಾಂತಗಳು, ಪಾಳೆಯಗಾರಿ ಮೌಲ್ಯಗಳ ಪುನರ್‌ಸ್ಥಾಪನೆ, ಆಳವಾಗುತ್ತಿರುವ ಅಸಮಾನತೆಗಳು
- ಮಹಿಳೆ–ಗ್ರಾಮೀಣ ಭಾರತದ ಕೃಷಿ ಬಿಕ್ಕಟ್ಟು
- ಮಹಿಳೆ ಮತ್ತು ನಗರೀಕರಣ
- ಮಹಿಳೆ ಮತ್ತು ಶಿಕ್ಷಣ
- ಮೋದಿ ಆಳ್ವಿಕೆಯಲ್ಲಿ ಮಹಿಳೆಯರ ಕಾನೂನಾತ್ಮಕ ಹಕ್ಕುಗಳ ಮೇಲಿನ ದಾಳಿ
- ಸಾಮಾಜಿಕ ಮಾಧ್ಯಮ ಮತ್ತು ಮಹಿಳೆಯರ ಮೇಲೆ ಪ್ರಭಾವ
- ಅಂಗವಿಕಲ ಮಹಿಳೆಯರ ಸಮಸ್ಯೆಗಳು
- ಎಲ್.ಜಿ.ಬಿ.ಟಿ.ಕ್ಯುಐಏ+ ಸಮಸ್ಯೆಗಳು

ಈ ಎಂಟು ಆಯೋಗಗಳ ಪ್ರತ್ಯೇಕ ಸಮಾನಾಂತರ ಅಧಿವೇಶನಗಳಲ್ಲಿಈ ವರದಿಗಳ ಕುರಿತು ಚರ್ಚೆ ನಡೆಸಿ ಶಿಫಾರಸುಗಳನ್ನು ಮಂಡಿಸಲಾಯಿತು.

ಸಮ್ಮೇಳನದ ಕೊನೆಯ ದಿನ ಡಿಸೆಂಬರ್ 30 ರಂದು ದೇಶದ ಎಲ್ಲ ವಿಭಾಗದ ಮಹಿಳೆಯರನ್ನು ತಲುಪುವ ಮತ್ತು ಅವರೊಂದಿಗೆ ಬೆರೆತು ಕೆಲಸ ಮಾಡುವ, ಮಹಿಳಾ ಚಳುವಳಿ ಕಟ್ಟುವ, ಬಿ.ಜೆ.ಪಿ–ಮೋದಿ ಸರ್ಕಾರದ ಮಹಿಳಾ ವಿರೋಧೀ ನೀತಿಗಳ ವಿರುದ್ಧ ಸಮರ ಸಾರುವ ಘೋಷಣೆ ಮಾಡಲಾಯಿತು. ಹತ್ತಾರು ವರ್ಷಗಳ ನಿರಂತರ ಪ್ರಯತ್ನದ ಫಲವಾದ ಅಲ್ಪ ಸ್ವಲ್ಪ ಸಾಧನೆಗಳನ್ನು ಮೂಲೋತ್ಪಾಟನೆ ಮಾಡುತ್ತಿರುವ ಮನುವಾದಿ ಕೋಮುವಾದೀ ಸಿದ್ಧಾಂತಗಳ ವಿರುದ್ಧ, ಸಂವಿಧಾನದ ಆಶಯಗಳನ್ನು ಬುಡಮೇಲು ಮಾಡುತ್ತಿರುವ ಸಂಘೀ ಪ್ರೇರಿತ ನೀತಿಗಳ ವಿರುದ್ಧ ಹೋರಾಟ ನಡೆಸಲು ಕರೆ ನೀಡಲಾಯಿತು. ದಲಿತ ಆದಿವಾಸಿ ಬುಡಕಟ್ಟು ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು ವಿವಿಧ ರೀತಿಯಲ್ಲಿ ಹೆಚ್ಚುತ್ತಿರುವುದನ್ನು ಸಮ್ಮೇಳನದ ಚರ್ಚೆಯಲ್ಲಿ ಗುರುತಿಸಲಾಯಿತು.

ನವ ಉದಾರವಾದೀ ನೀತಿಗಳು ತಂದ ಆರ್ಥಿಕ ಬಿಕ್ಕಟ್ಟು ಮಹಿಳೆಯರ ಬದುಕನ್ನು ನುಚ್ಚು ನೂರು ಮಾಡಿರುವುದನ್ನು, ಲಿಂಗ ಅಸಮಾನತೆಯ ಪ್ರಮಾಣದಲ್ಲಿ ಕಾಣಬರುತ್ತಿರುವ ಗಣನೀಯ ಹೆಚ್ಚಳವನ್ನು ಗುರುತಿಸಿತು. ಹಾಗೆಯೇ ತೀವ್ರ ಕೃಷಿ ಬಿಕ್ಕಟ್ಟಿನಿಂದಾಗಿ ಮಹಿಳೆಯರ ಉದ್ಯೋಗದ ಹಕ್ಕು, ಘನತೆಯ ಬದುಕಿನ ಹಕ್ಕು ಕುಸಿದಿದೆಯಲ್ಲದೇ ನಗರ ಉದ್ಯೋಗವೂ ಕ್ಷೀಣಿಸಿದ್ದು ಕೂಡಾ ಮುನ್ನೆಲೆಗ ಬಂತು. ಆರೋಗ್ಯ ಶಿಕ್ಷಣದಂತಹ ಮೂಲಭೂತ ಅಗತ್ಯಗಳೂ ಖಾಸಗೀ ಕ್ಷೇತ್ರಕ್ಕೆ ನೀಡಿ ಸಾರ್ವಜನಿಕ ಕಲ್ಯಾಣ ಯೋಜನೆಗಳಿಗೆ ತಿಲಾಂಜಲಿ ಇಟ್ಟ ಸಂಗತಿಗಳು ಚರ್ಚೆಯಲ್ಲಿ ವ್ಯಕ್ತವಾದವು. ಯುವ ಸಮೂಹದ ಬದುಕಿನ ಎಲ್ಲ ಆಶೋತ್ತರಗಳಿಗೂ ಕೊಳ್ಳಿ ಇಡುವ ಕೋಮುವಾದಿಗಳ ಆಡಂಬೋಲವಾಗುತ್ತಿರುವ ದೇಶದಲ್ಲಿ ತನ್ನ ಇಷ್ಟದ ಬಾಳ ಸಂಗಾತಿಯ ಆಯ್ಕೆಗೂ

ಪುಟ 14 ನೋಡಿ


'ದಲಿತ್ ಮಹಿಳೆ' ಪುಸ್ತಕ ಬಿಡುಗಡೆ


ಆಯ್ಕೆಯಾದ ನೂತನ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿ

ಮಹಿಳಾ ಪ್ರತಿರೋಧದ ಸಂಕೇತಗಳು

ಸಂಘರ್ಷಕ್ಕೆ ಮತ್ತೊಂದು ಹೆಸರೇ ಸ್ತ್ರೀ ಇರಬಹುದಾ? ಅತಿರೇಕವೆನಿಸುವುದಲ್ಲವೇ? ವಿಪರೀತ ಎನಿಸಿದರೂ ಆಶ್ಚರ್ಯವಿಲ್ಲ. ಆದರೆ ಅದು ನಿಜ. ಬಹುತೇಕ ಮಹಿಳೆಯರು ತಮ್ಮ ಅಸ್ತಿತ್ವಕ್ಕಾಗಿ, ಘನತೆಯ ಬದುಕಿಗಾಗಿ, ಮಾನವೀಯ ಮಿಡಿತಕ್ಕಾಗಿ ಪ್ರತಿ ಕ್ಷಣ ಪ್ರತಿ ದಿನ ಸಂಘರ್ಷಾತ್ಮಕ ಬದುಕು ನಡೆಸುವುದು ಕಣ್ಣಿಗೆ ಕಾಣುತ್ತದೆ. ಜನವಾದಿ ದೇಶದಾದ್ಯಂತ ಅಂತಹ ಮಹಿಳೆಯರ ಧ್ವನಿಯಾಗಿ ಕೆಲಸ ಮಾಡುತ್ತಲೇ ಇದೆ. ಮತ್ತು ಹಾಗೆ ಸಂಘರ್ಷದ ಕೆಚ್ಚು ಉಳಿಸಿಕೊಂಡು ಮಾದರಿಯಾದವರನ್ನು ಪರಿಚಯಿಸುವ, ಸನ್ಮಾನಿಸುವ ಕೆಲಸವನ್ನೂ ಮಾಡುತ್ತದೆ. ಹಾಗೆ ಮಾಡಲು ಅಖಿಲ ಭಾರತ ಸಮ್ಮೇಳನವೊಂದು ಅತ್ಯಂತ ಪ್ರಮುಖ ವೇದಿಕೆಯಾಗಿ ಮಾರ್ಪಡುತ್ತದೆ. 12ನೇ ಅಖಿಲ ಭಾರತ ಸಮ್ಮೇಳನದಲ್ಲಿ ಅಂಥ 8 ಜನರನ್ನು ಸಮ್ಮೇಳನದ ಉದ್ಘಾಟನೆಯ ಬಹಿರಂಗ ಸಭೆಯಲ್ಲಿ ಸಾರ್ವಜನಿಕವಾಗಿ ಸನ್ಮಾನಿಸಿ ಅವರ ಅನುಭವ ಕಥನಗಳನ್ನು ದೇಶದಾದ್ಯಂತದಿಂದ ಬಂದ ಪ್ರತಿನಿಧಿಗಳಿಗೆ ಕೇಳಿಸಲಾಯಿತು. ಕಣ್ಣಾಲಿಗಳೊಮ್ಮೆ ತುಂಬಿದವು, ಆಕ್ರೋಷ ಕ್ರೋಧ ಮೆಟ್ಟಿ ನಿಲ್ಲಲು ಸಂಘಟನೆ ಕಟ್ಟಿ ತೋರಿಸುತ್ತೇವೆ ಎಂಬ ಛಲ ತರಿಸಿದ ಗೋಷ್ಠಿ ಇದು.

1. ಸ್ನೇಹ ಮತ್ತು ಮಹೇಶ– ಏರ್ಪೇಡು ಪಟ್ಟಣ ಚಿತ್ತೂರು ಜಿಲ್ಲೆ ಆಂದ್ರ ಪ್ರದೇಶ:

ದಲಿತ ಸಮುದಾಯದ ಮಾಲಾ ಜಾತಿಯ ಯುವಕ ಮಹೇಶ್ ಹಿಂದುಳಿದ ಸಮುದಾಯಕ್ಕೆ ಸೇರಿದ ಯಾದವ ಜಾತಿಯ ಯುವತಿ ಸ್ನೇಹ, ಪ್ರೀತಿಗೆ ತಿರುಗಿ ಆಂದ್ರಪ್ರದೇಶದ ಚಿತ್ತೂರು ಜಿಲ್ಲೆಯಲ್ಲಿ 2019ರಲ್ಲಿ ಅಂತರ್ಜಾತೀಯ ವಿವಾಹ ಮಾಡಿಕೊಳ್ಳುತ್ತಾರೆ. ಸ್ನೇಹಾ ಕುಟುಂಬದವರಿಂದ ತೀವ್ರ ಒತ್ತಡ, ಕಿರುಕುಳಗಳ ಕಾರಣದಿಂದ ತಿರುಪತಿಯ ಪೋಲೀಸ್ ಸ್ಟೇಷನಿನಲ್ಲಿ ರಕ್ಷಣೆಗಾಗಿ ಮೊರೆ ಹೋಗುತ್ತಾರೆ. ಅಲ್ಲಿಂದ ಅವರನ್ನು ಅಲಿಪಿರಿಯ ಸರ್ಕಲ್ ಇನ್ಸ್ಪೆಕ್ಟರ್ ಬಳಿ ಕಳಿಸುತ್ತಾರೆ ಅಲ್ಲಿ ಯಾವ ಕ್ರಮವನ್ನೂ ಕೈಗೊಳ್ಳುವುದಿಲ್ಲ. ಅಕ್ಟೋಬರ 7 2019 ರಂದು ಸ್ನೇಹಾಳ ಕುಟುಂಬದ 200 ಮಂದಿ ಮಹೇಶ್ ನ ಹಳ್ಳಿಗೆ ನುಗ್ಗಿ ಮಹಿಳೆಯರನ್ನೇ ಗುರಿಯಾಗಿರಿಸಿಕೊಂಡು ದಾಳಿ ನಡೆಸಿದರು. ಮಹೇಶನ ನೆರೆ ಹೊರೆಯವರು ದಂಪತಿಗಳಿಗೆ ರಕ್ಷಣೆ ನೀಡಿ ಅವರನ್ನು ಜೀವ ಸಹಿತ ಪಾರು ಮಾಡಿದರು. ಜನವಾದಿ ಮತ್ತು ಇತರ ದಲಿತ ಸಂಘಟನೆಗಳ ಮಧ್ಯಪ್ರವೇಶದಿಂದ ಸಾರ್ವಜನಿಕ ಅಭಿಪ್ರಾಯ ಮೂಡಿಸಿ, ಒತ್ತಡ ನಿರ್ಮಿಸಿ ಅವರು ಬದುಕು ನಡೆಸುವಂತೆ ವ್ಯವಸ್ಥೆ ಕಲ್ಪಿಸಲಾಯಿತು. ಮಹೇಶ್ ಮತ್ತು ಸ್ನೇಹಾ ಸಂಘರ್ಷ ಗೋಷ್ಠಿಯಲ್ಲಿ ಹಾಜರಿದ್ದು ತಮ್ಮ ಅನುಭವಗಳನ್ನು ಹಂಚಿಕೊಂಡರು. ಇದೊಂದೆ ಪ್ರತ್ಯೇಕ ಪ್ರಕರಣವೇನಲ್ಲ. 2017ರಲ್ಲಿ ದಲಿತ ಯುವಕನನ್ನು ಮದುವೆಯಾದಳೆಂದು ಹೈಮವತಿ ಎಂದು ಪೋಷಕರೇ ಆಕೆಯ ಕೊಲೆ ಮಾಡಿದರು. ಇಂಥಹ ಸಂಗತಿಗಳು ಒಂದೆರಡಲ್ಲ. ಹೈಮವತಿ ಕೂಡಾ ಪ್ರೀತಿಸಿ ಮದುವೆಯಾಗಿದ್ದು ದಲಿತ ಹುಡುವ ಕೇಶವುಲು ವನ್ನು. ಎಲ್ಲ ಪ್ರಕರಣಗಳ ಹಾಗೇ ಪೋಷಕರು ಪೋಲೀಸರ ಮೇಲೆ ಪ್ರಭಾವ ಬೀರಿ ಮಗಳು ಮನೆಗೆ ಬರುವಂತೆ ಒತ್ತಡ ಹೇರಿದರು. ಅವಳು ನಿರಾಕರಿಸಿದಳು. ಪ್ರೀತಿಯಲ್ಲಿ ಹುಟ್ಟಿದ ಮಗುವನ್ನು ಚೆಕ್ ಅಪ್ ಗೆ ಕರೆದುಕೊಂಡು ಹೋಗುತ್ತಿರುವಾಗ ಪೋಷಕರ ಕಡೆಯವರು ಅವರ ಮೇಲೆ ಹಲ್ಲೆ ಮಾಡಿ ಅವಳನ್ನು ಹತ್ತಿರದ ಹೊಲಕ್ಕೆ ಎಳೆದುಕೊಂಡು ಹೋಗಿ ಕೊಚ್ಚಿ ಕೊಲ್ಲುತ್ತಾರೆ. ಹಾಗೆಯೇ ಚಂದನಾ ದಲಿತ ಯುವಕನನ್ನು ಪ್ರೀತಿಸಿ ಮದುವೆಯಾದಳೆಂದು ಪೋಷಕರಿಂದ ಕೊಲೆಯಾದವಳು. ಇವುಗಳ ವಿರುದ್ಧ ಜನವಾದಿ ಹೋರಾಟ ಮಾಡಿದೆ. ಚಂದ್ರಬಾಬು ನಾಯ್ಡು ರವರ ಸ್ವಕ್ಷೇತ್ರ ಚಿತ್ತೂರು. ಆಳುವ ವರ್ಗದ ರಾಜಕಾರಣಿಗಳ ನಿರ್ಲಕ್ಷ ಮನೋಭಾವಕ್ಕೆ ಈ ಘಟನೆಗಳು ನೇರ ಸಾಕ್ಷಿಗಳಂತಿವೆ. ಸ್ನೇಹಾ ಮಹೇಶ್ ರಂಥಹ ವ್ಯಕ್ತಿಗಳು ಮತ್ತು ಇತರ ಪ್ರಜಾಪ್ರಭುತ್ವವಾದೀ ಸಂಘಟನೆಗಳು, ಶಕ್ತಿಗಳು ಮಾತ್ರವೇ ಈ ತೆರನ ದುರ್ವರ್ತನೆಗಳ ವಿರುದ್ಧ ಹೋರಾಟ ನಡೆಸಿವೆ. ಜನವಾದಿ ಈ ಧೈರ್ಯವಂತ ದಂಪತಿಗಳಿಗೆ ಶರಣೆನ್ನುತ್ತದೆ, ಅಭಿನಂದನೆಗಳನ್ನು ಸಲ್ಲಿಸುತ್ತದೆ.

2. ಸೂರಜ್ ಖಾರ್‌ಖೌದಾ ಗ್ರಾಮ, ಸೋನಿಯಾ ಪೇಟ್, ಹರ್ಯಾಣ:

23ರ ವಯಸ್ಸಿನ ಸೂರಜ್, ಪ್ರಥಮ ವರ್ಷದ ಪದವಿಯಲ್ಲಿ ಓದುತ್ತಿದ್ದ ದಲಿತ ವಿದ್ಯಾರ್ಥಿ. ತಂದೆಯೊಬ್ಬ ದಿನಗೂಲಿ ನೌಕರ. ಸಹೋದರ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಪ್ರದೀಪನ ಹೆಂಡತಿ ಸುಶೀಲಾ ಜಾಟ್ ಕುಲದವಳು. ನಾಲ್ಕು ವರ್ಷದ ಹಿಂದೆ ಮದುವೆಯಾದವರು. ಮೂರು ವರ್ಷದ ಮಗುವೂ ಇದೆ. ಪ್ರಾರಂಭದಲ್ಲಿ ಊರ ಹೊರಗೆ ಬದುಕುತ್ತಿದ್ದ ಅವರು ನಂತರ ಕುಟುಂಬದ ಉಳಿದವರ ಜೊತೆಯೇ ಬದುಕಲೆಂದು ಮನೆಗೆ ಬಂದವರು. ಯುವತಿಯ ಕುಟುಂಬದ ಜೊತೆ ಯಾವ ಸಂಪರ್ಕವನ್ನೂ ಹೊಂದಿರಲಿಲ್ಲ. ನಿಧಾನವಾಗಿ ಅವರೊಡನೆ ಸಂಪರ್ಕ ಬೆಳೆಸಿತು ಕುಟುಂಬ. ನಂತರ ಇದ್ದಕ್ಕಿದ್ದ ಹಾಗೆ ನವೆಂಬರ್ 18 2016 ರಂದು ಸುಶೀಲಾಳ ಸಹೋದರ ಪ್ರದೀಪನ ಮನೆಗೆ ನುಗ್ಗಿ ಪ್ರದೀಪ ಮತ್ತು ಆತನ ಪೋಷಕರನ್ನು ಕೊಲೆ ಮಾಡುತ್ತಾನೆ. ಸೂರಜ್ ಮತ್ತು ಸುಶೀಲಾ ಮಗುವಿನೊಂದಿಗೆ ಹೇಗೋ ತಪ್ಪಿಸಿಕೊಳ್ಳುತ್ತಾರೆ. ಪೋಲೀಸರು ಪ್ರಕರಣ ದಾಖಲಿಸಿಕೊಳ್ಳುವುದಿಲ್ಲ. ಆಗ ಸುಶೀಲಾ ಎರಡನನೇ ಮಗುವಿನ ಗರ್ಭಿಣಿ. ನಂತರ ಸುಶೀಲಾಗೆ ಸಿಸೇರಿಯನ್ ಹೆರಿಗೆ ಆಗಬೇಕಾಗುತ್ತದೆ. ಮನೆಯ ದುಡಿಯುವ ಜನರ ಸಾವು, ಹಳ್ಳಿಗರಿಂದ ಸಹಾಯ ನಿರಾಕರಣೆ, ಎಂಟು ತಿಂಗಳು ಸರ್ಕಾರ ಪ್ರಕರಣ ದಾಖಲಿಸಿಕೊಳ್ಳಲಿಲ್ಲ, ಯಾವ ಪರಿಹಾರವೂ ಇಲ್ಲ ಪೋಲೀಸ್ ರಕ್ಷಣೆಯೂ ಇಲ್ಲ. ಹತಾಶಳಾದ ಸುಶೀಲಾ ಪೋಷಕರ ಜೊತೆ ಹೊರಟು ಹೋಗುತ್ತಾಳೆ. ಕೊನೆಗೆ ಉಳಿದಿದ್ದು ಸೂರಜ್ ಮಾತ್ರ. ಪ್ರಕರಣವನ್ನು ಹಿಂತೆಗೆದುಕೊಳ್ಳುವಂತೆ ಒತ್ತಡ, ಲಕ್ಷಾಂತರ ರೂಪಾಯಿಗಳ ಆಮಿಷ, ನ್ಯಾಯಾಲಯದಲ್ಲಿ ಸಾಕ್ಷಿ ಹೇಳದಂತೆ ಒತ್ತಾಯ ಇವೆಲ್ಲವನ್ನೂ ಮೀರಿ ನಿಂತ ಸೂರಜ್ ಮತ್ತು ಅಚಲವಾಗಿ ಆತನೊಡನೆ ನಿಂತ ಜನವಾದಿಯ ಕಾರಣದಿಂದ ಕೊನೆಗೂ ಆರೋಪಿಗಳ ಬಂಧನ ಮತ್ತು 24 ಲಕ್ಷ ರೂಪಾಯಿಗಳ ಪರಿಹಾರ ತೀರ್ಮಾನವಾಯಿತು. ಈಗಲೂ ಪ್ರಕರಣ ನಡೆಯುತ್ತಿದೆ. ಸೂರಜ್ ಹೋರಾಟ ನಡೆಸುತ್ತಲೇ ಇದ್ದಾನೆ. ಜನವಾದಿ ಆತನಿಗೆ ಸಲ್ಯೂಟ್ ಹಾಕುತ್ತದೆ.

3. ಕಾಮ್ರೆಡ್ ಸಜಿನಿ, ಕಣ್ಣೂರು ಗ್ರಾಮ ಕಣ್ಣೂರು ಕೇರಳ:

ಜುಲೈ 11 2016 ರಂದು ಆರ್.ಎಸ್.ಎಸ್. ಗೂಂಡಾಗಳಿಂದ ಹಲ್ಲೆಗೊಳಗಾಗಿ ಜೀವತೆತ್ತ ಕಾಮ್ರೆಡ್ ಸಿ.ವಿ.ಧನರಾಜ್ ಪತ್ನಿ ಸಜಿನಿ. ಎಡಶಕ್ತಿಗಳ ಭದ್ರಕೋಟೆ ಎಂದೇ ಕರೆಯಿಸಿಕೊಂಡಿರುವ ಕಣ್ಣೂರಿನ ಎಡ ಚಳುವಳಿಯ ಯುವಜನ ಸಂಘಟನೆಯ ಮುಖಂಡ ದೇವರಾಜ್. ಸಂಘಿಗಳ ಗೂಂಡಾಗಿರಿಗೆ ಕಣ್ಣೂರಿನಲ್ಲಿ 66 ಜನ ಬಲಿಯಾಗಿದ್ದಾರೆ. ಕಳೆದ ನಾಲ್ಕು ವರ್ಷಗಳಲ್ಲಿ, ಎಡರಂಗ ಸರ್ಕಾರ ಬಂದ ಮೇಲೇ ಆರ್.ಎಸ್.ಎಸ್ ನ ಕ್ರಿಮಿನಲ್ ರಾಜಕಾರಣದ ವಿರುದ್ಧ ಹೋರಾಡಿದ ನಾಲ್ಕು ಜನರ ಜೀವ ಬಲಿಯಾಗಿದೆ. ದೇವರಾಜ್ ಮೇಲೆ ಹಲ್ಲೆಯಾಗಿ ಕೊಲೆಯಾಗುವಾಗ ಆಕೆಗೆ 33 ವರ್ಷ. ಮೊದಲ ಮಗ ವಿವೇಕಾನಂದನಿಗೆ 10 ವರ್ಷ ಎರಡನೇ ಮಗ ವಿದ್ಯಾನಂದ 2 ವರ್ಷದವನ್ನು. ತಂದೆಯ ಕೊಲೆ ಆ ಮಕ್ಕಳಿಗೆ ಕಲ್ಪಿಸಲಾರದ ಶಾಕ್. ಅವರಿಗೆ ತಮ್ಮ ತಂದೆಯಂತೆಯೇ ತಾಯಿಯನ್ನೂ ಕೊಂದರೆ ಎಂಬ ಭಯ. ಶಾಲೆಗೆ ಹೋಗಲೂ ಒಲ್ಲೆ ಎನ್ನುತ್ತಾರೆ ಅವರು. ದೇವರಾಜ್ ಕೂಲಿ ಮಾಡುತ್ತಿದ್ದವರು. ಸಜಿನಿ ಮತ್ತು ಮಕ್ಕಳಿಗೆ ಜೀವನೋಪಾಯಕ್ಕೆ ಆದಾಯವಿಲ್ಲದ ಸ್ಥಿತಿ.

ಆದರೆ ಜನವಾದಿ ಮಹಿಳಾ ಸಂಘಟನೆ ಆಕೆಗೆ ಆಸರೆ ನೀಡಿತು. ಅವಳಿಗೆ ಅಗತ್ಯವಾದ ಸಾಂತ್ವನ, ಧೈರ್ಯ ನೀಡಿತು. ಡಿ.ವೈ.ಎಫ್.ಐ ಮತ್ತು ಸಿ.ಪಿ.ಐ.(ಎಂ) ಗಳ ಸಹಾಯದಿಂದ ಆಕೆಗೊಂದು ಮನೆ ಕಟ್ಟಿಕೊಡಲಾಯಿತು. ಸಹಕಾರಿ ಬ್ಯಾಂಕಿನಲ್ಲಿ ಕೆಲಸವೂ ಸಿಕ್ಕಿತು. ಈಗ ಸಂಗಾತಿಯಿಲ್ಲದ ನೋವಿನೊಂದಿಗೇ ಮಕ್ಕಳೊಂದಿಗೆ ಆಕೆ ಸ್ವಲ್ಪ ನೆಮ್ಮದಿಯ ಬದುಕು ನಡೆಸುತ್ತಿದ್ದಾಳೆ. ಇದಕ್ಕೆ ಕಾರಣವಾದ ಜನವಾದಿಯ ಜೊತೆ ಈಗ ಅವಳು ಅಚಲವಾಗಿ ನಿಂತಿದ್ದಾಳೆ. ಆಕೆಯೀಗ ಜನವಾದಿ ಕಣ್ಣೂರು ಘಟಕದ ಜಂಟಿ ಕಾರ್ಯದರ್ಶಿ. ಆರ್. ಎಸ್.ಎಸ್ ಗೂಂಡಾಗಳಿಗೆ ಸವಾಲೆಸೆಯುವಂತೆ ಜನವಾದಿಯ ಕಾರ್ಯಕರ್ತಳಾಗಿ ಬೆಳೆದ ಸಜಿನಿ ಮಾದರಿಯೇ.

4. ರೇಖಾ ಸೂತ್ರಧಾರ್: ಉತ್ತರ ಪಡಂಬಿಲ್ ಗ್ರಾಮ, ಪಡಂಬಿಲ್ ಸಬ್‌ಡಿವಿಷನ್, ಉತ್ತರ ತ್ರಿಪುರಾ:

ರೇಖಾ ಸೂತ್ರಧಾರ್ ಬಿ.ಜೆ.ಪಿ.ಗೂಂಡಾಗಳಿಂದ ಹಲ್ಲೆಗೊಳಗಾಗಿ ಜೀವ ತೆತ್ತ ಸಿ.ಪಿ.ಐ(ಎಂ) ಕಾರ್ಯಕರ್ತ ತಪಸ್ ಸೂತ್ರಧಾರನ ಹೆಂಡತಿ. ಜೂನ್ 18 2018 ರಂದು ಬಿ.ಜೆ.ಪಿ ಗೂಂಡಾಗಳು ಆತನನ್ನು ಸಾಯಿಸುತ್ತಾರೆ. ತಪಸ್ ಸೂತ್ರಧಾರ್ ಚುನಾಯಿತ ಪಂಚಾಯತ್ ಸದಸ್ಯ ಮತ್ತು ಸಿ.ಪಿ.ಐ(ಎಂ) ನ ಸ್ಥಳೀಯ ಸಮಿತಿ ಸದಸ್ಯ ಕೂಡ. ಇಬ್ಬರೂ ಹಿಂದುಳಿದ ವರ್ಗಕ್ಕೆ ಸೇರಿದವರು. ಗಂಡನ ಮರಣದ ನಂತರ ರೇಖಾ ಈಗ ಬದುಕುತ್ತಿರುವುದು ಸಿ.ಪಿ.ಐ(ಎಂ) ಪಕ್ಷ ಕೊಡುತ್ತಿರುವ ಮಾಸಿಕ ಅಲೋಯೆನ್ಸ್ 2500 ರೂಪಾಯಿಗಳಲ್ಲಿ ಮಾತ್ರ. 2010 ರಿಂದ ಎಡ ಚಳುವಳಿಯ ಜೊತೆಗೆ ಕೆಲಸ ಮಾಡುತ್ತಿರುವ ರೇಖಾ ಗಂಡನ ಕೊಲೆಯ ನಂತರವೂ ಧೈರ್ಯದಿಂದ ತನ್ನ ಕೆಲಸವನ್ನು ಮುಂದುವರೆಸಿದ್ದಾಳೆ. ಬಿ.ಜೆ.ಪಿ ಯ ಒತ್ತಡದ ನಡುವೆಯೂ ಅದರ ವಿರುದ್ಧದ ತನ್ನ ಹೋರಾಟದಲ್ಲಿ ವಿಚಲಿತಳಾಗಿಲ್ಲ. ಅವಳಿಗೆ ಜನವಾದಿ ಅಭಿನಂದನೆ ಸಲ್ಲಿಸಿತು.



5. ಚ್ಛಬಿಲಾ ಬೀಬಿ, ದುರ್ಲಾವ್ ಪುರ್, ಉತ್ತರ 24 ಪರಗಣ, ಪ..ಬಂಗಾಲ:

ಮುಸ್ಲಿಂ ಸಮುದಾಯದ ಹಿಂದುಳಿದ ವರ್ಗಕ್ಕೆ ಸೇರಿದ ಚ್ಛಬೀಲಾ 29 ವಯಸ್ಸಿನವಳು. ಎಂಟನೇ ತರಗತಿಯಷ್ಟೇ ಓದಿರುವ ಆಕೆ ದಿನಗೂಲಿ ನೌಕರಳು. ದಿನವೊಂದಕ್ಕೆ ಆಕೆಯ ಗಳಿಕೆ 190 ರೂಪಾಯಿಗಳು. 2013 ರಲ್ಲಿ ನಡೆದ ಪಂಚಾಯತ್ ಚುನಾವಣೆಯ ಸಂದರ್ಭದಲ್ಲಿ ಆಕೆ ತೃಣಮೂಲ ಕಾಂಗ್ರೆಸ್ ಗೂಂಡಾಗಳಿಂದ ತೀವ್ರ ತೊಂದರೆಗೊಳಗಾದವಳು. ಹಿಂದುಳಿದ ವರ್ಗಕ್ಕೆ ಮೀಸಲಾದ ಅಮಡಂಗಾ ಪಂಚಾಯತ್ ಗೆ ಆಕೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಾಳೆ. ನಾಮಪತ್ರ ಸಲ್ಲಿಸಲು ಬಿ.ಡಿ.ಓ ರಿಂದ ಪಡೆಯಬೇಕಾದ ಜಾತಿ ಪ್ರಮಾಣಪತ್ರ ದ ಸಂದರ್ಭದಿಂದಲೇ ಆಕೆಯ ಹೋರಾಟ ಪ್ರಾರಂಭವಾಗುತ್ತದೆ. ನಾಮಪತ್ರ ಸಲ್ಲಿಸದಂತೆ ಒತ್ತಡ, ಹಿಮ್ಮೆಟ್ಟದೇ ಚುನಾವಣೆಯಲ್ಲಿ ಜಯವನ್ನೂ ಗಳಿಸುತ್ತಾಳೆ. ಜಯ ಗಳಿಸಿದ ನಂತರವೂ ಆಕೆಯ ಮೇಲೆ ಹಲ್ಲೆ ನಡೆಯುತ್ತದೆ. ಆಯ್ಕೆಯಾದವಳೆಂದು ಪ್ರಮಾಣಪತ್ರ ಪಡೆಯುವಾಗಲೂ ಆಕೆಯ ಮೇಲೆ ದೈಹಿಕ ಹಲ್ಲೆ ನಡೆಯುತ್ತದೆ. ಹೊಸ ಪಂಚಾಯತ್ ರಚನೆಯಾಗುವ ಹಿಂದಿನ ದಿನ ಆಕೆಯ ಮನೆಯ ಮೇಲೆ ಬಾಂಬ್ ಹಾಕಲಾಗುತ್ತದೆ. ತೀವ್ರ ಗಾಯಾಳುವಾದ ಗಂಡನ ಮೇಲೆ ಸುಳ್ಳು ಆರೋಪ ಹೊರಿಸಲಾಗುತ್ತದೆ. ಮಗನ ಶಿಕ್ಷಣದ ಮೇಲೆ ದುಷ್ಪರಿಣಾಮ ಬೀರುತ್ತದೆ. ಆದರೂ ಆಕೆ ತೃಣಮೂಲ ಗೂಂಡಾಗಳಿಗೆ ಶರಣಾಗುವುದಿಲ್ಲ. ಮನೆ ಬಿಟ್ಟು ಬೇರೆಡೆ ಬದುಕುವ ಗತಿ ಬಂದಿದೆಯಾದರೂ ಜನವಾದಿಯ ಕಾರ್ಯಕರ್ತಳಾಗಿ ಮುಂದುವರೆದಿದ್ದಾಳೆ. ಅವಳ ಧೈರ್ಯ ಸಾಹಸಗಳು ಜನವಾದಿಯ ಗೆಳತಿಯರಿಗೊಂದು ಸ್ಫೂರ್ತಿ ಎಂದು ಆಕೆಯನ್ನು ಅಭಿನಂದಿಸಲಾಯಿತು.

6. ಸಕ್ಕೂಬಾಯಿ ಮತ್ತು ಕಲಾಬಾಯಿ, ಮಹಾರಾಷ್ಟ್ರ:

ದೇಶವೇ ನಿಬ್ಬೆರಗಾಗಿ ನೋಡಿದ ರೈತರ ಮಹಾಪಾದಯಾತ್ರೆಯ ಹೀರೋಯಿಣಿಗಳಲ್ಲಿ ಸಕ್ಕೂಬಾಯಿ ಕಲಾಬಾಯಿ ಇಬ್ಬರೂ ಕೂಡ ಪಾಲ್ಗೊಂಡವರು. ಸಕ್ಕೂಬಾಯಿ ಯಾವತ್ ಮಲ್ ನವಳು, ಕಲಾಬಾಯಿ ಧಹಾನು ತಾಲೂಕಿನವಳು. ಇಬ್ಬರೂ ಆದಿವಾಸಿ ಮಹಿಳೆಯರು. 200 ಕಿ.ಮೀ. ಪಾದಯಾತ್ರೆಯಲ್ಲಿ ನಾಸಿಕ್ ನಿಂದ ಮುಂಬೈಗೆ ಬಂದವರು. ಈ ಇಬ್ಬರೂ ಆದಿವಾಸಿ ರೈತ ಮಹಿಳೆಯರು ಜನವಾದಿಯ ಸಕ್ರಿಯ ಕಾರ್ಯಕರ್ತರು. ಅರಣ್ಯವಾಸಿಗಳು ತಮ್ಮ ಹಕ್ಕಿಗಾಗಿ ನಡೆಸುತ್ತಿರುವ ಹೋರಾಟಗಳಲ್ಲಿ ಸಕ್ರಿಯರು. ಅರಣ್ಯ ಕಾಯ್ದೆಯ ಸಮರ್ಪಕ ಅನುಷ್ಠಾನಕ್ಕಾಗಿ ನಡೆಯುತ್ತಿರುವ ಹೋರಾಟಗಳಲ್ಲಿ ನಿರಂತರ ಪಾಲ್ಗೊಳ್ಳುವ ಧೀರ ಮಹಿಳೇಯರು. ಅವರ ಅಸಾಮಾನ್ಯ ಸಾಹಸಕ್ಕೆ ಜನವಾದಿ ಅಭಿನಂದಿಸಿತು.

7. ಗೋಮತಿ ರೆಡ್ಡಿಯಾರ್, ಕಡಲೂರು ಜಿಲ್ಲೆ, ತಮಿಳ್ನಾಡು:

18 ವಯಸ್ಸಿನ ಪರಿಶಿಷ್ಟ ಜಾತಿಯ ಯುವತಿ. ದಿನಗೂಲಿಯ ಕೃಷಿ ಕೂಲಿಕಾರ್ಮಿಕಳು. ನೀರು ತರಲು ಕಾಲುವೆಯ ಬಳಿ ಹೋದಾಗ ಪ್ರಕಾಶ್ ಎಂಬ ವ್ಯಕ್ತಿಯಿಂದ ಆಕೆಯ ಮೇಲೆ ಅತ್ಯಾಚಾರ ನಡೆಯುತ್ತದೆ. ಅವಳ ಕೂಗು ಕೇಳಿ ಓಡಿ ಬಂದ ಸಹೋದರಿಯ ಸಹಾಯದಿಂದ ಪಾರಾಗುತ್ತಾಳೆ. ಸುದ್ದಿ ತಿಳಿದ ಜನವಾದಿ ಅವಳ ಸಹಾಯಕ್ಕೆ ಧಾವಿಸುತ್ತದೆ. ಸಂಘಟನೆಯ ಪ್ರಯತ್ನದಿಂದ ಆರೋಪಿಯನ್ನು ಹಿಡಿದು ಪೋಲೀಸ್ ವಶಕ್ಕೆ ಒಪ್ಪಿಸಲಾಗುತ್ತದೆ. ಪ್ರಕರಣ ದಾಖಲಿಸಿಕೊಳ್ಳಲು ಮುಂದಾಗದ ಪೋಲೀಸ್ ಇಲಾಖೆ ಜನವಾದಿಯ ಕಾರಣದಿಂದ ದಾಖಲಿಸಿಕೊಳ್ಳಬೇಕಾಗುತ್ತದೆ. ಆಕೆಗೆ ವೈದ್ಯಕೀಯ ಚಿಕಿತ್ಸೆಯನ್ನೂ ಕೊಡಿಸಲಾಗುತ್ತದೆ. ಪ್ರಕರಣ ನಡೆದಿದೆ. ಆಕೆಯೀಗ ಜನವಾದಿಯ ಕಾರ್ಯಕರ್ತೆ. ಆರೋಪಿ ಪೋಲಿಸರ ವಶದಲ್ಲಿ.

“ಭಾರತದಲ್ಲಿ ಕ್ರಾಂತಿಯ ಸಂಭವ ಇದೆ–ಇಂದಲ್ಲದಿದ್ದರೆ ನಾಳೆ.. ಅದು ಅನಿವಾರ್ಯವಾಗಲಿದೆ”
ಬ್ರಿಟಿಶ್ ನಾಯಾಲಯದ ಮುಂದೆ ಮೀರತ್ ಪಿತೂರಿ ಪ್ರಕರಣದ ಆರೋಪಿಗಳ ಹೇಳಿಕೆ

ಶತಮಾನೋತ್ಸವ ಲೇಖನ ಮಾಲೆ-9

1920-2020

ಮಾರ್ಚ್ 20, 1929ರಂದು ದೇಶದ ವಿವಿಧ ಭಾಗಗಳಲ್ಲಿ 31 ಕಾರ್ಮಿಕ, ರೈತ ಮತ್ತು ಯುವಜನ ಮತ್ತು ಎಲ್ಲ ಪ್ರಮುಖ ಕಮ್ಯೂನಿಸ್ಟ್ ಮುಖಂಡರನ್ನು ಬಂಧಿಸಿ ಮೇರಠ್ ಜೈಲಿಗೆ ರವಾನಿಸಲಾಯಿತು, ಬ್ರಿಟಿಶ್ ಸಾಮ್ರಾಟನನ್ನು ಕಿತ್ತೊಗೆಯುವ ಪಿತೂರಿ ನಡೆಸಿದ್ದಾರೆ ಎಂದು ಅವರ ಮೇಲೆ ಆರೋಪಗಳನ್ನು ಹೊರಿಸಿ ವಿಚಾರಣೆಗೆ ಗುರಿಪಡಿಸಲಾಯಿತು. ನಾಲ್ಕು ವರ್ಷಗಳ ಕಾಲ ವಿಚಾರಣೆ ನಡೆಯಿತು. ಈ ವಿಚಾರಣೆಯನ್ನು, ಪಕ್ಷದ ಧ್ಯೇಯ–ಧೋರಣೆಗಳನ್ನು ದೇಶಬಾಂಧವರಿಗೆ ತಿಳಿಸುವ ವೇದಿಕೆಯಾಗಿ ಪರಿವರ್ತಿಸಿಕೊಳ್ಳಲು ಬಂಧಿತರಲ್ಲಿ 18 ಕಮ್ಯೂನಿಸ್ಟ್ ಮುಖಂಡರು ನಿರ್ಧರಿಸಿ 400 ಪುಟಗಳಷ್ಟು ದೀರ್ಘವಾದ ಹೇಳಿಕೆಯೊಂದನ್ನು ಬ್ರಿಟಿಶ್ ನ್ಯಾಯಾಲಯದ ಮುಂದೆ ಮಂಡಿಸಿದರು. ಈ ಮೂಲಕ ಈ ವಿಚಾರನೆ ದೇಶದಲ್ಲೂ, ವಿದೇಶಗಳಲ್ಲೂ ಚರ್ಚೆಗಳ ವಿಷಯವಾಯಿತು.

ಕನ್ನಡಕ್ಕೆ: ಟಿ.ಸುರೇಂದ್ರ ರಾವ್

ಮೀರತ್ ಪಿತೂರಿ ಪ್ರಕರಣದ ಆರೋಪಿಗಳಲ್ಲಿನ ಹದಿನೆಂಟು ಕಮ್ಯುನಿಸ್ಟರು ತಾವು ಹೋರಾಟ ಮಾಡುತ್ತಿರುವುದು ಯಾವ ತಾತ್ವಿಕ ನೆಲೆಯ ಮೇಲೆ ಎಂಬುದನ್ನು ನ್ಯಾಯಾಲಯಕ್ಕೆ ವಿವರವಾಗಿ ತಿಳಿಸುವ ಸಲುವಾಗಿ ಒಂದು ಸಾರ್ವತ್ರಿಕ ಹೇಳಿಕೆಯನ್ನು ನೀಡಲು ನಿರ್ಧರಿಸಿದರು. ಮೂಲತಃ 400 ಪುಟಗಳಷ್ಟು ಉದ್ದವಿರುವ ಆ ಸಾರ್ವತ್ರಿಕ ಹೇಳಿಕೆಯನ್ನು ಆರ್. ಎಸ್.ನಿಂಬ್ಕರ್ ಅವರು ವಿಧ್ಯುಕ್ತವಾಗಿ ಡಿಸೆಂಬರ್ 2. 1931ರಂದು ಮಂಡಿಸಿದರು, ಜನವರಿ 18, 1932ರಂದು ಪೂರ್ಣಗೊಳಿಸಿದರು. ಎಸ್.ಎ.ಡಾಂಗೆಯವರು ಪ್ರತ್ಯೇಕವಾದ ಹೇಳಿಕೆಯೊಂದನ್ನು ನೀಡಿದರು, ಏಕೆಂದರೆ ಅವರು ಆ ಸಮಯದಲ್ಲಿ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿರಲಿಲ್ಲ (ಅಶಿಸ್ತಿನ ಕಾರಣದಿಂದ ಪಕ್ಷದಿಂದ ಅಮಾನತ್ತಾಗಿದ್ದರು). 18 ಆರೋಪಿಗಳ ಸಾರ್ವತ್ರಿಕ ಹೇಳಿಕೆಯು ಭಾರತದಲ್ಲಿನ ಕಮ್ಯುನಿಸ್ಟ್ ಪಕ್ಷದ ಚಿಂತನೆಗಳ ಮೊಟ್ಟಮೊದಲ ಸವಿಸ್ತಾರವಾದ ನಿರೂಪಣೆಯಾಗಿದೆ ಮತ್ತು ಅವರ ವಿಚಾರಗಳು ಎಷ್ಟು ದೂರದೃಷ್ಟಿಯದಾಗಿದ್ದವು ಎನ್ನುವುದನ್ನು ವ್ಯಕ್ತಗೊಳಿಸಿದೆ. ಆ ಸಾರ್ವತ್ರಿಕ ಹೇಳಿಕೆಯಿಂದ ಎತ್ತಿತೆಗೆದ ಕೆಲವು ತುಣುಕುಗಳು ಈ ಕೆಳಗಿವೆ:

“ಬ್ರಿಟಿಷ್ ಬಂಡವಾಳಶಾಹಿಯು ಭಾರತಕ್ಕೆ ಬಂದಾಗ ಆ ಸಮಯದಲ್ಲಿ ಭಾರತದಲ್ಲಿ ಇನ್ನೂ ರೂಢಿಯಲ್ಲಿದ್ದ ಪಾಳೇಗಾರಿ ವ್ಯವಸ್ಥೆಗಿಂತ ಮುಂದುವರೆದಿದ್ದ ಒಂದು ಸಾಮಾಜಿಕ ವ್ಯವಸ್ಥೆಯನ್ನು ಅದು ಪ್ರತಿನಿಧಿಸುತ್ತಿತ್ತು, ಆದಕಾರಣ ಭಾರತದಲ್ಲಿನ ಅದರ ಕೆಲಸಗಳಲ್ಲಿ ಕೆಲವು ಪಗತಿಪರ ಲಕ್ಷಣಗಳು ಒಳಗೊಂಡಿದ್ದವು. ಅವುಗಳಲ್ಲಿ, ಬಂಡವಾಳಶಾಹಿ ಪ್ರಜಾಪ್ರಭುತ್ವ ಕ್ರಾಂತಿಯ ಲಕ್ಷಣಗಳಾದ, ಕೆಲವು ಸೃಜನಾತ್ಮಕ ಮತ್ತು ತಕ್ಷಣದಲ್ಲಿ ವಿನಾಶಕಾರಿಯಾದ ಕ್ರಮಗಳನ್ನು ಕೈಗೊಂಡಿತು. ಆದರೆ ಆ ಸಮಯದಲ್ಲಿ ಕೂಡ ಅದು ಕೆಲವು ಪ್ರತಿಗಾಮಿ ಲಕ್ಷಣಗಳನ್ನು ಒಳಗೊಂಡಿತ್ತು. ಅದಾಗಲೇ ಭಾರತದ ಪಾಳೇಗಾರಿ ವ್ಯವಸ್ಥೆಯಲ್ಲಿ ರೂಢಿಯಲ್ಲಿದ್ದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಮುನ್ನಡೆಗೆ ದೊಡ್ಡ ಅಡಚಣೆಯಾಗಿರುವ ಪದ್ಧತಿಗಳನ್ನು ಅದು ಉತ್ತೇಜಿಸಿತು ಮತ್ತು ಉಳಿಸಿಕೊಂಡು ಬಂದಿತು.ಅದರ ಪರಿಣಾಮವಾಗಿ ಅದರ ನೀತಿ ಈಗ ಸಂಪೂರ್ಣವಾಗಿ ಪ್ರತಿಗಾಮಿಯಾಗಿದೆ . . .ಅದು ಉದ್ದಿಮೆಗಳು ಮತ್ತು ಕೃಷಿ ಎರಡಕ್ಕೂ ಸಂಬಂಧಪಟ್ಟಂತೆ ಉತ್ಪಾದನಾ ಶಕ್ತಿಗಳ ಮುನ್ನಡೆಗೆ ನಿಶ್ಚಿತ ತೊಡರಾಗಿದೆ, ಅದೇ ಸಮಯದಲ್ಲಿ ಜನರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ಥಾನಮಾನಗಳಿಗೆ ಸಂಬಂಧಪಟ್ಟಂತೆ ಅದರ ನೀತಿಗಳು ಖಂಡಿತವಾಗಿಯೂ, ಮತ್ತು ಭಾಗಶಃ ಪ್ರಜ್ಞಾಪೂರ್ವಕವಾಗಿಯೂ, ಅಡೆತಡೆಯುಂಟುಮಾಡಿವೆ ಮತ್ತು ಪ್ರತಿಗಾಮಿಯಾಗಿವೆ.

ಆದಕಾರಣ ಭಾರತದಲ್ಲಿ ಕ್ರಾಂತಿಯ ಸಂಭವ ಇದೆ–ಬೇಗನೇ ಅಥವಾ ಸ್ವಲ್ಪ ಅಷ್ಟೇನೂ ಬೇಗ ನಡೆಯದಿದ್ದರೂ, ಅದು ಅನಿವಾರ್ಯವಾಗಲಿದೆ. ಆ ಕ್ರಾಂತಿಯ ಸ್ವಭಾವ ಏನಾಗಿರಬಹುದು .... ಅದು ಈ ಕೆಳಗಿನ ಮುಖ್ಯ ಅಂಶಗಳನ್ನು ಒಳಗೊಂಡಿರಬೇಕು:

1. ಅದು ಪ್ರಧಾನವಾಗಿ ನಿಸ್ಸಂಶಯವಾಗಿಯೂ, ಬ್ರಿಟಿಷ್ ಆಳ್ವಿಕೆಯನ್ನು ಕಿತ್ತೊಗೆದು ಸಂಪೂರ್ಣವಾಗಿ ಸ್ವತಂತ್ರವಾದ ರಾಷ್ಟ್ರೀಯ ಪ್ರಭುತ್ವವನ್ನು ಸ್ಥಾಪನೆ ಮಾಡುವುದು ಹಾಗೂ ಆರ್ಥಿಕ ಸ್ವಾತಂತ್ರ್ಯ, ಅಂದರೆ ಎಲ್ಲಾ ವಿದೇಶಿ ಸಾಲಗಳ ಮುಟ್ಟುಗೋಲು ಇತ್ಯಾದಿ. ಈ ಹಾದಿಯಲ್ಲಿ ಮಾತ್ರವೇ ಭಾರತದ ಈ ವಿನಾಶಕಾರಿ ಶೋಷಣೆಯನ್ನು ತಡೆಯಲು ಮತ್ತು ಸಾರ್ವತ್ರಿಕವಾಗಿ ಉತ್ಪಾದನಾ ಶಕ್ತಿಗಳ ಮುನ್ನಡೆಗೆ ದಾರಿ ಸಿದ್ಧಗೊಳಿಸಲು ಸಾಧ್ಯ.
2. ಭೂಪದ್ಧತಿಯಲ್ಲಿನ ಮತ್ತು ಪ್ರಭುತ್ವದಲ್ಲಿನ(ಭಾರತದ ಸಂಸ್ಥಾನಗಳಲ್ಲಿ) ಎಲ್ಲಾ ಪಾಳೇಗಾರಿ ಹಾಗೂ ಅರೆ ಪಾಳೆಗಾರೀ ವ್ಯವಸ್ಥೆಗಳನ್ನು(ಭೂಮಾಲಕತ್ವವನ್ನು) ಸಂಪೂರ್ಣವಾಗಿ ಕೊನೆಗಾಣಿಸುವುದು. ಇವುಗಳು ಸಾಮ್ರಾಜ್ಯಶಾಹಿ ಶೋಷಣಾ ವ್ಯವಸ್ಥೆಯ ಭಾಗವಾಗಿರುವುದರಿಂದ ಆ ವ್ಯವಸ್ಥೆ ಹೋದ ಮೇಲೆ ಅವೂ ಹೋಗಬೇಕು. ಅಷ್ಟೇ ಅಲ್ಲ ಅವು ಕೃಷಿ ಮತ್ತು ಗ್ರಾಮೀಣ ಜನರ ಮುನ್ನಡೆಗೆ ತೀವ್ರ ಅಡ್ಡಿ ಆತಂಕಗಳನ್ನು ಒಡ್ಡುತ್ತವೆಯಾದ್ದರಿಂದ ಅವುಗಳನ್ನು ನಾಶಮಾಡಬೇಕು.
3. “ಕ್ರಾಂತಿಯು ಜನರಿಂದ ಆಗಬೇಕು ಎಂಬುದು ಸ್ಪಷ್ಟವಾಗಿದೆ.. ಇವತ್ತಿನ ಭಾರತದ ಸಂದರ್ಭದಲ್ಲಿ, ಅದು ಕೇವಲ ಒಂದು ಶೋಷಕ ಆಳುವ ವರ್ಗದ ಜಾಗದಲ್ಲಿ ಮತ್ತೊಂದನ್ನು ಕೂರಿಸುಸುವಷ್ಟಕ್ಕೆ ಸೀಮಿತವಾಗಬಾರದು. ಅದು ನಿಜವಾಗಿಯೂ ಒಂದು ರೂಪದ ಜನಪ್ರಿಯ ಪ್ರಜಾಪ್ರಭುತ್ವದ ಆಳ್ವಿಕೆಯಾಗಬೇಕು; ನೈರ್ಮಲ್ಯ, ಆರೋಗ್ಯ, ವಸತಿ, ಶಿಕ್ಷಣ, ಮತ್ತು ಸಾಮಾನ್ಯವಾಗಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ಮುನ್ನಡೆಯಲ್ಲಿ ಜನರನ್ನು ನಿಕಟವಾಗಿ ತಟ್ಟುವ ವಿಚಾರಗಳಲ್ಲಿ ತಕ್ಷಣದ ಸಾಧ್ಯತೆಗಳನ್ನು ತೆರೆದಿಡುವಂತಾಗಬೇಕು.”
4. “ಸಂಕ್ಷಿಪ್ತವಾಗಿ, ಭಾರತದಲ್ಲಿನ ಕ್ರಾಂತಿಯು ಬಂಡವಾಳಶಾಹಿ ಪ್ರಜಾಸತ್ತಾತ್ಮಕ ಕ್ರಾಂತಿಯ ಸ್ವರೂಪದ್ದಾಗಿದ್ದು, ವಸಾಹತುಶಾಹಿ ದೇಶವೊಂದರ ಪರಿಸ್ಥಿತಿಗಳಿಗೆ ತಕ್ಕಂತೆ ಮಾರ್ಪಾಟಾಗಿರುವಂತದ್ದು ಆಗಿರುತ್ತದೆ"



ಈ ವಿಚಾರಣೆ ಭಾರತದಲ್ಲಿ ಮಾತ್ರವಲ್ಲ, ಅಂತರ್ರಾಷ್ಟ್ರೀಯವಾಗಿಯೂ ಗಮನ ಸೆಳೆಯಿತು. ಬಂಧಿತರಿಗೆ ಎಲ್ಲೆಡೆಗಳಿಂದಲೂ ಸೌಹಾರ್ದತೆ ವ್ಯಕ್ತಗೊಂಡಿತು. ಇಂಗ್ಲೆಂಡಿನ ಮ್ಯಾಚೆಸ್ಟರ್‌ನಲ್ಲಿ ಕಾರ್ಮಿಕರ ರಂಗತಂಡವೊಂದು ‘ದಿ ರೆಡ್ ಪ್ಲೇಯರ್ಸ್’ ನಾಟಕವನ್ನು ಪ್ರಸ್ತುತಪಡಿಸಿತು. ಅದರ ಒಂದು ಪೋಸ್ಟರ್

ಕ್ರಾಂತಿಯು ಯಾರ ನೇತೃತ್ವದಲ್ಲಿ ನಡೆಯುತ್ತದೆ ಎನ್ನುವುದನ್ನು ವಿವರಿಸುತ್ತಾ ಆ ಹೇಳಿಕೆಯು “ಬಂಡವಾಳಿಗರು ಅನಿವಾರ್ಯವಾಗಿ ಕ್ರಾಂತಿಯನ್ನು ವಿರೋಧಿಸುತ್ತಿರುವಾಗಲೂ ಸಹ ಪುಟ್ಟ ಬಂಡವಳಿಗರ ಬೆಂಬಲ ಪಡೆದು ಕಾರ್ಮಿಕ ವರ್ಗ ಮತ್ತು ರೈತಾಪಿಗಳು ಕ್ರಾಂತಿಯನ್ನು ಮುನ್ನಡೆಸುವ ವರ್ಗಗಳಾಗಿರುತ್ತವೆ.” ಎಂದಿದೆ. ಆ ಹೇಳಿಕೆಯು ಇನ್ನೂ ಮುಂದುವರಿದು ಇಂದಿನ ಹಂತವು ಸಮಾಜವಾದಿ ಕ್ರಾಂತಿಯಲ್ಲ, ಅದು ಬಂಡವಾಳಶಾಹಿ ಪ್ರಜಾಸತ್ತಾತ್ಮಕ ಕ್ರಾಂತಿ ಎಂದೇಕೆ ಅವರು ಪರಿಗಣಿಸುತ್ತಾರೆ ಎನ್ನುವುದನ್ನು ವಿವರಿಸುತ್ತದೆ.


ಈ ಬಂಡವಾಳಶಾಹಿ ಪ್ರಜಾಸತ್ತಾತ್ಮಕ ಹಂತದ ಕ್ರಾಂತಿಯ ಅವಧಿಯಲ್ಲಿ ಕಮ್ಯುನಿಸ್ಟರು ಏನನ್ನು ಸಾಧಿಸಲು ಬಯಸುತ್ತಾರೆ ಎಂಬುದರ ಕುರಿತು ಅವರು ಹೀಗನ್ನುತ್ತಾರೆ: “ಈ ಬಂಡವಾಳಶಾಹಿ ಪ್ರಜಾಸತ್ತಾತ್ಮಕ ಕ್ರಾಂತಿಯ ಮಾದರಿಯು ಮೂಲಭೂತವಾಗಿ ಒಂದೇ ಸಮಯದಲ್ಲಿ ಸಾಮ್ರಾಜ್ಯಶಾಹಿಗಳ ಆಳ್ವಿಕೆಯಿಂದ ಸ್ವಾತಂತ್ರ್ಯ ಪಡೆಯುವುದು ಮತ್ತು ಬಂಡವಾಳಿಗ ವರ್ಗದ ಸರ್ವಾಧಿಕಾರವನ್ನಲ್ಲ ಬದಲು ಜನಸಮೂಹಗಳ ಆಳ್ವಿಕೆಯನ್ನು ಸ್ಥಾಪಿಸುವುದೇ ಆಗಿದೆ. ಪ್ರಸ್ತುತ ಸಾಮ್ರಾಜ್ಯಶಾಹಿ ಬಂಡವಾಳಿಗ ವರ್ಗದ ಕೈಯಲ್ಲಿರುವ ಆರ್ಥಿಕ ಶಕ್ತಿಯ ಸಾಧನಗಳನ್ನು, ಸಾರಿಗೆ ವ್ಯವಸ್ಥೆಯನ್ನು, ರೈಲ್ವೇ, ಬಂದರುಗಳು ಇತ್ಯಾದಿಗಳನ್ನು, ಬ್ಯಾಂಕುಗಳು ಮತ್ತಿತರ ಹಣಕಾಸಿನ ಸಂಸ್ಥೆಗಳನ್ನು ರಾಷ್ಟ್ರೀಕರಿಸಲಾಗುವುದು ಮತ್ತು ವಿದೇಶಿ ಸಾಲಗಳು ಮತ್ತಿತರ ಬಾಧ್ಯತೆಗಳನ್ನು ನಿರಾಕರಿಸಲಾಗುವುದು. ಬಂಡವಾಳಶಾಹಿಗಳ, ವಿದೇಶಿ ಅಥವಾ ಭಾರತೀಯ, ಧೋರಣೆಯು ಅನಿವಾರ್ಯವಾಗಿ ಪ್ರತಿಕೂಲವಾಗಿರುವುದರಿಂದ ಪ್ರಸ್ತುತ ಬಂಡವಾಳಶಾಹಿಗಳ ಅಧೀನದಲ್ಲಿರುವ ಪ್ರಮುಖ ಉದ್ದಿಮೆಗಳನ್ನು ಯಾವುದೇ ಪರಿಹಾರ ನೀಡದೆ ರಾಷ್ಟ್ರೀಕರಣಗೊಳಿಸಲಾಗುವುದು. ಅದೇ ರೀತಿಯಲ್ಲಿ, ಎಲ್ಲಾ ವಿದೇಶಿ ವ್ಯಾಪಾರವನ್ನು ರಾಷ್ಟ್ರೀಕರಣ ಮಾಡಲಾಗುವುದು. ಸಣ್ಣ ಕೈಗಾರಿಕೆಗಳು ಮತ್ತು ವಾಣಿಜ್ಯ ಸಂಘಟನೆಗಳು, ಕರಕುಶಲ, ಸಣ್ಣ ಚಿಲ್ಲರೆ ವ್ಯಾಪಾರಿಗಳು ಇತ್ಯಾದಿಗಳನ್ನು ಈಗಿರುವಂತೆಯೇ ಅವರ ಮಾಲೀಕತ್ವದಲ್ಲಿಯೇ ಕೆಲಸ ಮಾಡಲು ಅನುವು ಮಾಡಿಕೊಡಲಾಗುತ್ತದೆ; ಆದರೆ ಅವರು ಕಾರ್ಮಿಕರನ್ನು ತೀರ ಶೋಷಣೆ ಮಾಡದಂತೆ ಮತ್ತು ಸಾರ್ವಜನಿಕರನ್ನು ವಂಚಿಸದಂತೆ ಕಠಿಣ ನಿಯಂತ್ರಣ ಹೇರಲಾಗುವುದು. ಕಾರ್ಮಿಕರ ಪ್ರಾಥಮಿಕ ಬೇಡಿಕೆಗಳಾದ ಕಾನೂನುಬದ್ಧ ಕನಿಷ್ಠ ವೇತನ, ಎಂಟು ಗಂಟೆಗಳ ಕೆಲಸದ ದಿನ ಮತ್ತು ವಾರದಲ್ಲಿ ಐದೂವರೆ ದಿನಗಳ ಕೆಲಸ, ಉದ್ಯೋಗ, ವೃದ್ಧಾಪ್ಯ, ಅನಾರೋಗ್ಯ ಇತ್ಯಾದಿಗಳಿಗೆ ವಿಶೇಷ ವಿಮೆ, ಸರಿಯಾದ ಪರಿಹಾರ ಮತ್ತು ಕಾರ್ಮಿಕ ರಕ್ಷಣೆ ಕಾನೂನುಗಳು ಹಾಗೂ ಇಂಥವುಗಳನ್ನು ಕಡ್ಡಾಯಗೊಳಿಸಲಾಗುವುದು. ಭೂಮಿಯನ್ನು ರಾಷ್ಟ್ರೀಕರಣ ಮಾಡಲಾಗುವುದು, ಯಾವುದೇ ಪರಿಹಾರ ನೀಡದೆ ಜಮೀನನ್ನು ಭೂಮಾಲಕರಿಂದ ಸ್ವಾಧೀನಪಡಿಸಿಕೊಳ್ಳಲಾಗುವುದು; ನಿಜವಾಗಿ ಸಾಗುವಳಿ ಮಾಡುವವರಿಗೆಲ್ಲಾ ಹಿಡುವಳಿಯ ರಕ್ಷಣೆ ಒದಗಿಸಲಾಗುವುದು. ಭೂಕಂದಾಯವನ್ನು ಉತ್ಪಾದನೆಗೆ ತಕ್ಕಂತೆ ಇಳಿಕೆಯ ಪ್ರಮಾಣಪಟ್ಟಿ(ಸ್ಲೈಡಿಂಗ್ ಸ್ಕೇಲ್)ಯ ಆಧಾರದಲ್ಲಿ ಅಂದಾಜು ಮಾಡಲಾಗುವುದು. ದೊಡ್ಡ ಆದಾಯ



ಉಳ್ಳವರ ಮೇಲೆ ಶ್ರೇಣೀಕೃತ ಆದಾಯ ತೆರಿಗೆಯನ್ನು ಕಡ್ಡಾಯ ಮಾಡಲಾಗುವುದು. ಕೃಷಿ ಸಾಲವನ್ನು ಮನ್ನಾ ಮಾಡಲಾಗುವುದು ಅಥವಾ ಕಡಿಮೆ ಮಾಡಲಾಗುವುದು; ಬಡ್ಡಿ ದರವನ್ನು ಕಾನೂನುಬದ್ಧ ನ್ಯಾಯಸಮ್ಮತ ಮಿತಿಯಲ್ಲಿ ವಿಧಿಸಲಾಗುವುದು; ಸರ್ಕಾರಿ ಅನುದಾನಿತ ಮೂಲಗಳಿಂದ ಸಾಲ ಸಿಗುವಂತೆ ಮಾಡಲಾಗುವುದು; ಇವೆಲ್ಲವೂ ಗ್ರಾಮ ಮತ್ತು ಜಿಲ್ಲಾ ರೈತ ಮಂಡಳಿಗಳ ನಿರ್ದೇಶನದ ಅಡಿಯಲ್ಲಿ ನಡೆಯುತ್ತವೆ. ಕ್ರಾಂತಿಯು ಬಂಡವಾಳಶಾಹಿ ಪ್ರಜಾಸತ್ತಾತ್ಮಕ ಮಾದರಿಯದಾದ್ದರಿಂದ ಕಾರ್ಷಿಕ ಕ್ರಾಂತಿಯು ಮೊದಲ ಹೆಜ್ಜೆ ಮಾತ್ರ ಇಡುತ್ತದೆ. ಕಾರ್ಷಿಕ ಕ್ರಾಂತಿಯ ಎರಡನೇ ಹೆಜ್ಜೆಯಲ್ಲಿ ಬಡ ರೈತರು ಮತ್ತು ಕೃಷಿ ಕೂಲಿಕಾರರು ಹೆಚ್ಚು ಶ್ರೀಮಂತ ಬಂಡವಳಿಗ ರೈತರ ನಾಯಕತ್ವವನ್ನು ಕಿತ್ತುಹಾಕುವ ಮತ್ತು ಅವರ ಜಮೀನನ್ನು ವಿಭಜಿಸುವ ಕ್ರಾಂತಿ ನಡೆಯುವುದಿಲ್ಲ; ಆದರೆ ಕೆಲವು ಸಂದರ್ಭಗಳಲ್ಲಿ ಮತ್ತು ಸ್ಥಳಗಳಲ್ಲಿ ವರ್ಗ ಶಕ್ತಿಗಳ ಸಂಬಂಧಗಳು ಈ ಎರಡನೇ ಹಂತದ ಕ್ರಾಂತಿಗೆ ದಾರಿಯಾಗಬಹುದು.”

“ಒಂದು ಜನಪ್ರಿಯ ಕಾರ್ಮಿಕರ ಮತ್ತು ರೈತರ ಸೇನೆಯನ್ನು ಸೃಷ್ಟಿಸಲಾಗುವುದು, ಜನರು ಶಸ್ತ್ರಾಸ್ತ್ರಗಳನ್ನು ಕೊಂಡೊಯ್ಯುವುದರ ಮೇಲಿನ ನಿರ್ಬಂಧವನ್ನು ಹಿಂತೆಗೆದುಕೊಳ್ಳಲಾಗುವುದು. ಶಿಕ್ಷಣದ ತ್ವರಿತ ಮುನ್ನಡೆಯನ್ನು ಸಾಧಿಸಲು, ನೈರ್ಮಲ್ಯ, ಆರೋಗ್ಯ ಮತ್ತು ವಸತಿಗಳ ಸಾಮಾನ್ಯ ಸ್ಥಿತಿಯನ್ನು ಉತ್ತಮಪಡಿಸಲು, ಮಹಿಳೆಯರ ವಿಮೋಚನೆ, ಮತ್ತು ‘ತುಳಿತಕ್ಕೊಳಗಾದ’ ಜನವಿಭಾಗ ಮತ್ತು ಜನಸಮುದಾಯದ ಇತರೆ ಕನಿಷ್ಠ ಸಾಮಾಜಿಕ ಅಗತ್ಯಗಳಿಗೆ ಚಾಲನೆ ನೀಡಲಾಗುವುದು. ದೇಶದ ವಿವಿಧ ಜನಾಂಗಗಳು ಮತ್ತು ಕೋಮುಗಳ ನಡುವೆ ಒಕ್ಕೂಟ ವ್ಯವಸ್ಥೆಯ ಮೂಲಕ ಸಾಮರಸ್ಯ ಮೂಡಿಸಲಾಗುವುದು, ಎಲ್ಲಾ ಪ್ರದೇಶಗಳಿಗೂ ಹಾಗೂ ಗಣನೀಯ ಅಲ್ಪಸಂಖ್ಯಾತರಿಗಾಗಿ, ಅವರು ಬಯಸುತ್ತಾರೆ ಎಂದು ಕಂಡು ಬರುವ ಮಟ್ಟಿಗೆ ಸಾಂಸ್ಕೃತಿಕ ಮತ್ತು ಆಡಳಿತಾತ್ಮಕ ಸ್ವಾಯತ್ತತೆಯನ್ನು

ಪುಟ 14 ನೋಡಿ



ಕಾಂ|| ಸುಬ್ಬಯ ಇನ್ನಿಲ್ಲ

ಕಾಮ್ರೇಡ್ ಸುಬ್ಬಯ ಬೆಂಗಳೂರಿನ ಕಮ್ಯೂನಿಷ್ಟ್ ಚಳುವಳಿ ಕಟ್ಟುವಲ್ಲಿ ಪ್ರಮುಖ ಸಂಗಾತಿ. ಜಿ.ಎನ್.ಜಿ. ಟಾಟಾ ಇನ್ಸ್‌ಟ್ಯೂಟ್‌ನ ಕಾರ್ಮಿಕರಾಗಿದ್ದರು. 1980 ರ ಸಮಯದಲ್ಲಿ ಇಂಡಿಯನ್ ಇನ್ಸ್‌ಟ್ಯೂಟ್ ಆಫ್‌ಸೈನ್ ನಲ್ಲಿ ದುಡಿಯುತ್ತಿದ್ದ ನೌಕರರನ್ನು, ಕಾರ್ಮಿಕರನ್ನು ಸಂಘಟಿಸಿ ಸಿಐಟಿಯು ಸಂಘ ಕಟ್ಟಿ ಅನೇಕ ಹೋರಾಟಗಳನ್ನು ನಡೆಸಿದ್ದರು. ಬೆಂಗಳೂರಿನ ಆ ಸಂದರ್ಭದಲ್ಲಿ ನಡೆಯುತ್ತಿದ್ದ ಕಾರ್ಮಿಕ ಚಳುವಳಿಗೆ, ವಿದ್ಯಾರ್ಥಿ, ಯುವಜನ ಚಳುವಳಿಗೆ ಹಲವು ರೀತಿಯಲ್ಲಿ ನೆರವುಗಳನ್ನು ನೀಡುತ್ತಿದ್ದರು. ಸಂಗಾತಿ ರಾಮ ಮತ್ತು ರಾಜು ಇವರ ಜೊತೆಗಿದ್ದರು. ಯಶವಂತಪುರದಲ್ಲಿ ಕಮ್ಯೂನಿಷ್ಠ್ ಪಕ್ಷ ಶಾಖೆಗಳನ್ನು ನಡೆಸುತ್ತಾ ಸಿಪಿಐ(ಎಂ) ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾಗಿದ್ದರು. ಐಕ್ಯ ಆಂದ್ರದ ತೆಲಂಗಾಣ ಹೋರಾಟ ಸಿಪಿಐ(ಎಂ) ಮುಖಂಡರಾದ ಪಿ. ಸುಂದರಯ್ಯ ನವರ ಚಳುವಳಿಯ ಪ್ರೇರಣೆ ಪಡೆದವರು ದೀರ್ಘಕಾಲ ದುಡಿಯುವ ಜನರ ಚಳುವಳಿ ಕಟ್ಟುವಲ್ಲಿ ಸ್ಫೂರ್ತಿಯ ಸೆಲೆಯಾಗಿದ್ದರು. ಬಿಇಸಿ ಕಾರ್ಮಿಕ ಸಂಘದ ಚಳುವಳಿಗೆ ನೆರವಾಗಿದ್ದರು.

ಅವರು ಪತ್ನಿ ಈಶ್ವರಮ ಮತ್ತು ರಣದಿವೆ, ರವಿಂದ್ರ ಪ್ರತಾಫ್ ಎಂಬ ಮೂರು ಗಂಡು ಮಕ್ಕಳು ಮತ್ತು ಕುಟುಂಬದ ಸದಸ್ಯರನ್ನು ಅಗಲಿದ್ದಾರೆ. ದೀರ್ಘಾಕಾಲದಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಸುಬ್ಬಯನವರು ಪ್ರಾಜ್ಞಾ ಶೂನ್ಯತೆಗೆ ಒಳಗಾಗಿದ್ದರು. ಈ ಸಂಗಾತಿ ದಿನಾಂಕ 03 ಜನವರಿ 2020 ರಂದು ನಿಧನರಾಗಿದ್ದಾರೆ. ಕಾಂ. ಸುಬ್ಬಯನವರ ನಿಧನಕ್ಕೆ ಸಿಪಿಐ(ಎಂ) ರಾಜ್ಯ ಸಮಿತಿ ತೀವ್ರ ಸಂತಾಪ ಹೇಳುತ್ತಾ ಅಗಲಿದ ಸಂಗಾತಿಗೆ ಶ್ರದ್ಧಾಂಜಲಿ ಸಲ್ಲಿಸುತ್ತದೆ. ●

ಸಫ್ದರ್ ಕುರಿತ 'ಹಲ್ಲಾ ಬೋಲ್' ಪುಸ್ತಕ ಬಿಡುಗಡೆ..... ಪುಟ 16 ರಿಂದ

ಈ ಪುಸ್ತಕವನ್ನು 'ಜನಮ್' ತಂಡದಲ್ಲಿ ಅವರ ಸಹ ಕಲಾವಿದರೂ ಆಗಿದ್ದ ಮತ್ತು ಈಗ 'ಲೆಫ್ಟ್‌ವರ್ಡ್' ಎಂಬ ಪ್ರಗತಿಪರ ಪ್ರಕಟನಾ ಸಂಸ್ಥೆಯ ನಿರ್ವಾಹಕರೂ ಆಗಿರುವ ಸುಧನ್ವಾದೇಶಪಾಂಡೆ ಅವರು ಬರೆದಿದ್ದಾರೆ. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಸಫ್ದರ್ ಹಶ್ಮಿ ಅವರ 35ನೇ ಹುತಾತ್ಮ ದಿನವನ್ನು ಹಾಡುಗಳು, ನಾಟಕ, ಕವಿತಾ ವಾಚನಗಳೊಂದಿಗೆ ಹಲವು ಕಲಾವಿದರು ಮತ್ತು ನೆರೆದಿದ್ದ ನೂರಾರು ಕಾರ್ಮಿಕರು ಸ್ಫೂರ್ತಿಯುತವಾಗಿ ಆಚರಿಸಿದರು. ಸಿಪಿಐ(ಎಂ) ಪೊಲಿಟ್‌ಬ್ಯುರೋ ಸದಸ್ಯರಾದ ಬೃಂದಾಕಾರಟ್ ಮತ್ತು ಸಿಪಿಐ(ಎಂ) ದೆಹಲಿ ರಾಜ್ಯ ಕಾರ್ಯದರ್ಶಿ ಕೆ.ಪಿ. ತಿವಾರಿ ಉಪಸ್ಥಿತರಿದ್ದರು.

ಆಳುವವರ ಸಿಎಎ–ಎನ್.ಪಿ.ಆರ್–ಎನ್.ಆರ್.ಸಿ ಹುನ್ನಾರಗಳ ಬಗ್ಗೆ ಮಾತನಾಡುತ್ತಾ ಜವೇದ್ ಅಖ್ತರ್, ಇದು ಶೇ.15 ಮಾತ್ರ ಇರುವ ಮುಸ್ಲಿಂ ಮತ್ತು ಇತರ ಅಲ್ಪ ಸಂಖ್ಯಾತರ ದಮನಕ್ಕೆ ಮಾತ್ರ ಅಲ್ಲ. ಅದೊಂದು ನೆಪವಷ್ಟೇ. ಬರಿಯ ಮೆಟ್ಟಲಷ್ಟೇ ಎಂದರು. ಶೇ. 85 ಬಹು ಸಂಖ್ಯಾತರು ಹಸಿವು, ಬಡತನ, ಉದ್ಯೋಗ, ಶಿಕ್ಷಣ, ಆರೋಗ್ಯಗಳ ವಿಷಯ ಎತ್ತದಂತೆ ಬರಿಯ 'ಹಿಂದು ಎಂಬ ಗರ್ವ'ದಲ್ಲೇ ಜೀವನ ಮಾಡುವಂತೆ ಬಲಾತ್ಕಾರ ಮಾಡಲು ಈ ಹುನ್ನಾರ. ಇದಕ್ಕೆ ನಮ್ಮ ನೆರೆಯಲ್ಲೇ ನಿದರ್ಶನವಿದೆ. ಎಂಟು ದಶಕಗಳ ಹಿಂದೆ ಮುಸ್ಲಿಮರಿಗೆ ನಿಮ್ಮದೇ ದೇಶವಿದ್ದರೆ ನಿಮಗೆ ಹಿಂದೂಗಳಿಂದ ಅಪಾಯವಿಲ್ಲ ಎಂದು ಹೇಳಲಾಯಿತು. ಆದರೆ ಈಗ ಏನಾಗಿದೆ. ಇಸ್ಲಾಮಿಕ್ ಪಾಕಿಸ್ತಾನದಲ್ಲಿ ಮುಸ್ಲಿಮೇತರರಿಗೆ ಧಾರ್ಮಿಕ ಸ್ವಾತಂತ್ರ್ಯ ಸೇರಿದಂತೆ ಯಾವ ಸ್ವಾತಂತ್ರ್ಯವೂ ಇಲ್ಲ. ಮುಸ್ಲಿಮರಿಗೆ ಧಾರ್ಮಿಕ ಸ್ವಾತಂತ್ರ್ಯ ಬಿಟ್ಟು ಯಾವುದೇ ಸ್ವಾತಂತ್ರ್ಯವಿಲ್ಲ. ಇವರು ಭಾರತವನ್ನು ಅದೇ ರೀತಿಯ 'ಹಿಂದು ಪಾಕಿಸ್ತಾನ' ಮಾಡಲು ಹೊರಟಿದ್ದಾರೆ. ಇವರು ಜನರನ್ನು ಉದ್ದಕ್ಕೆ ಹಿಂದು, ಮುಸ್ಲಿಂ, ಕ್ರೈಸ್ತ ಇತ್ಯಾದಿಯಾಗಿ ಒಡೆಯುತ್ತಾರೆ. ಇವರು ಯಾಕೆ ಜನರನ್ನು ಅಡ್ಡಕ್ಕೆ ಅಂದರೆ ಅತಿ ಶ್ರೀಮಂತ, ಶ್ರೀಮಂತ, ಉಚ್ಛ ಮಧ್ಯಮ, ಮಧ್ಯಮ, ಕೆಳ ಮಧ್ಯಮ, ಬಡವ, ಕಡು ಬಡವ ಎಂದು ಒಡೆಯುವುದಿಲ್ಲ. ಯಾಕೆಂದರೆ ಆಗ ಅವರ ಬಣ್ಣ ಬಯಲಾಗುತ್ತದೆ. ಸಿಎಎ–ಎನ್.ಪಿ.ಆರ್–ಎನ್.ಆರ್.ಸಿ ಎಲ್ಲಾ ಜಾತಿ–ಧರ್ಮಗಳ ಬಡವರ–ಮುಸ್ಲಿಮರ, ದಲಿತರ, ಆದಿವಾಸಿಗಳ, ಶ್ರಮಜೀವಿಗಳ – ವಿರುದ್ಧ ಹಲ್ಲೆ. ಇದು ಎಲ್ಲಾ ಬಡವರ ಮತದಾನದ ಮತ್ತು ಎಲ್ಲಾ ನಾಗರಿಕ ಹಕ್ಕುಗಳನ್ನು ಕಸಿಯುವ ಹುನ್ನಾರ, ಎಂದು ಜವೇದ್ ಅಖ್ತರ್ ಮುಂದುವರೆದು ಹೇಳಿದರು.

ಅವರು ತಮ್ಮ ಎರಡು ಕವಿತೆಗಳನ್ನು ಓದಿದರು. 'ಅವರು ಗಾಳಿ, ನೀರುಗಳ ಹರಿವು ಮತ್ತು ಒಂದೇ ಬಣ್ಣದ ಹೂವು ಇರಬೇಕೆಂದು ಆಜ್ಞೆಹೊರಡಿಸಿದ್ದಾರೆ. ಆದರೆ ಗಾಳಿಯ ಮತ್ತು ನೀರಿನ ತೆರೆಗಳ ವೇಗ, ದಿಕ್ಕು, ಗತಿಯನ್ನು ಯಾರು ನಿಯಂತ್ರಿಸಲು ಆಗುವುದಿಲ್ಲ. ಹೂದೋಟದಲ್ಲಿ ಒಂದೇ ಹೂವು ಹಾಕಿದರೂ ಅದು ಹಲವು ಬಣ್ಣಗಳ ಛಾಯೆ ಹೊಂದಿರುತ್ತದೆ ಎಂಬುದು ಅವರಿಗೆ ಗೊತ್ತಿಲ್ಲ' ಎಂಬ ಆಶಯ ಒಂದು ಕವನದ್ದಾಗಿತ್ತು.

'ಕಮಾನೆ ವಾಲಾ ಖಾಯೆಗಾ, ಲೂಟನೇ ವಾಲಾ ಜಾಯೇಗಾ'

ಇದಕ್ಕಿಂತ ಮೊದಲು ಈ ಸಮಾರಂಭದಲ್ಲಿ ಪುಸ್ತಕ ಬಿಡುಗಡೆ ಮಾಡಿದ ಶಬಾನಾ ಅಜ್ಮಿ ಅವರ ಉಪಸ್ಥಿತಿ ಸ್ಫೂರ್ತಿಯ ವಿದ್ಯುತ್ ಸಂಚಾರ



ಮಾಡಿತ್ತು. ಏಕೆಂದರೆ ಸಫ್ದರ್ ಹಶ್ಮಿ ಕೊಲೆಯಾದಾಗ ದೆಹಲಿಯ ಕೆಲವು ಪ್ರಗತಿಪರ ಕಲಾವಿದರು, ಲೇಖಕರು ಪ್ರತಿಭಟಿಸಿದ್ದು ಬಿಟ್ಟರೆ ಸಿನೆಮಾ ಸೇರಿದಂತೆ ಸಾಂಸ್ಕೃತಿಕ ಲೋಕದ ಬಹುಸಂಖ್ಯಾತ ದಿಗ್ಗಜ ಕಲಾವಿದರು ಮೌನವಾಗಿದ್ದರು. ಆಗ ಕೆಲವೇ ದಿನಗಳಲ್ಲಿ ದೆಹಲಿಯಲ್ಲಿ ನಡೆದ ಅಂತರ್‍ರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿ ಸನ್ಮಾನಕ್ಕೆ ಭಾಜನರಾಗಿದ್ದ ಶಬಾನಾ ಆ ವೇದಿಕೆಯನ್ನು ಬಳಸಿ ಇಡೀ ದೇಶ, ಜಗತ್ತಿಗೆ ಪ್ರಗತಿಪರ ಕಲಾವಿದರ ಕೊಲೆಯ ವಿರುದ್ಧ ಪ್ರತಿಭಟನೆ ಮುಟ್ಟುವಂತೆ ಮಾಡಿ ವಿದ್ಯುತ್ ಸಂಚಾರ ಮಾಡಿದ್ದರು. ಅವರು 'ಕಮಾನೆ ವಾಲಾ ಖಾಯೆಗಾ, ಲೂಟನೇ ವಾಲಾ ಜಾಯೇಗಾ, ನಯಾಜಮಾನಾ ಆಯೇಗಾ' ಎಂಬ ಸ್ಫೂರ್ತಿಯುತ ಘೋಷಣೆಯೊಂದಿಗೆ ಮಾತನ್ನು ಆರಂಭಿಸಿದರು. ಜಂಡಾಪುರದಲ್ಲಿ ಸೇರಿದ್ದ ಕ್ರಾಂತಿಕಾರಿ ಕಲಾವಿದರು ಮತ್ತು ಕಾರ್ಮಿಕರ ಸಮ್ಮಿಲನ ನೋಡಿ ನನಗೆ ನನ್ನ ಬಾಲ್ಯದ ನೆನಪಾಯಿತು ಎಂದು ಭಾವುಕರಾಗಿ ಹೇಳಿದರು. ಸ್ವತಃ ಕ್ರಾಂತಿಕಾರಿ ಕಮ್ಯುನಿಸ್ಟ್ ಕಲಾವಿದರಾಗಿದ್ದ ಶಬಾನಾ ಅವರ ತಂದೆ ಕೈಫಿ ಆಜ್ಮಿ (ಈ ವರ್ಷ ಅವರ ಶತಮಾನೋತ್ಸವ) ತನ್ನನ್ನು ಹೆಗಲ ಮೇಲೆ ಕೂರಿಸಿಕೊಂಡು ಕಾರ್ಮಿಕರ ಕಮ್ಯುನಿಸ್ಟ್ ಪಕ್ಷದ ಸಭೆಗಳಿಗೆ ಕರೆದುಕೊಂಡು ಹೋಗುತ್ತಿದ್ದದ್ದು ನೆನಪಾಯಿತು. ಅದು ಈ ಸಭೆಯಂತೆಯೇ ಚೈತನ್ಯ ಮತ್ತು ಸ್ಫೂರ್ತಿ ನೀಡುವಂತದ್ದಾಗಿತ್ತು, ಎಂದರು. ಅವರು ಕೈಫೀ ಆಜ್ಮಿ ಮತ್ತು ಜವೇದ್ ಅಖ್ತರ್ ಅವರ ಕೆಲವು ಕವನಗಳ ಸಾಲುಗಳನ್ನೂ ಪ್ರಸ್ತುತ ಪಡಿಸಿದರು.

ವಿದ್ಯಾರ್ಥಿಯಾಗಿ ಸಹಪಾಠಿಯಾಗಿದ್ದ, ವಿದ್ಯಾರ್ಥಿ ಮತ್ತು ಕಮ್ಯುನಿಸ್ಟ್ ಕ್ರಾಂತಿಕಾರಿ ಚಳುವಳಿಯಲ್ಲಿ ಸಫ್ದರ್ ಹಶ್ಮಿ ಅವರ ದೀರ್ಘಕಾಲದ ಸಂಗಾತಿಯಾಗಿದ್ದ ಸೀತಾರಾಂ ಯೆಚುರಿ ಮಾತನಾಡುತ್ತಾ ತಮ್ಮ ಗೆಳೆಯನ ಜತೆ ಕಳೆದ ಹಲವು ಗಂಟೆಗಳು, ದಿನಗಳು, ವರ್ಷಗಳನ್ನು ಕುರಿತು ಭಾವಪೂರ್ಣವಾಗಿ ನೆನೆದರು. ಉತ್ಕೃಷ್ಟ ಕ್ರಾಂತಿಕಾರಿಯೂ ಕಲಾವಿದನೂ ಆಗಿದ್ದ ಸಫ್ದರ್ ಸಂಸ್ಕೃತಿಯನ್ನು ನಿಜವಾಗಿ ಅರ್ಥ ಮಾಡಿಕೊಂಡಿದ್ದರು. ಕಾರ್ಮಿಕ ವರ್ಗಕ್ಕೂ ಕಲೆಗೂ ಎರಡಕ್ಕೂ ಅವರು ಸಮಾನವಾಗಿ ಬದ್ಧರಾಗಿದ್ದರು. ಕಾರ್ಮಿಕರಲ್ಲಿ ಕ್ರಾಂತಿಕಾರಿ ಅರಿವು ಮತ್ತು ಸ್ಫೂರ್ತಿ ತುಂಬುವುದು ಕ್ರಾಂತಿಕಾರಿ ಕಲಾವಿದರಿಂದ ಮಾತ್ರ ಸಾಧ್ಯ. ಅವರು 'ಜನ ನಾಟ್ಯ ಮಂಚ್' (ಜನಂ) ಚಟುವಟಿಕೆಗಳ ಮೂಲಕ ಇದನ್ನು ಸಾಧಿಸಿದ್ದರು. ಪ್ರಜಾಪ್ರಭುತ್ವವನ್ನು ವಿಸ್ತರಿಸಿ ಸಮಾಜವಾದದತ್ತ ಒಯ್ಯದೆ ಪ್ರಜಾಪ್ರಭುತ್ವವೂ ಉಳಿಯುವುದಿಲ್ಲ ಎಂಬುದು ಅವರ ನಂಬಿಕೆಯಾಗಿತ್ತು. ಆಳುವವರ ಬಂಟರಿಂದ ಅವರ ಕೊಲೆ ಇದನ್ನು ಸಿದ್ಧಪಡಿಸಿತ್ತು. ಅವರ ಕೊಲೆ ಕ್ರಾಂತಿಕಾರಿ ಮತ್ತು ಕಾರ್ಮಿಕ ಚಳುವಳಿಗೆ ತುಂಬಲಾರದ ನಷ್ಟವಾಗಿತ್ತು. ಆದರೆ ಅದು ಕ್ರಾಂತಿಕಾರಿಗಳಿಗೂ ಕಲಾವಿದರಿಗೂ ಅಷ್ಟೇ ಸ್ಫೂರ್ತಿದಾಯಕವೂ ಆಗಿತ್ತು. ಕಳೆದ 35 ವರ್ಷ ಜನಂತಂಡ ಅವರ ಕ್ರಾಂತಿಕಾರಿ ಕಲೆಯನ್ನು ಮುಂದುವರೆಸಿದ್ದು ಇದರಿಂದಾಗಿಯೇ. ಪ್ರತೀ ವರ್ಷ ಈ ಹುತಾತ್ಮ ದಿನದ ಅರ್ಥಪೂರ್ಣ ಆಚರಣೆ ಅವರ ಕೆಲಸದ ಮುಂದುವರಿಕೆಯೇ. ಸಫ್ದರ್ ಮುಂಗಾಣ್ಕೆಯಂತೆ ಪ್ರಜಾಪ್ರಭುತ್ವಕ್ಕೆ ಮತ್ತೆ ಅಪಾಯ ಬಂದಿದೆ. ಈ ಅಪಾಯದ ಇತ್ತೀಚಿನ ಅವತಾರವಾದ ಸಿಎಎ–ಎನ್.ಪಿ.ಆರ್–ಎನ್.ಆರ್.ಸಿ ಗಳ ಬಗ್ಗೆ ಯೆಚುರಿ ಅವರು ಮಾತನಾಡಿ ಇದನ್ನು ಹಿಮ್ಮೆಟ್ಟಿಸುವುದು, ಕಾರ್ಮಿಕರಲ್ಲಿ ಕ್ರಾಂತಿಕಾರಿ ಅರಿವು ಮತ್ತು ಸ್ಫೂರ್ತಿ ತುಂಬುವ ಕೆಲಸ ಮುಂದುವರೆಸುವುದು ಸಫ್ದರ್ ಗೆ ಸಲ್ಲಿಸಬಹುದಾದ ನಿಜವಾದ ಶ್ರದ್ಧಾಂಜಲಿ ಎಂದರು.

ಜನಮ್ ತಂಡ ಸಫ್ದರ್ ಗೆ ಶ್ರದ್ಧಾಂಜಲಿಯಾಗಿ 'ಅನ್‌ಸುನೆ ಅಫ್ಸಾನೆ' ಎಂಬ ನಾಟಕ ರಚಿಸಿದ್ದು ಜನವರಿ 8ರ ಸಾರ್ವತ್ರಿಕ ಮುಷ್ಕರಕ್ಕೆ ಸಿಐಟಿಯು ತಯಾರಿಯ ಭಾಗವಾಗಿ ಇದನನು ಆಡಲಾಗುತ್ತಿದೆ. ಇದಕ್ಕಿಂತ ಮೊದಲು ಶಬಾನಾ ಆಜ್ಮಿ ಮತ್ತು ಜವೇದ್ ಆಖ್ತರ್ 'ಸ್ಟುಡಿಯೋ ಸಫ್ದರ್' ಮತ್ತು 'ಮೇಡೇ ಬುಕ್ ಸ್ಟೋರ್'ಗೆ ಭೇಟಿ ನೀಡಿದ್ದರು. ●

'ಹಲ್ಲಾ ಬೋಲ್'
ಸಫ್ದರ್ ಹಶ್ಮಿ ಅವರ ಸಾವು ಮತ್ತು ಜೀವನ

'ಹಲ್ಲಾ ಬೋಲ್' ಪುಸ್ತಕ ಹಿಂದಿ ಮತ್ತು ಇಂಗ್ಲೀಷಿನಲ್ಲಿ ಒಟ್ಟಿಗೆ ಪ್ರಕಟವಾಗಿದೆ. ಕನ್ನಡ, ತೆಲುಗು ಮರಾಠಿ, ತಮಿಳು, ಮಲಯಾಳಂ ಇತ್ಯಾದಿ ಭಾಷೆಗಳಲ್ಲಿ ಸದ್ಯದಲ್ಲೇ ಪ್ರಕಟವಾಗಲಿದೆ. **ಕನ್ನಡ ಅನುವಾದವನ್ನು 'ಸಮುದಾಯ'ದ ಹಿರಿಯ ರಂಗಕರ್ಮಿ ಎಂ.ಜಿ. ವೆಂಕಟೇಶ್ ಮಾಡುತ್ತಿದ್ದು, ಬೊಳುವಾರು ಮಹಮ್ಮದ್ ಕುಞ್ಞಿ ಅವರ ಮುನ್ನುಡಿಯೊಂದಿಗೆ ಕ್ರಿಯಾ ಮಾಧ್ಯಮ ಸದ್ಯದಲ್ಲೇ ಪ್ರಕಟಿಸಲಿದೆ.** 'ಹಲ್ಲಾ ಬೋಲ್' ಬರಿಯ ಸಫ್ದರ್ ಹಶ್ಮಿ ಅವರ ಜೀವನ ಕಥನ ಮಾತ್ರವಲ್ಲ. ಹಾಗಾದರೆ ಅದು ಏನು ಎಂಬುದನ್ನು ಖ್ಯಾತ ಚಿಂತಕ ಐಜಾಜ್ ಅಹ್ಮದ್ ಅವರ ಕೆಳಗಿನ ಮಾತುಗಳು ಸಮಗ್ರವಾಗಿ ಹೇಳುತ್ತವೆ:

'ಹಲ್ಲಾ ಬೋಲ್' ಹಲವು ಸಂಗತಿಗಳನ್ನು ಒಟ್ಟಿಗೆ ಹೇಳುತ್ತದೆ. ಇಲ್ಲಿ, ಸಫ್ದರ್ ಹಶ್ಮಿ ಅವರ ಸ್ಫುಟವಾದ ನೆನಕೆಗಳು, ಕಾರ್ಮಿಕ–ವರ್ಗದ ರಾಜಕೀಯ ಮತ್ತು ಸಾಂಸ್ಕೃತಿಕ ಕಾರ್ಯಾಚರಣೆಗಳ ನಡುವಣ ಕೂಡು ತಾಣದ ಕುರಿತು, ಆ ಕೂಡು ತಾಣದಲ್ಲಿ ಜೀವಿಸಿದ ಜೀವಗಳ ಕುರಿತು, ಹಲವು ಕಥನಗಳು ನಿಕಟವಾಗಿ ಒತ್ತೊತ್ತಾಗಿ ಹೆಣೆದುಕೊಂಡಿದ್ದು ಕ್ಷಿಪ್ರಗತಿಯಲ್ಲಿ ಸಾಗುತ್ತವೆ. ನಾಟಕ ರಚನೆಯ ಮತ್ತು ಅದನ್ನು ಬೀದಿಗಳಲ್ಲಿ ಆಡುವ ವಿವರಗಳು ತುಂಬಿ ತುಳುಕಾಡುವ, ಪುಸ್ತಕದ ಚುರುಕಾದ ಗದ್ಯ ಉತ್ತಮವಾಗಿ ಕಟೆದ ನಾಟಕದಂತೆ ಗಮನ ಸೆಳೆಯುವ ಬಿರುಸಿನ ಓದು!

–ಪ್ರೊ. ಐಜಾಜ್ ಅಹ್ಮದ್

ನೋಟು ರದ್ದತಿ ಮತ್ತು ಬ್ಯಾಂಕ್ ಸಾಲಗಳ ಪ್ರಶ್ನೆ



ರೈತ ಕೃಷಿಗೆ ಸಾಲದತ್ತ ಸರಕಾರದ ಗಮನ ಏಕಿಲ್ಲ?

ನೋಟುರದ್ಧತಿಯ ಪರಿಣಾಮವಾಗಿ ಬ್ಯಾಂಕೇತರ–ಹಣಕಾಸು ವಲಯದಲ್ಲಿ ಭರಾಟೆಯ ವಾತಾವರಣ ಉಂಟಾಯಿತುಸು ಎಂಬ ಅಭಿಪ್ರಾಯದ ಸಮರ್ಥನೆಗೆ ಆಧಾರವಿಲ್ಲ. ಮುಂದೆ ಇದೇ ಆರ್ಥಿಕ ಮಂದಗತಿಗೆ ಮತ್ತು ಸುಸ್ತಿಸಾಲಗಳ ಪ್ರಮಾನದ ಏರಿಕೆಗೆ ಕಾರಣವಾಯಿತು ಎನ್ನಲಾಗಿದೆ. ನೋಟು ರದ್ಧತಿ ಉಂಟುಮಾಡಿದ ನಗದು ಹಣದ ಕೊರತೆಯಿಂದಾಗಿ ರೈತರು ತೀವ್ರ ಕಷ್ಟ ಕಾರ್ಪಣ್ಯಗಳಿಗೆ ಒಳಗಾಗಿದ್ದ ಪರಿಸ್ಥಿತಿಯಲ್ಲಿ ಬ್ಯಾಂಕುಗಳ ಬಳಿ ಅಪಾರ ಹಣವಿದೆ ಎಂಬುದು ಗೊತ್ತಿದ್ದರೂ ಸಹ, ರೈತ ಕೃಷಿಗೆ ಹೆಚ್ಚು ಸಾಲ ಒದಗಿಸುವಂತೆ ಸರ್ಕಾರವು ಬ್ಯಾಂಕುಗಳಿಗೆ ಯಾವ ಸೂಚನೆಯನ್ನೂ ಕೊಡಲಿಲ್ಲವೇಕೆ?

ಪ್ರೊ. ಪ್ರಬಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಚಾಲ್ತಿಯಲ್ಲಿದ್ದ 500 ಮತ್ತು 1,000 ರೂಪಾಯಿ ಮುಖ ಬೆಲೆಯ ನೋಟುಗಳನ್ನು ನರೇಂದ್ರ ಮೋದಿ ಸರ್ಕಾರವು 2016ರ ನವೆಂಬರ್ 8 ರಂದು ರದ್ದು ಮಾಡಿತ್ತು. ಜನರು ರದ್ದಾದ ನೋಟುಗಳಿಗೆ ಬದಲಿ ಹಣ ಪಡೆಯಲು ಅವುಗಳನ್ನು ತಮ್ಮ ಬ್ಯಾಂಕ್ ಖಾತೆಗೆ ಜಮಾ ಮಾಡಲೇಬೇಕಿತ್ತು. ಹಾಗಾಗಿ, ಬ್ಯಾಂಕ್‌ಗಳಲ್ಲಿ ಇದ್ದಕ್ಕಿದ್ದಂತೆಯೇ ಠೇವಣಿಗಳು ಅಗಾಧವಾಗಿ ಹೆಚ್ಚಿದವು. ನೋಟು ರದ್ದತಿಯ ಕಾರಣದಿಂದಾಗಿ ಬ್ಯಾಂಕ್ ಖಾತೆಗೆ ಹಣ ಜಮೆ ಮಾಡಿದವರಿಗೆ, ಆ ಹಣ ಅವರ ಖಾತೆಯಲ್ಲಿ ಎಷ್ಟು ದಿನ ಇತ್ತೊ ಅಷ್ಟು ದಿನಗಳಿಗೆ ಬಡ್ಡಿ ಕೊಡಲೇಬೇಕಿತ್ತು. ಹಾಗಾಗಿ, ತಮ್ಮ ಬಳಿ ಸಂಗ್ರಹವಾದ ಅಗಾಧ ಪ್ರಮಾಣದ ಠೇವಣಿಗಳನ್ನು ಬ್ಯಾಂಕುಗಳು ತಾತ್ಕಾಲಿಕವಾಗಿ ಹೂಡಿಕೆ ಮಾಡಿ ಸ್ವಲ್ಪವಾದರೂ ಆದಾಯ ಗಳಿಸಲೇಬೇಕಿತ್ತು. ಹಾಗೆ ಮಾಡದಿದ್ದರೆ, ಬ್ಯಾಂಕ್‌ಗಳ ನಷ್ಟ ಹೆಚ್ಚುತ್ತಿತ್ತು. ಆದ್ದರಿಂದ, ಏಕಾಏಕಿಯಾಗಿ ಹೆಚ್ಚಿದ ಅಗಾಧ ಪ್ರಮಾಣದ ಠೇವಣಿಗಳನ್ನು(ಹಣವನ್ನು) ಬ್ಯಾಂಕ್‌ಗಳು ಯಾವ ರೀತಿಯಲ್ಲಿ ಬಳಕೆಮಾಡಿಕೊಂಡವು ಎಂಬುದು ಬೋಧಪ್ರದವಾಗಿದೆ.

ಈ ಠೇವಣಿಗಳನ್ನು ಬ್ಯಾಂಕ್‌ಗಳು ಯಾವ ರೀತಿಯಲ್ಲಿ ಬಳಕೆಮಾಡಿಕೊಂಡವು ಎಂಬುದರ ಬಗ್ಗೆ, ತೀರ ಇತ್ತೀಚಿನವರೆಗೆ ಕೇಂದ್ರ ಸರ್ಕಾರದ ಆರ್ಥಿಕ ಸಲಹೆಗಾರರಾಗಿದ್ದ ಅರವಿಂದ್ ಸುಬ್ರಮಣ್ಯಂ ಅವರು ತಮ್ಮ ಒಂದು ಅಭಿಪ್ರಾಯವನ್ನು ಇತ್ತೀಚೆಗೆ ಮಂಡಿಸಿದ್ದಾರೆ. ಅವರ ಪ್ರಕಾರ, ಬ್ಯಾಂಕ್‌ಗಳು ಈ ಹಣವನ್ನು ಬ್ಯಾಂಕೇತರ–ಹಣಕಾಸು ಕಂಪೆನಿಗಳಿಗೆ ಸಾಲ ಕೊಟ್ಟಿದ್ದವು. ಬ್ಯಾಂಕ್‌ಗಳಿಂದ ಪಡೆದ ಸಾಲವನ್ನು ಈ ಬ್ಯಾಂಕೇತರ–ಹಣಕಾಸು ಕಂಪೆನಿಗಳು ರಿಯಲ್ ಎಸ್ಟೇಟ್ ವ್ಯವಹಾರ ನಡೆಸುವ ಕಂಪೆನಿಗಳಿಗೆ ಸಾಲ ಕೊಟ್ಟವು. ಅದರಿಂದಾಗಿ ಬ್ಯಾಂಕೇತರ–ಹಣಕಾಸು ವಲಯದಲ್ಲಿ ಭರಾಟೆಯ ವಾತಾವರಣ ನಿರ್ಮಾಣವಾಯಿತು ಎಂದು ಅರವಿಂದ್ ಸುಬ್ರಮಣ್ಯಂ ಅಭಿಪ್ರಾಯಪಡುತ್ತಾರೆ. ಈ ಬ್ಯಾಂಕೇತರ–ಹಣಕಾಸು ವಲಯುವು ಬ್ಯಾಂಕ್‌ಗಳಿಂದ ಎರ್ರಾಬಿರ್ರಿಯಾಗಿ ಸಾಲ ಪಡೆದು ಅದನ್ನು ರಿಯಲ್ ಎಸ್ಟೇಟ್ ಸೇರಿದಂತೆ ಎಲ್ಲ ರೀತಿಯ ಚಟುವಟಿಕೆಗಳಿಗೂ ಹಿಂದೆ ಮುಂದೆ ನೋಡದೆ ಸಾಲ ಕೊಟ್ಟವು. ತದನಂತರ, ಬ್ಯಾಂಕೇತರ–ಹಣಕಾಸು ವಲಯವು ತಾನು ಕೊಟ್ಟ ಸಾಲವನ್ನು ವಸೂಲು ಮಾಡಲಾಗದ ಮತ್ತು ಅದೇ ಕಾರಣದಿಂದ ತಾನು ಬ್ಯಾಂಕ್‌ಗಳಿಂದ ಪಡೆದ ಸಾಲವನ್ನು ತೀರಿಸಲಾಗದ ಪರಿಸ್ಥಿತಿಯಲ್ಲಿ ಕುಸಿದು ಬಿದ್ದಿದೆ. ಈ ವಲಯದ ಅಧಃಪತನವು ಇಡೀ ಅರ್ಥವ್ಯವಸ್ಥೆಯನ್ನೇ ನಿಧಾನಗತಿಗೆ ಒಳಪಡಿಸಿರುವುದರ ಜೊತೆಗೆ ಬ್ಯಾಂಕ್‌ಗಳನ್ನೂ, ಅದರಲ್ಲೂ ಮುಖ್ಯವಾಗಿ ಸಾರ್ವಜನಿಕ ವಲಯದ ಬ್ಯಾಂಕ್‌ಗಳನ್ನು, ಅಪಾಯಕ್ಕೆ ತಳ್ಳಿದೆ. ಈ ವಲಯವು ಸಾಲ ತೀರಿಸದೇ ಇರುವುದು, ಬ್ಯಾಂಕ್‌ಗಳ ಎನ್‌ಪಿಎ (ವಸೂಲಾಗದ ಸಾಲಗಳು) ಅಪಾಯಕಾರಿ ಮಟ್ಟದಲ್ಲಿರುವ ಪರಿಸ್ಥಿತಿಯ ಹಿಂದಿರುವ ಒಂದು ಮುಖ್ಯ ಕಾರಣ.

ಆದರೆ ಬ್ಯಾಂಕೇತರ–ಹಣಕಾಸು ವಲಯದಲ್ಲಿ ಭರಾಟೆಯ ವಾತಾವರಣ ಉಂಟಾಯಿತು ಎಂಬ ಈ ಅಭಿಪ್ರಾಯದ ಸಮರ್ಥನೆಗೆ ಆಧಾರವಿಲ್ಲ. ನೋಟು ರದ್ದತಿಯ ಮೂಲಕ ಏಕಾಏಕಿಯಾಗಿ ಸಂಗ್ರಹವಾದ ಅಗಾಧ ಪ್ರಮಾಣದ ಠೇವಣಿಗಳನ್ನು ಬಳಸಿಕೊಂಡು, ಒಂದು ವೇಳೆ, ಬ್ಯಾಂಕ್‌ಗಳು, ವಾಸ್ತವವಾಗಿ, ಬ್ಯಾಂಕೇತರ–ಹಣಕಾಸು ವಲಯದ ಮೂಲಕ ರಿಯಲ್ ಎಸ್ಟೇಟ್ ಮತ್ತಿತರ ಚಟುವಟಿಕೆಗಳಿಗೆ ದೊಡ್ಡ ಪ್ರಮಾಣದಲ್ಲಿ ಸಾಲ ಕೊಟ್ಟಿದ್ದರೆ, ಮತ್ತು, ಸಾಕಷ್ಟು ಸಮಯದ ವರೆಗೆ ಇಂತಹ ಒಂದು ವಿದ್ಯಮಾನ ಜರುಗಿದ್ದರೆ, ಆಗ, ಬ್ಯಾಂಕ್‌ಗಳಲ್ಲಿರುವ ಠೇವಣಿಗಳು ಮತ್ತು ಸಾರ್ವಜನಿಕ ಚಲಾವಣೆಯಲ್ಲಿದ್ದ ನಗದು ಹಣದ ಅನುಪಾತದಲ್ಲಿ ಇಳಿಕೆ ಸುಮಾರು ಸಮಯದವರೆಗೆ ಇರುತ್ತಿತ್ತು.

ಅನುಪಾತದ ಇಳಿಕೆಯನ್ನು ಹೀಗೆ ವಿವರಿಸಬಹುದು: ರದ್ದುಪಡಿಸಿದ ನೋಟುಗಳಲ್ಲಿ 100ರೂ. ಮೌಲ್ಯದ ನೋಟುಗಳನ್ನು ಹೊಸ ನೋಟುಗಳೊಂದಿಗೆ ಬದಲಾಯಿಸಿಕೊಳ್ಳಲು ಜನರು ಬ್ಯಾಂಕಿಗೆ ಹೋದರು ಎಂದು ಇಟ್ಟುಕೊಳ್ಳೋಣ. ಆಗ, ಅವರಿಗೆ 100ರೂ. ಮೌಲ್ಯದ ಹೊಸ ನೋಟುಗಳನ್ನು ಕೊಡುತ್ತಿರಲಿಲ್ಲ. ಬದಲಿಗೆ, ಜನರು, ರದ್ದುಪಡಿಸಿದ ನೋಟುಗಳ ಮೌಲ್ಯದ ಒಂದು ದೊಡ್ಡ ಭಾಗವನ್ನು, ಅಂದರೆ ಸುಮಾರು 80 ರೂಗಳನ್ನು ಠೇವಣಿಯಾಗಿ ಇಡಬೇಕಾಗುತ್ತಿತ್ತು. ಠೇವಣಿಯಾಗಿ ಬಂದ 80 ರೂಗಳ ಆಧಾರದ ಮೇಲೆ ರಿಯಲ್ ಎಸ್ಟೇಟ್ ಮತ್ತಿತರ ಚಟುವಟಿಕೆಗಳಿಗೆ ಬ್ಯಾಂಕ್ ದೊಡ್ಡ ಪ್ರಮಾಣದಲ್ಲಿ ಸಾಲ ಕೊಡಲಾಗಿದೆ ಎಂದು ಊಹಿಸಿಕೊಳ್ಳಬೇಕಾಗುತ್ತದೆ. ಆದರೆ, ಜನರು ಈ ಠೇವಣಿಯನ್ನು ಒಂದೆರಡು ತಿಂಗಳುಗಳಲ್ಲಿ ಮುರಿದು ನಗದು ರೂಪದಲ್ಲಿ ಹಣ ಪಡೆದ ಕೂಡಲೇ ಬ್ಯಾಂಕಿನ ಠೇವಣಿ ಇಳಿಯುತ್ತದೆ ಮತ್ತು ಸಾರ್ವಜನಿಕ ಚಲಾವಣೆಯಲ್ಲಿರುವ ನಗದು ಹಣದ ಪ್ರಮಾಣ ಹೆಚ್ಚುತ್ತದೆ. ಅಂತಹ ಪರಿಸ್ಥಿತಿಯಲ್ಲಿ, ನಾವು ನೋಟು ರದ್ದತಿಗೆ ಮೊದಲಿದ್ದ ಪರಿಸ್ಥಿತಿಗೆ ಮರಳುತ್ತೇವೆ, ಮತ್ತು, ಹೆಚ್ಚಿನ ಮಟ್ಟದಲ್ಲಿ ಸಾಲ ಕೊಡಲು ಬ್ಯಾಂಕ್‌ಗಳಿಗೆ ಆಸ್ಪದವೇ ಇರುವುದಿಲ್ಲ.

ಆದ್ದರಿಂದ, ರದ್ದುಪಡಿಸಿದ ನೋಟುಗಳನ್ನು ಹೊಸ ನೋಟುಗಳೊಂದಿಗೆ ಬದಲಾಯಿಸಿಕೊಳ್ಳುವುದರ ಬದಲಾಗಿ ಜನರು ಅದೇ ಹಣವನ್ನು ಬ್ಯಾಂಕಿನಲ್ಲಿ ಸ್ವಲ್ಪ ಹೆಚ್ಚು ಅವಧಿಯ ಠೇವಣಿಯಾಗಿ ಇಟ್ಟಿದ್ದ ಸಂದರ್ಭದಲ್ಲಿ ಮಾತ್ರ ಬ್ಯಾಂಕ್ ಸಾಲಗಳ ವೃದ್ಧಿಯ ಮೂಲಕ ಭರಾಟೆಯ ವಾತಾವರಣ ಉಂಟಾಯಿತು ಎಂದು ಹೇಳಲು ಸಾಧ್ಯವಿತ್ತು. ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ, ಬ್ಯಾಂಕ್‌ಗಳಲ್ಲಿ ಹೆಚ್ಚು ಹಣ ಅಲ್ಪಾವಧಿಯಲ್ಲದ ಸಮಯದ ಠೇವಣಿಯಾಗಿ ಇಟ್ಟಿದ್ದರೆ, ಅಂತಹ ಪರಿಸ್ಥಿತಿಯಲ್ಲಿ, ಠೇವಣಿಗಳ ಮತ್ತು ಸಾರ್ವಜನಿಕ ಚಲಾವಣೆಯಲ್ಲಿದ್ದ ನಗದು ಹಣದ ಅನುಪಾತವು ಹೆಚ್ಚಿನ ಮಟ್ಟದಲ್ಲಿ ಇರುತ್ತಿತ್ತು.

ವಾಸ್ತವವಾಗಿ ಠೇವಣಿಗಳು ಹೆಚ್ಚಲಿಲ್ಲ. ಬದಲಿಗೆ, ಸಾರ್ವಜನಿಕ ಚಲಾವಣೆಯಲ್ಲಿದ್ದ ನಗದು ಹಣದ ಪ್ರಮಾಣ ಮಾಮೂಲು ಸ್ಥಿತಿಗೆ ಮರಳಿತು. ರದ್ದಾದ ಶೇಕಡಾ 99ಕ್ಕಿಂತಲೂ ಹೆಚ್ಚು ನೋಟುಗಳು ಹೊಸ ನೋಟುಗಳೊಂದಿಗೆ ಬದಲಾವಣೆಯಾದವು. ಇದು, ನೋಟು ರದ್ದತಿಯ ಮೂಲಕ "ಕಪ್ಪು ಹಣ" ನಿರ್ಮೂಲನೆಗೊಳಿಸುವ ಸರ್ಕಾರದ ಅತಿಯಾದ ಆತ್ಮವಿಶ್ವಾಸಕ್ಕೆ ಆಘಾತ ಉಂಟುಮಾಡಿತು. ನೋಟು ರದ್ದತಿಯ ಆರಂಭದ ದಿನಗಳಲ್ಲಿ ಖಾತೆಗೆ ಜಮೆಯಾದ ನೋಟುಗಳಿಗೆ ಬದಲಿಯಾಗಿ ನಗದು ಹಣ ಪಡೆಯಲು ಕೆಲವು ಮಿತಿಗಳಿದ್ದವು. ಕ್ರಮೇಣ ಈ ಮಿತಿಗಳು ಸಡಿಲಗೊಂಡವು ಮತ್ತು ಸಾರ್ವಜನಿಕ ಚಲಾವಣೆಯಲ್ಲಿರುವ ನಗದು ಹಣದ ಪ್ರಮಾಣವು ಒಂದು ವರ್ಷದೊಳಗೆ ಮಾಮೂಲು ಸ್ಥಿತಿಗೆ ಮರಳಿತು. ಹಾಗಾಗಿ ನೋಟು ರದ್ದತಿಯ ನಂತರದ ಬೆಳವಣಿಗೆಗಳ ಕುರಿತ ಈ ಕಥನವು ತಳ ಬುಡ ಇಲ್ಲದ್ದು ಎಂಬುದು ಸ್ಪಷ್ಟವಾಗುತ್ತದೆ.

ಒಂದು ವಾಸ್ತವಾಂಶ ಏನೆಂದರೆ, ಬ್ಯಾಂಕ್‌ಗಳ ಬಳಿ ನಗದು ಹಣದ ಪ್ರಮಾಣ ಹಠಾತ್ತಾಗಿ ಏರಿಕೆಯಾದ ಅವಧಿಯಲ್ಲಿ, ಬ್ಯಾಂಕ್‌ಗಳು ಆ ಹಣವನ್ನು ರಿಸರ್ವ್ ಬ್ಯಾಂಕಿನಲ್ಲಿಟ್ಟು ಸ್ವಲ್ಪ ಬಡ್ಡಿ ಗಳಿಸಿದವು ಅಥವಾ ವಿಶೇಷವಾಗಿ ಸೃಷ್ಟಿಸಿದ ಸರ್ಕಾರಿ ಬಾಂಡ್‌ಗಳನ್ನು ಕೊಂಡು ಅದರಿಂದ ಸ್ವಲ್ಪ ಬಡ್ಡಿ ಗಳಿಸಿದವು. ಆದರೆ, ಬಾಂಡ್ ಮಾರಾಟದ ಮೂಲಕ ಬಂದ ಹಣವನ್ನು ಸರ್ಕಾರ ಖರ್ಚು ಮಾಡಲಿಲ್ಲ (ಏಕೆಂದರೆ, ಹಣಕಾಸು ಬಂಡವಾಳವು ಹಾಕಿದ ವಿತ್ತೀಯ ಕೊರತೆಯ ಗೆರೆಯನ್ನು ದಾಟುವ ಭಯವಿತ್ತು). ಹಾಗಾಗಿ, ಬ್ಯಾಂಕ್‌ಗಳ ಬಳಿ ಸಂಗ್ರಹವಾಗಿದ್ದ ಅಪಾರ ಪ್ರಮಾಣದ ಹಣವನ್ನು ಸಾಲಗಳ ಬೆಳವಣಿಗೆ ಉತ್ತೇಜಿಸಲು ಬಳಸಲೇ ಇಲ್ಲ.

ಇತ್ತ, ಮಾರ್ಚ್ 2016 ಮತ್ತು ಮಾರ್ಚ್ 2017ರ ನಡುವೆ, ಬ್ಯಾಂಕುಗಳು ಒದಗಿಸಿದ ಆಹಾರೇತರ ಸಾಲಗಳು, ಹಿಂದಿನ ವರ್ಷದ ಶೇ.9.1 ರಿಂದ ಶೇ. 8.4ಕ್ಕೆ ಇಳಿದವು. ಇದೇ ಅವಧಿಯಲ್ಲಿ, "ಕೃಷಿ ಸಂಬಂಧಿತ ಚಟುವಟಿಕೆ"ಗಳಿಗೆ ಒದಗಿಸಿದ ಸಾಲಗಳೂ ಸಹ, ಹಿಂದಿನ ವರ್ಷದ ಶೇ.15.3 ರಿಂದ ಶೇ. 12.4ಕ್ಕೆ ಇಳಿದವು ಮತ್ತು "ಕೈಗಾರಿಕೆ"ಗಳಿಗೆ ಒದಗಿಸಿದ ಸಾಲಗಳು ಹಿಂದಿನ ವರ್ಷದ ಶೇ.2.7 ರಿಂದ ಶೇ.–1.9ಕ್ಕೆ ಕುಸಿದವು. ಇಡೀ "ಆದ್ಯತಾ ವಲಯ"ಕ್ಕೆ ಒದಗಿಸಿದ ಸಾಲಗಳೂ ಸಹ, ಹಿಂದಿನ ವರ್ಷದ ಶೇ.10.7 ರಿಂದ ಶೇ. 9.4ಕ್ಕೆ ಇಳಿದವು.

ನೋಟು ರದ್ದತಿಯಿಂದಾಗಿ ರೈತರ ಕೈಯಲ್ಲಿ ನಗದು ಹಣದ ಅಭಾವ ತೀವ್ರವಾಗಿತ್ತು ಎಂಬುದನ್ನು ಜ್ಞಾಪಿಸಿಕೊಳ್ಳಬಹುದು. ರೈತರು ತಾವು ಬೆಳೆದ ಫಸಲನ್ನು ಮಾರಿದಾಗ ನಗದು ಹಣ ಸಿಗುವುದು ದುರ್ಲಭವಿತ್ತು. ಮುಂದಿನ ಬೆಳೆಗೆ ಬೇಕಾದ ಲಾಗುವಾಡುಗಳನ್ನು ಕೊಳ್ಳಲೂ ರೈತರಿಗೆ ನಗದು ಹಣದ ಲಭ್ಯತೆ ಇರಲಿಲ್ಲ. ಹಾಗಾಗಿ, ಲಾಗುವಾಡುಗಳನ್ನು ಕೊಳ್ಳಲು ರೈತರು ಖಾಸಗಿ ಲೇವಾದೇವಿದಾರರಿಂದ ಮಿತಿಮೀರಿದ ಬಡ್ಡಿ ದರದಲ್ಲಿ ಸಾಲ ಪಡೆದ ಕಾರಣದಿಂದ ಅವರ ಸಾಲದ ಹೊರೆ ಹೆಚ್ಚಾಯಿತು ಮತ್ತು ಅವರ ಸಂಕಷ್ಟಗಳು ಮತ್ತಷ್ಟು ಹೆಚ್ಚಿದವು ಮತ್ತು ಅವುಗಳನ್ನು ಅವರು ಸಹಿಸಿಕೊಂಡರು. ಇದು ನೋಟು ರದ್ದತಿಯಿಂದ ರೈತರಿಗೆ ದೊರೆತ ಬಳುವಳಿ. ನೋಟು ರದ್ದತಿಯಿಂದ ರೈತರಿಗೆ ಉಂಟಾದ ಸಂಕಷ್ಟಗಳನ್ನು ಅವರು ತಾತ್ಕಾಲಿಕವಾಗಿ ಅನುಭವಿಸಿದ ಅನಾನುಕೂಲಗಳು ಎಂದು ನೋಡುವಂತಿಲ್ಲ. ನಗದು ಹಣದ ಚಲಾವಣೆಯ ಹೆಚ್ಚಳದೊಂದಿಗೆ ಅವರ ಸಂಕಷ್ಟಗಳು ಮಾಯವಾಗಲಿಲ್ಲ. ರೈತರು ತಾವು ಬೆಳೆದ ಫಸಲನ್ನು ಮಾರಿದಾಗ ಮತ್ತು ಮುಂದಿನ ಬೆಳೆಗೆ ಬೇಕಾದ ಲಾಗುವಾಡುಗಳನ್ನು ಕೊಳ್ಳಲು ನಗದು ಹಣ ಲಭ್ಯವಿಲ್ಲದ ಪರಿಸ್ಥಿತಿಯಲ್ಲಿ ಅವರು ಮಿತಿಮೀರಿದ ಬಡ್ಡಿ ದರದಲ್ಲಿ ಖಾಸಗಿ ಲೇವಾದೇವಿದಾರರಿಂದ ಸಾಲ ಪಡೆದ ಸಂದರ್ಭದಲ್ಲಿ ಬ್ಯಾಂಕ್‌ಗಳ ಬಳಿ ಹಠಾತ್ತಾಗಿ ಏರಿಕೆಯಾದ ಮತ್ತು ಯಾವತ್ತೂ ಇಲ್ಲದಷ್ಟು ಅಪಾರ ಹಣದ ಸಂಗ್ರಹವಿದ್ದರೂ ಸಹ ಮತ್ತು ಕೃಷಿ ವಲಯಕ್ಕೆ ಒದಗಿಸಿದ ಸಾಲಗಳು ವಾಸ್ತವವಾಗಿ ಇಳಿಕೆಯಾಗಿದ್ದರೂ ಸಹ, ಬ್ಯಾಂಕುಗಳು ರೈತರಿಗೆ ಸಾಲ ಒದಗಿಸಲಿಲ್ಲ.

ಈ ಒಂದು ಕಾಲ ಮತ್ತು ಸನ್ನಿವೇಶದಲ್ಲಿ ಮಾತ್ರ ರೈತರಿಗೆ ಸಾಲ ಸಿಗಲಿಲ್ಲ ಎಂದು ತಿಳಿಯುವಂತಿಲ್ಲ. ಮಾರ್ಚ್ 2017ರ ನಂತರವೂ ಪರಿಸ್ಥಿತಿ ಸುಧಾರಿಸಲಿಲ್ಲ. ಬದಲಿಗೆ ಪರಿಸ್ಥಿತಿ ಬಿಗಡಾಯಿಸಿತು. ಮಾರ್ಚ್ 2017ಮತ್ತು ಮಾರ್ಚ್ 2018ರ ನಡುವೆ ಬ್ಯಾಂಕುಗಳು ಕೃಷಿ ವಲಯಕ್ಕೆ ಒದಗಿಸಿದ ಸಾಲಗಳ ಬೆಳವಣಿಗೆಯ ದರವು ಶೇ.3.8ರ ಜುಜುಬಿ ಮಟ್ಟದಲ್ಲಿತ್ತು. ಬ್ಯಾಂಕಿಂಗ್ ವ್ಯವಸ್ಥೆಗೆ ಅಸಾಧಾರಣ ಮಟ್ಟದ ಹಣದ ಸಂಗ್ರಹ ಎಟುಕುತ್ತಿದ್ದರೂ ಸಹ ಕೃಷಿ ವಲಯಕ್ಕೆ ಒದಗಿಸಿದ ಸಾಲಗಳು ಮಂದಗತಿಯಲ್ಲಿದ್ದವು ಎಂಬುದು ಭಾರತದ ಅರ್ಥವ್ಯವಸ್ಥೆಯ ಕಾರ್ಯವೈಖರಿಯ ವಿದ್ಯಮಾನದ ಬಗ್ಗೆ ಬೋಧಪ್ರದವಾಗಿದೆ.

ಈ ವಿದ್ಯಮಾನವು ಇಡೀ ನವ ಉದಾರ ಆಳ್ವಿಕೆಯ ಕಾಲಾವಧಿಯ ಪ್ರವೃತ್ತಿಗೆ ಪೂರ್ಣವಾಗಿ ಅನುಗುಣವಾಗಿದೆ. ಈ ಅವಧಿಯಲ್ಲಿ, ರೈತ ಕೃಷಿಗೆ ದೊರೆಯುತ್ತಿದ್ದ ಸಾಂಸ್ಥಿಕ ಸಾಲಗಳು ಗಣನೀಯವಾಗಿ ಇಳಿದಿವೆ ಮತ್ತು ಮಿತಿಮೀರಿದ ಬಡ್ಡಿ ದರ ವಸೂಲಿ ಮಾಡುವ ಖಾಸಗಿ ಲೇವಾದೇವಿದಾರ ಕುಳಗಳು

ಪುಟ 14 ನೋಡಿ

ಸರ್ಕಾರವು ರೈತ ಕೃಷಿಯ ಬಗ್ಗೆ ಗಮನ ಹರಿಸಿದ್ದರೆ, ಒಂದೇ ಕಲ್ಲಿನಲ್ಲಿ ಎರಡು ಹಕ್ಕಿಗಳನ್ನು ಹೊಡೆಯಬಹುದಿತ್ತು: ನಗದು ಹಣದ ಕೊರತೆ ಎದುರಿಸುತ್ತಿದ್ದ ರೈತರಿಗೆ ಸಹಾಯ ಮಾಡಬಹುದಿತ್ತು, ಮತ್ತು, ಬ್ಯಾಂಕುಗಳ ಲಾಭದಾಯಕತೆಯನ್ನು ಅದರ ಪೂರ್ವ ಸ್ಥಿತಿಗೆ ಮರಳಿಸಬಹುದಿತ್ತು. ಅದಕ್ಕಾಗಿ ವಿಶೇಷ ಬಾಂಡುಗಳನ್ನು ಮಾರುವ ಅಸಾಧಾರಣ ಕ್ರಮ ಕೈಗೊಳ್ಳುವ ಅಗತ್ಯವಿರಲಿಲ್ಲ. ಈ ವಿಚಾರವನ್ನು ಸರಕಾರ ಮನಸ್ಸಿಗೆ ಹಾಕಿಕೊಳ್ಳಲೇ ಇಲ್ಲ. ನವ–ಉದಾರ ಪ್ರಭುತ್ವದ ಒಂದು ಸರ್ಕಾರದ ಲಕ್ಷಣವೇ ಹಾಗಿದೆ.



ಹೋರಾಟದ ಮತ್ತು ನಿರೀಕ್ಷೆಯ ಭಾವದೊಂದಿಗೆ ಹೊಸ ವರ್ಷ 2020 ಆರಂಭ

ಪುಟ 7 ರಿಂದ

ಕ್ರೋಡೀಕರಣಗೊಳ್ಳುತ್ತಿವೆ. ಅದು ಭಾರತ–ಶಾಂತಸಾಗರ ರಣತಂತ್ರವಾಗಿರಬಹುದು, ನಾಲ್ಕುದೇಶಗಳ ಮೈತ್ರಿಯನ್ನು ಮೇಲ್ಮಟ್ಟಕ್ಕೆ ಏರಿಸುವದಾಗಿರಬಹುದು ಅಥವ 2+2 ಮಾತುಕತೆಗಳಾಗಿರಬಹುದು. ಮಿಲಿಟರಿ ಒಪ್ಪಂದಗಳ ಜಾರಿಯ ಮೂಲಕ ರಾಷ್ಟ್ರೀಯ ಸಾರ್ವಭೌಮತೆಯ ಸವಕಳಿ ವೇಗವಾಗಿ ಮುಂದುವರೆದಿದೆ.

70 ಲಕ್ಷ ಕಾಶ್ಮೀರಿಗಳ ಹಕ್ಕುಗಳ ಮೇಲೆ ಪ್ರಹಾರ ದೇಶದ ಇತರೆಡೆಗಳಲ್ಲಿ ಸರ್ವಾಧಿಕಾರಶಾಹಿಯ ಬೆಳವಣಿಗೆಯ ಮುನ್ಸೂಚನೆಯಾಗಿತ್ತು. ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಶಾಂತಿಯುತ ಪ್ರತಿಭಟನೆಗಳನ್ನು ದಮನ ಮಾಡಲು ದಂಡ ಸಂಹಿತೆಯ ಸೆಕ್ಷನ್ 144ರ ಬಳಕೆ, ಉತ್ತರಪ್ರದೇಶದಲ್ಲಿ ಮುಸ್ಲಿಮರ ಮೇಲೆ ಅಮಾನುಷ ದಬಾವಣೆ, ವಿರೋಧಿಗಳು ಮತ್ತು ಭಿನ್ನಾಭಿಪ್ರಾಯ ಹೊಂದಿರುವವರ ಮೇಲೆ ರಾಜದ್ರೋಹದ ಕಾನೂನು ಅಂಶಗಳ ವ್ಯಾಪಕ ಬಳಕೆ, ಇಂಟರ್ನೆಟ್ ಸ್ಥಬ್ಧಗೊಳಿಸುವುದು, ದೊಂಬಿ ಹತ್ಯೆಗಳ ಪ್ರಕರಣಗಳು ಮತ್ತು ವಿಶ್ವವಿದ್ಯಾಲಯಗಳ ಮೇಲೆ ಪೋಲೀಸ್ ದಾಳಿಗಳೂ ಸೇರಿದಂತೆ ಹಲ್ಲೆಗಳು ಇವೆಲ್ಲವು ಸರ್ವಾಧಿಕಾರಶಾಹಿಯ ಒಟ್ಟು ವಿನ್ಯಾಸದ ಪರಸ್ಪರ ಸಂಬಂಧಿತ ಭಾಗಗಳೇ ಆಗಿವೆ.

ವರ್ಷದ ಅಂತ್ಯದ ವೇಳೆಯಲ್ಲಿ ಝಾರ್ಖಂಡ್ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿಗೆ ಸೋಲು ಉಂಟಾಗಿದೆ. ಈ ಮೊದಲು ಹರ್ಯಾಣದಲ್ಲಿ ಬಹುಮತ ಪಡೆಯುವಲ್ಲಿ ಅದು ವಿಫಲವಾಗಿತ್ತು, ಮತ್ತು ಮಹಾರಾಷ್ಟ್ರದಲ್ಲಿ ಮಿತ್ರಪಕ್ಷ ಶಿವಸೇನೆಯನ್ನು ಮತ್ತು ಸರಕಾರವನ್ನು ಕಳಕೊಂಡಿತು. ರಾಜ್ಯ ಚುನಾವಣೆಗಳಲ್ಲಿ ಬಿಜೆಪಿಗೆ ಆಗಿರುವ ಹಿನ್ನಡೆಯು ರಾಷ್ಟ್ರ ಮಟ್ಟದಲ್ಲಿ ಬಿಜೆಪಿಯ ಕೋಮುವಾದಿ–ರಾಷ್ಟ್ರವಾದಿ ವೇದಿಕೆಗೆ ಎದುರಾಗಿ ಜಾತ್ಯತೀತ, ಸಾಮ್ರಾಜ್ಯಶಾಹಿ–ವಿರೋಧಿ ರಾಷ್ಟ್ರವಾದ ಮತ್ತು ಜನಪರ ಆರ್ಥಿಕ ಧೋರಣೆಗಳ ಆಧಾರದಲ್ಲಿ ಒಂದು ರಾಷ್ಟ್ರೀಯ ಪರ್ಯಾಯವನ್ನು ಮುಂದಿಡುವುದರ ಮಹತ್ವವನ್ನು ಎತ್ತಿ ತೋರಿದೆ.

ಡಿಸೆಂಬರ್ 11ರಂದು ಸಂಸತ್ತಿನಲ್ಲಿ ಸಿಎಎ ಯನ್ನು ಅಂಗೀಕರಿಸಿದ ಕೂಡಲೇ ಆರಂಭವಾದ ಸಿಎಎ ಮತ್ತು ಎನ್‌ಆರ್‌ಸಿಗೆ ವಿರುದ್ಧವಾಗಿ ದೇಶವ್ಯಾಪಿ ಪ್ರತಿಭಟನೆಗಳು ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆಯ ಮೇಲೆ ಪ್ರಹಾರಗಳ ವಿರುದ್ಧ ಮೊದಲ ಮಹತ್ವದ ಪ್ರತಿಭಟನಾ ಚಳುವಳಿಯಾಗಿದೆ. ಈ ಪ್ರತಿಭಟನೆಗಳಲ್ಲಿ ವಿದ್ಯಾರ್ಥಿಗಳು ಮತ್ತು ಯುವಜನರು ನೇತೃತ್ವದ ಪಾತ್ರ ವಹಿಸುತ್ತಿದ್ದಾರೆ. ಸರಕಾರ ದಮನಕ್ಕಿಳಿದರೂ, ಈ ಪ್ರತಿಭಟನೆಗಳು ಬೆಳೆದಿವೆ, ಮೂರು ವಾರಗಳ ಕಾಲ ನಿರಂತರವಾಗಿ ನಡೆದಿವೆ.

ಆದ್ದರಿಂದ 2019ರ ವರ್ಷ ಒಂದು ಮಹತ್ವದ ಕ್ಷಣದಲ್ಲಿ ಅಂತ್ಯಗೊಂಡಿದೆ–ಪ್ರಜಾಪ್ರಭುತ್ವ ಮತ್ತು ಸಂವಿಧಾನದ ರಕ್ಷಣೆಯಲ್ಲಿ ಜನಗಳ ಎದುರೇಟು ಆರಂಭವಾಗಿದೆ. ಹೊಸ ವರ್ಷ ಜನವರಿ 8ರಂದು ಇನ್ನೊಂದು ಬಲಿಷ್ಟ ಪ್ರತಿಭಟನಾ ಕಾರ್ಯಾಚರಣೆಯನ್ನು ಕಾಣಲಿದೆ– ಕೋಟಿಗಟ್ಟಲೆ ಕಾರ್ಮಿಕರು ಮತ್ತು ನೌಕರರು ಸಾರ್ವತ್ರಿಕ ಮುಷ್ಕರ ನಡೆಸಲಿದ್ದಾರೆ, ರೈತರು, ಕೃಷಿ ಕಾರ್ಮಿಕರು ಮತ್ತು ದುಡಿಯುವ ಜನಗಳ ಇತರ ವಿಭಾಗಗಳು ಅದರಲ್ಲಿ ಸೇರಿಕೊಳ್ಳುತ್ತಾರೆ.

ಆದ್ದರಿಂದ, ಹೊಸ ವರ್ಷ ಒಂದು ಹೋರಾಟದ ಮತ್ತು ನಿರೀಕ್ಷೆಯ ಭಾವದೊಂದಿಗೆ ಆರಂಭವಾಗುತ್ತಿದೆ. ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ದುಡಿಯುವ ಜನಗಳ ಹಕ್ಕುಗಳ ರಕ್ಷಣೆಯ ಹೋರಾಟ ಸಾಗಿದೆ. ಇದನ್ನು ಮುಂದೊಯ್ಯುವ ಪ್ರತಿಜ್ಞೆ ಮಾಡೋಣ.



ರೈತ ಕೃಷಿಗೆ ಸಾಲದತ್ತ ಸರಕಾರದ ಗಮನ ಏಕಿಲ್ಲ?

ಪು 13 ರಿಂದ

ನಾಯಿಕೊಡೆಗಳಂತೆ ತಲೆ ಎತ್ತಿವೆ. ವಸಾಹತು ಕಾಲದ ಲೇವಾದೇವಿದಾರರಿಗೆ ಹೋಲಿಸಿದರೆ ಈಗಿನವರನ್ನು ಒಂದು ಹೊಸ ತಳಿಗೆ ಸೇರಿದ ಪೀಳಿಗೆ ಎನ್ನಬಹುದು. ಆದರೆ, ಇವರ ದುಬಾರಿ ಬಡ್ಡಿಗೂ ಮತ್ತು ವಸಾಹತು ಕಾಲದ ಇವರ ಪೂರ್ವಜರ ಬಡ್ಡಿಗೂ ವ್ಯತ್ಯಾಸವೇನಿಲ್ಲ.

ಈ ಪರಿಸ್ಥಿತಿಯಲ್ಲಿ ಸರ್ಕಾರ ತಳೆದ ಮನೋಭಾವವೂ ಸಹ ಅಷ್ಟೇ ಬೋಧಪ್ರದವಾಗಿದೆ. ನಗದು ಹಣದ ಕೊರತೆಯಿಂದಾಗಿ ರೈತರು ತೀವ್ರ ಕಷ್ಟ ಕಾರ್ಪಣ್ಯಗಳಿಗೆ ಒಳಗಾಗಿರುವ ಪರಿಸ್ಥಿತಿಯಲ್ಲಿ ಬ್ಯಾಂಕುಗಳ ಬಳಿ ಅಪಾರ ಹಣವಿದೆ ಎಂಬುದು ಗೊತ್ತಿದ್ದರೂ ಸಹ, ರೈತ ಕೃಷಿಗೆ ಹೆಚ್ಚು ಸಾಲ ಒದಗಿಸುವಂತೆ ಸರ್ಕಾರವು ಬ್ಯಾಂಕುಗಳಿಗೆ ಯಾವ ಸೂಚನೆಯನ್ನೂ ಕೊಡಲಿಲ್ಲ. ಬದಲಿಗೆ, ಬ್ಯಾಂಕುಗಳು ತಮ್ಮ ಬಳಿ ಇದ್ದ ಅಪಾರ ಹಣವನ್ನು ಹೂಡಿಕೆ ಮಾಡಲು ಅನುವಾಗುವಂತೆ ಸರ್ಕಾರವು ತನ್ನ ಬಾಂಡುಗಳನ್ನು ಅವರಿಗೆ ಮಾರಿತು. ಬಾಂಡ್ ಮಾರಾಟದ ಮೂಲಕ ಬಂದ ಹಣವನ್ನು, ವಿತ್ತೀಯ ಕೊರತೆಯ ಮಿತಿಯ ನೆಪದಲ್ಲಿ ಸರ್ಕಾರ ಖರ್ಚು ಮಾಡದ ಕಾರಣದಿಂದಾಗಿ ನಗದು ಹಣ ವಂಚಿತ ರೈತರು ದುಬಾರಿ ಬಡ್ಡಿಯ ಲೇವಾದೇವಿ ಸಾಲ ಅವಲಂಬಿಸುವಂತೆ ಮಾಡಲಾಯಿತು.

ಒಂದು ನಿರ್ದಿಷ್ಟ ವಲಯಕ್ಕೆ ಸಾಲ ಕೊಡುವಂತೆ ಬ್ಯಾಂಕುಗಳ ಮೇಲೆ ಈ ಹಿಂದೆ ಒತ್ತಾಯ ಹೇರಿದ ಪ್ರಸಂಗಗಳಿವೆ. ವಾಸ್ತವವಾಗಿ, ಈ ಶತಮಾನದ ಆದಿ ಭಾಗದಲ್ಲಿ, ಸರ್ಕಾರವು ಮೂಲಸೌಕರ್ಯ ವಲಯದ ಖಾಸಗಿ ಕಂಪೆನಿಗಳಿಗೆ ಸಾಲ ಕೊಡುವಂತೆ ಬ್ಯಾಂಕುಗಳ ಮೇಲೆ ಒತ್ತಡ ಹೇರಿದ್ದರಿಂದಾಗಿಯೇ ಮೂಲಸೌಕರ್ಯ ವಲಯದಲ್ಲಿ ಭಾರಿ ಪ್ರಮಾಣದ ಹೂಡಿಕೆ ಸಾಧ್ಯವಾಯಿತು. ಆದರೆ, ರೈತ ಕೃಷಿಯು ಅದೇ ರೀತಿಯಲ್ಲಿ ಸರ್ಕಾರದ ಗಮನ ಸೆಳೆಯಲಿಲ್ಲ.

ಸರ್ಕಾರವು ರೈತ ಕೃಷಿಯ ಬಗ್ಗೆ ಗಮನ ಹರಿಸಿದ್ದರೆ, ಒಂದೇ ಕಲ್ಲಿನಲ್ಲಿ ಎರಡು ಹಕ್ಕಿಗಳನ್ನು ಹೊಡೆಯಬಹುದಿತ್ತು: ನಗದು ಹಣದ ಕೊರತೆ ಎದುರಿಸುತ್ತಿದ್ದ ರೈತರಿಗೆ ಸಹಾಯ ಮಾಡಬಹುದಿತ್ತು, ಮತ್ತು, ಬ್ಯಾಂಕುಗಳ ಲಾಭದಾಯಕತೆಯನ್ನು ಅದರ ಪೂರ್ವ ಸ್ಥಿತಿಗೆ ಮರಳಿಸಬಹುದಿತ್ತು. ಅದಕ್ಕಾಗಿ ವಿಶೇಷ ಬಾಂಡುಗಳನ್ನು ಮಾರುವ ಅಸಾಧಾರಣ ಕ್ರಮ ಕೈಗೊಳ್ಳುವ ಅಗತ್ಯವಿರಲಿಲ್ಲ. ಈ ವಿಚಾರವನ್ನು ಸರಕಾರ ಮನಸ್ಸಿಗೆ ಹಾಕಿಕೊಳ್ಳಲೇ ಇಲ್ಲ. ನವ–ಉದಾರ ಪ್ರಭುತ್ವದ ಒಂದು ಸರ್ಕಾರದ ಲಕ್ಷಣವೇ ಹಾಗಿದೆ.



ಮೀರತ್ ಪಿತೂರಿ ಪ್ರಕರಣದ ಆರೋಪಿಗಳ ಹೇಳಿಕೆ

ಪುಟ 11 ರಿಂದ

ಕಲ್ಪಿಸಲಾಗುವುದು. ದೇಶದ ಉದ್ದಿಮೆಗಳ ಹಾಗೂ ಸಂಪರ್ಕ ಸಾಧನಗಳ ಮುನ್ನಡೆಗೆ ನೀತಿಗಳನ್ನು ರೂಪಿಸಲಾಗುವುದು. ನೈಸರ್ಗಿಕ ಸಂಪನ್ಮೂಲಗಳನ್ನು ಸರ್ಕಾರದ ನಿಯಂತ್ರಣದ ಅಡಿಯಲ್ಲಿ ಬೆಳೆಸಲಾಗುವುದು. ಜನಸಮುದಾಯದ ಬದುಕಿನ ಸ್ಥಿತಿಗತಿಗಳ ಎತ್ತರಿಸುವಿಕೆಯನ್ನು ಖಾತ್ರಿಪಡಿಸಲು ಇವು ಮಾತ್ರವೇ ದಾರಿ.”

ನಾವು ಸ್ಥಾಪಿಸುವ ಪ್ರಭುತ್ವವು ಪ್ರಜಾಸತ್ತಾತ್ಮಕವಾಗಿರುತ್ತದೆ, ನಿಶ್ಚಿತವಾಗಿಯೂ, ಪ್ರತಿಕ್ರಾಂತಿಯ ಬೆಂಬಲಿಗರನ್ನು ಹೊರತುಪಡಿಸಿ, ಎಲ್ಲರೂ ಅದರಲ್ಲಿ ಭಾಗವಹಿಸುತ್ತಾರೆ. ದೇಶದ ಇತಿಹಾಸದಲ್ಲೇ ಮೊದಲ ಬಾರಿಗೆ ಜನರಿಗೆ ಸಂಘ ರಚಿಸಿಕೊಳ್ಳುವ ಮತ್ತು ಚರ್ಚೆಮಾಡುವ ಸ್ವಾತಂತ್ರ್ಯವನ್ನು ವ್ಯವಸ್ಥಿತಗೊಳಿಸಲಾಗುವುದು . . ಕ್ರಾಂತಿಯ ಪ್ರಧಾನ ವರ್ಗಗಳಾದ ಕಾರ್ಮಿಕರು ಮತ್ತು ರೈತರು ನೀತಿ ಮತ್ತು ಅಭಿವೃದ್ಧಿಯ ಮುನ್ನಡೆಯ ಮೇಲೆ ಸಹಜವಾಗಿಯೇ ನಿರ್ಣಾಯಕ ಪ್ರಭಾವವನ್ನು ಹೊಂದಿರುತ್ತಾರೆ. ಅದು ‘ಕಾರ್ಮಿಕರ ಮತ್ತು ರೈತರ ಪ್ರಜಾಸತ್ತಾತ್ಮಕ ಸರ್ವಾಧಿಕಾರವಾಗಿರುತ್ತದೆ’. ಪ್ರಭುತ್ವದ ಸ್ವರೂಪವೆ ಎಂದಿನಂತಹ ಸಂಸದೀಯ ಮಾದರಿಯಾಗಿರುವುದಿಲ್ಲ. ಅಂತಹ ಮಾದರಿಯ ‘ಪ್ರಾತಿನಿಧಿಕ’ ಆಡಳಿತ ಯಂತ್ರವು ಬಂಡವಾಳಶಾಹಿಗಳ ಹಿತಾಸಕ್ತಿಯನ್ನು ಮತ್ತೆ ದೃಢಪಡಿಸುವ ದಿಕ್ಕಿನಲ್ಲಿ ಮಾತ್ರ ಕೊಂಡೊಯ್ಯುತ್ತದಷ್ಟೆ ಹಾಗೂ ಅದು ಪ್ರತಿಕ್ರಾಂತಿಯನ್ನು ಪೂರ್ಣಗೊಳಿಸುತ್ತದೆಯಷ್ಟೆ. ಪ್ರಭುತ್ವದ ಸಂಘಟನೆಯು ಜನರ ಸಂಘಗಳು, ಕಾರ್ಖಾನೆಗಳಲ್ಲಿನ, ಬಂದರುಗಳಲ್ಲಿನ, ಗಣಿಗಳಲ್ಲಿನ, ರೈಲ್ವೇ ಕೇಂದ್ರಗಳಲ್ಲಿನ ಮುಂತಾದ ಕಾರ್ಮಿಕರ ಮಂಡಳಿಗಳು, ಹಳ್ಳಿಗಳಲ್ಲಿನ ರೈತರ ಸಂಘಗಳು, ಕಾರ್ಮಿಕ ವರ್ಗದ ಗೃಹಿಣಿಯರ ಸಂಘಗಳು, ಸಣ್ಣ ವ್ಯಾಪಾರಿಗಳ ಸಂಘಗಳು, ಕರಕುಶಲ ಕರ್ಮಿಗಳ ಸಂಘಗಳು ಮುಂತಾದವುಗಳ ಮೇಲೆ ಅವರ ವಾಸ ಪ್ರದೇಶಗಳಲ್ಲಿ ವೃತ್ತಿಗುಂಪುಗಳ ಆಧಾರದಲ್ಲಿ ರೂಪಿತಗೊಳ್ಳಬೇಕು.”

ಮಹಿಳೆಯರ ಪ್ರಶ್ನೆ ಕುರಿತು, ಆ ಹೇಳಿಕೆಯು “ಮಹಿಳೆಯರ ಪರಾಧೀನತೆ ಮತ್ತು ಶೋಷಣೆಯು ಮನುಜ ಕುಲದ ಬಹುಪಾಲು ಪುರುಷರ ಪರಾಧೀನತೆಯ ಹಾಗೂ ಶೋಷಣೆಯ ಒಂದು ಆಯಾಮ ಮಾತ್ರವಷ್ಟೆ. ಅದನ್ನು ವರ್ಗಾಧಾರಿತವಾಗಿ ಪರಿಹರಿಸಿಕೊಳ್ಳಬೇಕೇ ವಿನಃ ಲಿಂಗಾಧಾರಿತವಾಗಿ ಅಲ್ಲ. ...ಪಕ್ಷವು ತನ್ನ ಕೆಲಸಗಳಲ್ಲಿ ಈ ಕೆಳಗಿನವುಗಳನ್ನು ಖಾತರಿಪಡಿಸಬೇಕು: 1) ಕಾರ್ಮಿಕ ವರ್ಗದ ಚಳುವಳಿಯೊಳಗೆ ಸಂಪೂರ್ಣ ಲಿಂಗ ಸಮಾನತೆಯನ್ನು ಸ್ಥಾಪಿಸಬೇಕು, ಮತ್ತು ಕಾರ್ಮಿಕ ವರ್ಗದ ಮಧ್ಯೆ ಈ ವಿಚಾರಗಳಲ್ಲಿರುವ ಪೂರ್ವಾಗ್ರಹಗಳನ್ನು ಕೊನೆಗಾಣಿಸಬೇಕು; 2) ಗೃಹಿಣಿಯರನ್ನು ಮಾನವ ಕುಲದ ಉತ್ಪಾದಕರೆಂದು ಅತ್ಯುನ್ನತ ಮಹತ್ವದೊಂದು ಕಾರ್ಮಿಕರ ವಿಧ ಎಂದು ಮಾನ್ಯ ಮಾಡಬೇಕು, ಮತ್ತು ತಮ್ಮ ಸ್ಥಾನಮಾನ ಉತ್ತಮಗೊಳಿಸಿಕೊಳ್ಳಲು ಅವರು ನಡೆಸುವ ಹೋರಾಟಗಳಿಗೆ ಉತ್ತೇಜನ ನೀಡಬೇಕು; 3) ಬಂಡವಾಳಶಾಹಿಯ ವಿರುದ್ಧದ ಸಕ್ರಿಯ ಕಾರ್ಮಿಕ ವರ್ಗದ ಹೋರಾಟಗಳಿಗೆ, ಮುಖ್ಯವಾಗಿ ಪುರುಷ ಕಾರ್ಮಿಕರ ಬದಲಾಗಿ ಮಹಿಳೆಯರನ್ನು ಕಡಿಮೆ ಕೂಲಿಗೆ ದುಡಿಸಿಕೊಳ್ಳುವುದರ ವಿರುದ್ಧ ದುಡಿಯುವ ಮಹಿಳೆಯರನ್ನು ಸೆಳೆದುಕೊಳ್ಳಬೇಕು.” ಎಂದಿದೆ.

ಈ ಗುರಿಗಳನ್ನು ಸಾಧಿಸಲು ಒಂದು ಬಲಿಷ್ಠವಾದ ಹಾಗೂ ದೃಢಸಂಕಲ್ಪದ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಬೇಕೆಂದು ಆ ಹೇಳಿಕೆಯು ಕರೆ ನೀಡಿತು..

ಹನ್ನೆರಡನೇ ರಾಷ್ಟ್ರೀಯ ಜನವಾದಿ ಮಹಿಳಾ ಸಮ್ಮೇಳನ...

ಪುಟ 9 ರಿಂದ

ಆಸ್ಪದವಿಲ್ಲದ ಸ್ಥಿತಿಯನ್ನು ಮುಂದಿಡಲಾಯಿತು. ಸಂವಿಧಾನದ ಮೂಲ ಆಶಯಗಳನ್ನು ಕಾಪಾಡಲು ಬದ್ಧವೆಂದು ಸಮ್ಮೇಳನವು ಸಾರಿತು. ಸಂವಿಧಾನದ ಮೂಲಾಶಯಗಳನ್ನು ಬದಿಗೊತ್ತಿ ಬಹುತ್ವಕ್ಕೆ ಧಕ್ಕೆ ತರುವ ನಿಟ್ಟಿನಲ್ಲಿ ಮತ್ತು ಜನರ ಗಮನವನ್ನು ಯಶಸ್ವಿಯಾಗಿ ತಿರುಗಿಸುವ ವಿಧಾನದಲ್ಲಿ ಒಂದಾಗಿ ತಂದ ಪೌರತ್ವ ತಿದ್ದುಪಡಿ ಕಾಯ್ದೆಯ ವಿರುದ್ಧ ಭುಗಿಲೇಳುತ್ತಿರುವ ಹೋರಾಟಗಳಲ್ಲಿ ಪೋಲೀಸರ ದುರ್ವರ್ತನೆಗಳನ್ನೂ ಎದುರಿಸಿ ಬೀದಿಗಿಳಿದ ಯುವ ಮತ್ತು ಮಹಿಳಾ ಸಮೂಹವನ್ನು ಸಮ್ಮೇಳನ ಅಭಿನಂದಿಸಿತು.

ಮುಂದಿನ ಗುರಿಗಳಾಗಿ

- ಮಹಿಳಾ ವಿರೋಧೀ, ಮನುವಾದೀ ಕೋಮುವಾದೀ ಸಿದ್ಧಾಂತಗಳ ವಿರುದ್ಧ ಇತರ ಸಂಘಟನೆಗಳ ಜೊತೆ ಜಂಟಿಯಾಗಿ ಮತ್ತು ಸ್ವತಂತ್ರವಾಗಿ ಹೋರಾಟವನ್ನು ಕಟ್ಟುವುದು.
- ಅಸಂಘಟಿತ ವಲಯದ ಮಹಿಳೆಯರಿಗೆ ಆದ್ಯತೆ ನೀಡುತ್ತ, ಎಲ್ಲ ದುಡಿಯುವ ಮಹಿಳೆಯರ ಹಕ್ಕುಗಳ ರಕ್ಷಣೆಗೆ ಮುಂದಾಗುವ, ಜನವರಿ 8 2020 ರಂದು ನಡೆಯುವ ಸಾರ್ವತ್ರಿಕ ಮುಷ್ಕರದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು
- ಕಾರ್ಪೊರೇಟ್ ವಲಯಕ್ಕೆ ಅನುವು ಮಾಡಿಕೊಡಲೆಂದೇ ತಂದ ಅರಣ್ಯ ಹಕ್ಕುಗಳ ಕಾಯ್ದೆಯನ್ನು ಜಾಳಾಗಿಸಿ ಅರಣ್ಯವಾಸಿಗಳ ಮೇಲೆ ದಾಳಿ ನಡೆಸುತ್ತಿರುವುದರ ವಿರುದ್ಧ ಹಾಗೂ ರೈತ ಮಹಿಳೆಯರ ಭೂಮಿ ಹಕ್ಕಿಗಾಗಿ ಹೋರಾಟವನ್ನು ತೀವ್ರಗೊಳಿಸುವುದು.
- ಪೌರತ್ವ ತಿದ್ದುಪಡಿ ಕಾಯ್ದೆ, ರಾಷ್ಟ್ರೀಯ ಪೌರತ್ವ ನೋಂದಣಿ,ರಾಷ್ಟ್ರೀಯ ಜನಸಂಖ್ಯಾ ಸಮೀಕ್ಷೆಗಳ ವಿರುದ್ಧ ಹೋರಾಟಗಳಿಗೆ ಬೆಂಬಲ ಮತ್ತು ಸ್ವತಂತ್ರ ಕಾರ್ಯಕ್ರಮಗಳು
- ದಮನಿತ ಮುಸ್ಲಿಂ, ಆದಿವಾಸಿ, ದಲಿತ ಸಮುದಾಯಗಳ ಏಳ್ಗೆಗಾಗಿ ಸಾಮಾಜಿಕ ಸುಧಾರಣಾ ಚಟುವಟಿಕೆಗಳನ್ನು ಪ್ರಾರಂಭಿಸುವುದು,
- ಯುವತಿಯರ ಆಯ್ಕೆ ಸ್ವಾತಂತ್ರ ಮತ್ತು ಘನತೆಯ ಬದುಕಿನ ಹಕ್ಕಿಗಾಗಿ ನಡೆಸುವ ಚಟುವಟಿಕಗಳ ಮೂಲಕ ಯುವ ಸಮೂಹವನ್ನು ಹೆಚ್ಚು ಹೆಚ್ಚು ಸಂಘಟನೆಯಲ್ಲಿ ಒಳಗೊಳ್ಳುವುದು.

ಸಮ್ಮೇಳನದಲ್ಲಿ ಮುಂದಿನ ಮೂರು ವರ್ಷ ಅವಧಿಗೆ 101 ಜನರ ಕೇಂದ್ರ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯಿತು. 30 ಜನರ ಪದಾಧಿಕಾರಿಗಳ ಆಯ್ಕೆಯೂ ನಡೆದು ಪ್ರೊ.ಮಾಲಿನಿ ಭಟ್ಟಚಾರ್ಯ ಅಧ್ಯಕ್ಷರಾಗಿ ಮರಿಯಂ ಧವಳೆ ಪ್ರಧಾನ ಕಾರ್ಯದರ್ಶಿಯಾಗಿ,ಎಸ್.ಪುಣ್ಯವತಿ ಖಜಾಂಚಿಯಾಗಿ ಆಯ್ಕೆಗೊಂಡರು. ಕರ್ನಾಟಕದಿಂದ ಕೆ.ಎಸ್.ಲಕ್ಷ್ಮಿ, ಗೌರಮ್ಮ ಹಾಗೂ ದೇವಿಯವರುಗಳನ್ನು ಕೇಂದ್ರ ಕಾರ್ಯಕಾರೀ ಸಮಿತಿಯ ಸದಸ್ಯರನ್ನಾಗಿ ಆಯ್ಕೆ ಮಾಡಲಾಯಿತು.

ಬಹಿರಂಗ ಸಭೆಯ ವೇದಿಕೆಯನ್ನು ನಮ್ಮ ನಾಡಿನ ಗೌರಿ ಲಂಕೇಶ್ ಹೆಸರಿನಲ್ಲಿಯೂ ಸಮ್ಮೇಳನ ಸಭಾಂಗಣವನ್ನು ಸಂಘಟನೆಯ ನೇತಾರರಾದ ಮಂಗಳೇಶ್ವರಿ ದೇಬ್ ಬರ್ಮಾ ಹೆಸರಿನಲ್ಲಿಯೂ, ಸಮ್ಮೇಳನದ ಆವರಣವನ್ನು ಅಹಿಲ್ಯಾ ರಂಗ್ನೇಕರ್ ನಗರದ ಹೆಸರಿನಲ್ಲಿಯೂ ಸಜ್ಜುಗೊಳಿಸಲಾಗಿತ್ತು.

ದಣಿವರಿಯದ ಹಲವು ಹೋರಾಟಗಾರರ ನೆನಪಿನ, ಅನುಭವದ, ಸಮರಶೀಲ ಉತ್ಸಾಹದ ನಡುವೆ ಜನವಾದಿಯನ್ನು ಇನ್ನಷ್ಟು ಎತ್ತರಕ್ಕೆ ಬೆಳೆಸುವ ಘೋಷಣೆಯೊಂದಿಗೆ ಸಮ್ಮೇಳನಕ್ಕೆ ತೆರೆ ಎಳೆಯಲಾಯಿತು. ●

ಸಂವಿಧಾನ ಮರು ಬರವಣಿಗೆಗೆ ಕಸರತ್ತು ಅಲ್ಲ.. ಭುಗಿಲೆದ್ದ ನಾಗರಿಕ ಚಳುವಳಿಗಳು..

ಚಿಲಿಯಲ್ಲಿ ರಾಜಕೀಯ ಕ್ರಾಂತಿಯ ಸೋಪಾನ.....

ಚಿಲಿಯಲ್ಲಿ ಕಳೆದ ಅಕ್ಟೋಬರ್ ನಲ್ಲಿ ಭುಗಿಲೆದ್ದ ಜನಪ್ರಿಯ ಪ್ರತಿಭಟನೆಗಳನ್ನು, ಹಿಂದಿನ ಅಧ್ಯಕ್ಷ ಅಗಸ್ಟೊ ಪಿನೋಶೆ ಅವರ ಸರ್ವಾಧಿಕಾರ ಆಡಳಿತ ಅಂತ್ಯದ ನಂತರ, ನಡೆಯುತ್ತಿರುವ ಸಾಮಾಜಿಕ ಹೋರಾಟದ ಅತಿದೊಡ್ಡ ಅಲೆಯೆಂದು ಬಣ್ಣಿಸಲಾಗಿದೆ.

ಎಡ ರಾಜಕೀಯ ವಲಯಗಳು ಹಾಗೂ ಪ್ರಮುಖವಾಗಿ ಚಿಲಿ ಕಮ್ಯೂನಿಸ್ಟ್ ಪಕ್ಷ (ಪಿಸಿಸಿ) ಇದೊಂದು "ಚಿಲಿಯ ರಾಜಕೀಯ ಕ್ರಾಂತಿ" ಗೆ ಸೋಪಾನವಾಗಿದೆ ಎಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದೆ. ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯ ವಿರುದ್ದ ಜನಸ್ತೋಮ ಬಾರಿ ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆಗೆ ಧುಮುಕಿದೆ. ಜನರನ್ನು ಪ್ರತಿಭಟನೆಗೆ ಅಣಿ ನೆರಸುವಲ್ಲಿ ಕಮ್ಯೂನಿಸ್ಟ್ ಪಕ್ಷದ ಪಾತ್ರ ಗಮನಾರ್ಹವಾಗಿದೆ.

ಪ್ರಸ್ತುತ ಅಧ್ಯಕ್ಷರಾದ ಸೆಬಾಸ್ಟಿಯನ್ ಪೆನೆರಾ ಆಡಳಿತದಲ್ಲಿ, ಸ್ಯಾಂಟಿಯಾಗೊ ಮೆಟ್ರೊ ದರದಲ್ಲಿ 30 ಪೆಸೊ ಹೆಚ್ಚಳದ ವಿರುದ್ದ, ಮೊದಲು ಸಾಂಕೇತಿಕವಾಗಿ ಆರಂಭಗೊಂಡ ಈ ಪ್ರತಿಭಟನೆಗಳನ್ನು ಪೆನೆರಾ ಆಡಳಿತ ತೀವ್ರವಾಗಿ ಸದೆ ಬಡಿಯಿತು. ಆ ನಂತರ ಪ್ರತಿಭಟನೆಗಳು ಆಕ್ರೋಶ ಭರಿತವಾದವು. ಇಡೀ ಅಕ್ಟೋಬರ್ ತಿಂಗಳಲ್ಲಿ ಮತ್ತಷ್ಟು ಪ್ರಚೋದನಕಾರಿ ಚಳುವಳಿಯಾಗಿ ಪರಿವರ್ತನೆ ಗೊಂಡವು. ಪ್ರತಿಭಟನೆಗಳ ಹಿಂದೆ ಲಕ್ಷಾಂತರ ಚಿಲಿಯನ್ ಜನತೆ ಬಲಿಷ್ಟವಾಗಿ ಸಂಘಟಿತರಾಗಿ ಕ್ರೋಕೃತರಾದರು.

ಮೂರು ದಶಕಗಳ ಹಿಂದೆ, ಅಗಸ್ಟೊ ಪಿನೋಚೆಟ್ ಆರಂಭಿಸಿದ ಕಟುವಾದ ನವ–ಉದಾರವಾದಿ ಆರ್ಥಿಕ ನೀತಿಗಳ ವಿರುದ್ದ ತಿರುಗಿ ಬಿದ್ದ ಪ್ರತಿಭಟನೆಗಳು ತೀವ್ರ ಸ್ವರೂಪದಲ್ಲಿ ಭುಗಿಲೆದ್ದು, ಇಡೀ ಚಿಲಿ ದೇಶಕ್ಕೆ ವಿಸ್ತಾರಗೊಂಡಿತು. ಈ ಮೂಲಕ ಒಂದು ಘೋಷಣೆಯು ಹೊರಹೊಮ್ಮಲ್ಪಟ್ಟಿತು. ಆದೇನೆಂದರೆ, ಈ ಪ್ರತಿಭಟನೆಗಳು "ಕೇವಲ 30 ಪೆಸೊ ಹೆಚ್ಚಳ ವಿಷಯವಲ್ಲ, ಇದು 30 ವರ್ಷಗಳ ನೀತಿಗಳ ವಿಷಯ" ಎಂಬ ಘೋಷಣೆ ಕೊಟ್ಟವು. ಅಂದರೆ, ಸರ್ವಾಧಿಕಾರಿ ಅಗಸ್ಟೊ ಪಿನೋಚೆಟ್ ನ ಆಡಳಿತದ ಅಂತ್ಯದೊಂದಿಗೆ ಆರಂಭಗೊಂಡು, ಇದೀಗ ಸೆಬಾಸ್ಟಿಯನ್ ಪೆನೆರಾ ರವರ ರಾಜೀನಾಮೆಯನ್ನು ಒತ್ತಾಯಿಸುವ ವರೆಗೂ, ಪ್ರತಿಭಟನೆಗಳು ವಿಸ್ತತಗೊಂಡು ಮುಗಿಲು ಮುಟ್ಟಿವೆ. ಮಾತ್ರವಲ್ಲದೇ ಚಿಲಿಯನ್ನು ರಾಜಕೀಯ ಕ್ರಾಂತಿಯ ಅಗತ್ಯತೆ ಕಡೆಗೆ ಕೊಂಡೊಯ್ಯುತ್ತಿದೆ ಎಂದು ವಿಶ್ಲೇಷಣೆ ಮಾಡಲಾಗಿದೆ.

ಪಿನೋಶೆ ಆಡಳಿತ ಅಂತ್ಯ ಗೊಂಡು ಮೂರು ದಶಕಗಳೇ ಕಳೆದಿವೆ. ಆದಾಗ್ಯೂ, ಪ್ರಸ್ತುತ ಪ್ರತಿಭಟನೆಗಳು, ಯುವ ಜನರ ನಿರುದ್ಯೋಗ ಮತ್ತು ಆರ್ಥಿಕ ಸಮಸ್ಯೆಗಳನ್ನು ಮತ್ತು ಪಿಂಚಣಿ ವ್ಯವಸ್ಥೆಯ ವಿನಾಶವನ್ನು ಎತ್ತಿ ತೋರಿಸಿದೆ. ಪಿನೆರಾ ಆಡಳಿತದ ಪ್ರಜಾಪ್ರಭುತ್ವ ವ್ಯವಸ್ಥೆಯ ಕೊರತೆಯನ್ನು ಕೂಡಾ ಪ್ರತಿಭಟನೆಗಳು ಎತ್ತಿ ಹಿಡಿದಿವೆ. ಪ್ರಭುತ್ವವು ಪ್ರತಿಭಟನಾಕಾರರ ವಿರುದ್ಧ ಭಯಾನಕವಾಗಿ ದಬ್ಬಾಳಿಕೆಯನ್ನು ನಡೆಸಿದೆ. ಇದರಲ್ಲಿ ಸಾವಿರಾರು ಬಂಧನಗಳು ಮತ್ತು ಕನಿಷ್ಟ 26 ಪ್ರತಿಭಟನಾಕಾರರು ಕೊಲ್ಲಲ್ಪಟ್ಟಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ, ಚಿಲಿಯ ನಾಗರಿಕರನ್ನು ನೆಲಮಟ್ಟದಲ್ಲಿ ಸಂಘಟಿಸಲಾಗಿದೆ. ಪ್ರತಿಭಟನೆಕಾರರು ಪ್ರಭಾವ ಶಾಲಿ ಮೆರವಣಿಗೆಗಳನ್ನು ನಡೆಸಿದ್ದಾರೆ. ಇದರಲ್ಲಿ ಒಂದು ದಶಲಕ್ಷಕ್ಕೂ ಹೆಚ್ಚು ಚಿಲಿಯನ್ನರು ಪಾಲ್ಗೊಂಡಿದ್ದಾರೆ.

ಹೋರಾಟಕ್ಕೆ ಬೆಲೆ ಸಿಕ್ಕೇ ಸಿಗುತ್ತದೆ ಎಂಬ ನಂಬಿಕೆಗೆ ತಾತ್ಕಾಲಿಕ ಪರಿಹಾರ ಸಿಕ್ಕಿದೆ ಎನ್ನಬಹುದು. ಬೀಸೋ ದೊಣ್ಣೆ ತಪ್ಪಿಸಿಕೊಂಡರೆ, ನೂರು ವರ್ಷ ಆಯಸ್ಸು ಎಂಬಂತೆ, ಪೆನೆರಾ ಆಡಳಿತ ಪರಿಸ್ಥಿತಿಯು ಉಗ್ರ ಸ್ವರೂಪ ತಾಳುತ್ತಿರುವುದನ್ನು ಮನಗಂಡು, ರಿಯಾಯಿತಿ ನೀಡಲು ಮುಂದಾಯಿತು.

ಇದರ ಭಾಗವಾಗಿ, ಕಳೆದ ನವೆಂಬರ್ 15 ರಂದು, ಪಿನೋಶೆ ಸಂವಿಧಾನವನ್ನು ಪುನಃ ಬರೆಯುವುದಾಗಿ, ಪೆನೆರಾ ಸರ್ಕಾರ ಭರವಸೆ ನೀಡಿತು. ಇದು ಸರ್ವಾಧಿಕಾರದ ಪರಂಪರೆಗೆ ಒಂದು ದೃಡವಾದ ವಿರಾಮವನ್ನು ನೀಡಬಹುದಾಗಿದೆ ಎಂಬ ಅಭಿಪ್ರಾಯವು ಕೆಲವು ರಾಜಕೀಯ ವಲಯಗಳಿಂದ ಕೇಳಿ ಬಂದಿದೆ. ಅದರಲ್ಲೂ, ಕಾಂಗ್ರೆಸ್ ನ ಹೆಚ್ಚಿನ



ಪಕ್ಷಗಳು ಹೊಸ ಸಂವಿಧಾನದ ಪರಿಕಲ್ಪನೆಯನ್ನು ಜನಾಭಿಪ್ರಾಯದ ಮೂಲಕ ಅಂಗೀಕರಿಸಬೇಕು ಎನ್ನುತ್ತಿವೆ.

ಆದರೆ, ಎಡಪಂಥೀಯರು, ಪ್ರಮುಖವಾಗಿ ಕಮ್ಯೂನಿಸ್ಟ್ ಪಕ್ಷ ಪ್ರತಿಭಟನಾ ಚಳುವಳಿಯಲ್ಲಿ ಭಾಗವಹಿಸದ ಕೆಲವು "ಗಣ್ಯರನ್ನು ಓಲೈಸಲು" ಈ ಯೋಜನೆಯನ್ನು ಕೈಗೊಳ್ಳಲಾಗಿದೆ ಎಂದು ತೀವ್ರ ವಾಗಿ ಟೀಕಿಸಿದೆ. ಪ್ರತಿಭಟನಾಕಾರರನ್ನು ಸಂಪರ್ಕಿಸದೆ, ಅಥವಾ ಅವರ ಬೇಡಿಕೆಗಳನ್ನು ಆಲಿಸದೆ, ಸಂವಿಧಾನವನ್ನು ಪುನಃ ಬರೆಯುವುದರಿಂದ ಏನು ಸಾಧನೆಗೈಯಲ್ಲು ಸಾಧ್ಯವಿಲ್ಲವೆಂದು ಪಿಸಿಸಿಯ ಸಂಸತ್ ಸದಸ್ಯ ಹಾಗೂ ಒಬ್ಬ ಪ್ರಭಾವಿ ವಕೀಲರು ಹಾಗೂ ಚಿಲಿಯ ಪ್ರಬುದ್ದ ರಾಜಕೀಯ ವಿಮರ್ಶಕರು ಆದ ಹ್ಯೂಗೋ ಗುಟೈರೆಜ್ ಅವರು, ಸಂದರ್ಶನವೊಂದರಲಿ ಹೇಳಿಕೆ ನೀಡಿದ್ದಾರೆ. ಪ್ರತಿಭಟನಾ ಆಂದೋಲನದ ಮೂಲ ಉದ್ದೇಶಗಳಾದ ನವ–ಉದಾರವಾದಿ ಆರ್ಥಿಕ ನೀತಿಗಳು ಮತ್ತು ಅದರ ದುಷ್ಪರಿಣಾಮಗಳು, ಸಾಂವಿಧಾನಿಕ ಸುಧಾರಣಾ ಯೋಜನೆ ಮತ್ತು ಮಾನವೀಯತೆಯ ವಿರುದ್ಧದ ಅಪರಾಧಗಳಿಗೆ, ಸೆಬಾಸ್ಟಿಯನ್ ಪೆನೆರಾ ರವರನ್ನು ವಿಚಾರಣೆಗೆ ಒಳಪಡಿಸುವ ಸಾಧ್ಯತೆಗಳ ಬಗ್ಗೆ ಹ್ಯೂಗೋ ಗುಟೈರೆಜ್ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಹ್ಯೂಗೋ ರವರ ಸಂದರ್ಶನದ ಪ್ರಮುಖ ಅಂಶಗಳನ್ನು ಇಲ್ಲಿ ನೀಡಲಾಗಿದೆ.

ಸಂವಿಧಾನದ ಮರುಬರವಣಿಗೆ ಒಪ್ಪಂದಕ್ಕೆ ವಿರೋಧ ಏಕೆ?

ಹೊಸ ಸಂವಿಧಾನದ ಮರು ಬರವಣಿಗೆ ಎಂದರೆ, ಒಂದು ಐತಿಹಾಸಿಕ ಪ್ರಕ್ರಿಯೆ. ಅದು ಪಿನೋಶೆ ಸಂವಿಧಾನವನ್ನು ತೊಡೆದು ಹಾಕುವ ಸಾಧ್ಯತೆಯನ್ನು ಒದಗಿಸಬೇಕು. ಆದರೆ, ಇದೊಂದು ರಾಜಕೀಯ ಗಣ್ಯರ ಮತ್ತು ಅವರವರ ನಡುವೆ ಆಗಿರುವ ಒಪ್ಪಂದವಾಗಿದೆ. ಕಳೆದ 30 ವರ್ಷಗಳಿಂದ ಈ ದೇಶವನ್ನು ಹೇಗೆ ನಡೆಸುತ್ತಿದ್ದಾರೆ ಎಂಬ ಕಾರಣದಿಂದಾಗಿ ನಾಗರಿಕರು ಈ ಗಣ್ಯರ ವಿರುದ್ದ ತಿರುಗಿ ಬಿದ್ದಿದ್ದಾರೆ. ಆದರೆ, ಈ ಯಾವ ಗಣ್ಯರು ಸಹಾ ಪ್ರತಿಭಟನೆಗಳಲ್ಲಿ ಪಾಲ್ಗೊಂಡಿಲ್ಲ. ಆದಾಗ್ಯೂ, ಇವರೇ ನವೆಂಬರ್ 15 ರಂದು ಬೆಳಿಗ್ಗೆ ಒಂದು ಕೋಣೆಯಲ್ಲಿ ಸೇರಿ, ಪರಿಸ್ಥಿತಿಯ ಗಾಂಭೀರ್ಯತೆಯನ್ನು ಅರಿತು, ಮುಂದೆ ಸಾಗುವ ಮಾರ್ಗವನ್ನು ಸರಿಪಡಿಸುವ ನೆಪದಲ್ಲಿ, ಹೊಸ ಸಂವಿಧಾನ ರಚನೆ ತಮ್ಮದೇ ನಿಯಂತ್ರಣದಲ್ಲಿ ಇರುವಂತ ಸಂವಿಧಾನವನ್ನೆ ಮರು ಬರೆಯಲು ನಿರ್ಣಯಿಸಿದ್ದಾರೆ. ಈ ಪ್ರಕ್ರಿಯೆಯಲ್ಲಿ ಕಡ್ಡಾಯ ಮತದಾನ ಒಳಗೊಂಡಿಲ್ಲ. 16 ಮತ್ತು 17 ವರ್ಷದವರಿಗೆ, ಇಲ್ಲಿ ಅವಕಾಶವನ್ನು ನೀಡಿಲ್ಲ. ಈ ವಯಸ್ಸಿನರೇ, ಹೆಚ್ಚಾಗಿ ಪ್ರತಿಭಟನೆಯಲ್ಲಿ ಭಾಗವಹಿಸಿ, ಕ್ರಾಂತಿಯ ಅಗತ್ಯತೆಗೆ ನಾಂದಿ ಹಾಡಿದವರು.

ಪ್ರತಿಭಟನೆಕಾರರ ಯಾವ ಬೇಡಿಕೆಗಳನ್ನು ಪರಿಗಣಿಸದೆ, ಸಂವಿಧಾನದ ಸುಧಾರಣಾ ಯೋಜನೆಯನ್ನು ತಾಂತ್ರಿಕ ಆಯೋಗವು ರೂಪಿಸಿದೆ. ಸಾವಿರಾರು ನೆರೆಹೊರೆಯ ಸಮಿತಿಗಳು ನಾಗರಿಕರ ಸಂಘಟನೆಗಳು ಕರಡು ಸಂವಿಧಾನಕ್ಕೆ ತಮ್ಮ ಪ್ರಸ್ತಾವಗಳನ್ನು ಕೊಟ್ಟು ಕೇಂದ್ರೀಯವಾಗಿ ಈ ಚಳುವಳಿ ಕ್ರೋಢಿಕರಿಸಿದ ಕರಡು ಸಂವಿಧಾನವನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಈ ಚಳುವಳಿಯ ನಾಯಕತ್ವ ವಹಿಸಿದ 'ಯುನಿಡಾಡ್ ಸೋಶಿಯಲ್' ಅಥವಾ 'ಬ್ಲಾಕ್ ಸಿಂಡಿಕಲ್' ಗಳ ಜತೆ ಮಾತುಕತೆ ಸಹ ಮಾಡಿಲ್ಲ. ಬರಿಯ ಒಪ್ಪಂದಕ್ಕೆ ಸಹಿ ಹಾಕಿದ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು ಮಾತ್ರ ಈ ಆಯೋಗ ಒಳಗೊಂಡಿದೆ. ಸಾಂವಿಧಾನಿಕ ಪಠ್ಯದ ಅನುಮೋದನೆಗೆ ಅಂತಿಮವಾಗಿ, ಮೂರನೇ ಎರಡರಷ್ಟು ಬೆಂಬಲ ಬೇಕಾಗುತ್ತದೆ. ಅಂದರೆ ಇದು ಅಂತಿಮವಾಗಿ ಈ ಸೀಮಿತ ಬದಲಾವಣೆಗಳನ್ನು ತಡೆ ಹಿಡಿಯಲು ಪಿನೊಶೆ ಬೆಂಬಲಿಗರಿಗೆ ವಿಟೋ ಕೊಟ್ಟಂತಾಗಿದೆ.

ಯಥಾಸ್ಥಿತಿಯನ್ನು ಸಂಪೂರ್ಣವಾಗಿ ಕಾಪಾಡಿಕೊಳ್ಳಲು ಒಂದು ಸಣ್ಣ ಪ್ಯಾರಾದಲ್ಲಿ ನೀಡಲಾಗಿದೆ. ಇದು ಗಣತಂತ್ರಕ್ಕೆ ಅಪಾಯದ ಮುನ್ಸೂಚನೆಯಾಗುತ್ತದೆ. ಯಥಾಸ್ಥಿತಿ ಅಂದರೆ, ಗಣರಾಜ್ಯದ ಪ್ರಸ್ತುತ ಸ್ವರೂಪ ಮತ್ತು ಅದರ ಪ್ರಜಾಪ್ರಭುತ್ವ ವ್ಯವಸ್ಥೆ, ಕೇಂದ್ರೀಕೃತ ರಾಷ್ಟ್ರೀಯತೆ ಮತ್ತು ಅಧ್ಯಕ್ಷೀಯ ಸರಕಾರ – ಇವೆಲ್ಲಾ, ಹೊಸ ಸಂವಿಧಾನವನ್ನು ನಾಗರೀಕರು ಜನಮತಸಂಗ್ರಹದಲ್ಲಿ ಅನುಮೋದಿಸದಿದ್ದರೆ, ಪಿನೋಶೆ ಅವರ ಸಂವಿಧಾನವೇ ಜಾರಿಯಲ್ಲಿರುತ್ತದೆ. ಈ ರೀತಿ ಸಂವಿಧಾನದ ಮರುಬರವಣೆಗೆಯ ಕಸರತ್ತು ನಡೆಸಿ, ಮತ್ತೆ ಪಿನೋಶೆ ಸಂವಿಧಾನವನ್ನೇ ಮುಂದುವರಿಸಲು ಪ್ರಯತ್ನ ಮಾಡಲಾಗುತ್ತಿದೆ. ಾಗರಿಕರ ಸ್ವಾತಂತ್ರ್ಯ ವನ್ನು ಸ್ಥಾಪಿತ ಅಧಿಕಾರಿಶಾಹಿಗಳು ಕತ್ತು ಹಿಸುಕಿ ಕೊಂದಂತೆ.

ದೋಷಾರೋಪಣೆ ಯಾಕೆ ವಿಫಲವಾಯಿತು?

ಅಧ್ಯಕ್ಷರ ಪೆನೆರಾ ವಿರುದ್ಧ ತರಲಾದ ದೋಷಾರೋಪಣೆ (ಇಂಪೀಚ್‌ಮೆಂಟ್) ಪ್ರಕ್ರಿಯೆ ವಿಫಲವಾಯಿತು. ಎಡ–ನಡುಪಂಥೀಯ ಸದಸ್ಯರು ಬಲಪಂಥೀಯ ಸದಸ್ಯರೊಂದಿಗೆ ದೋಷಾರೋಪಣೆ ವಿರುದ್ಧ ಮತ ಚಲಾಯಿಸಿದರು ಎಂಬುದು ತೀರಾ ಆಶ್ಚರ್ಯಕರವೇನಲ್ಲ. ಈ ಸದಸ್ಯರು ದೋಷಾರೋಪಣೆ 'ಕ್ಷಿಪ್ರಕ್ರಾಂತಿ' ಮತ್ತು 'ಪ್ರಜಾಪ್ರಭುತ್ವ–ವಿರೋಧಿ' 'ರಾಜಕೀಯ ತೀರ್ಪು' ಎಂದು ಹೇಳಿದ್ದು ಚೋದ್ಯದ ವಿಷಯವಾಗಿತ್ತು. ಸಂವಿಧಾದ ಅತ್ಯಂತ ಉನ್ನತ ಹುದ್ದೆಗಳಲ್ಲಿರುವವರು ತಮ್ಮ ಜವಾಬ್ದಾರಿಗಳಿಗೆ ದಾಯಿತ್ವ ನಿಭಾಯಿಸದಿದ್ದಾಗ ಅವರನ್ನು ದಾರಿಗೆ ತರಲು 'ದೋಷಾರೋಪಣೆ' ಒಂದು ಪ್ರಜಾಪ್ರಭುತ್ವದ ಮತ್ತು ಸಾಂವಿಧಾನಿಕ ಪ್ರಕ್ರಿಯೆ. ಹೆಚ್ಚಿನ ಸಾಂವಿಧಾನಿಕ ಪ್ರಹಜಾಪ್ರಭುತ್ವ ಇರುವ ದೇಶಗಳಲ್ಲಿ ಈ ಪ್ರಕ್ರಿಯೆಯಿದೆ. ಅದು 'ಪ್ರಜಾಪ್ರಭುತ್ವ–ವಿರೋಧಿ' ಹೇಗಾಗುತ್ತದೆ? ಸಂಸತ್ತು ಒಂದು ರಾಜಕೀಯ ಸಂಸ್ಥೆ. ಅದರ ನಿರ್ಣಯ ರಾಜಕೀಯ ತೀರ್ಪೇ. ಅಧ್ಯಕ್ಷರು ತಮ್ಮ ಜವಾಬ್ದಾರಿಗಳಿಗೆ ದಾಯಿತ್ವವನ್ನು ನಿಭಾಯಿಸಿದ್ದಾರಾ ಇಲ್ಲವಾ ಎಂಬುದಷ್ಟೇ ಪ್ರಶ್ನೆ. ಆಳುವ ವರ್ಗಗಳನ್ನು ಪ್ರತಿನಿಧಿಸುವ ಬಲಪಂಥೀಯ ಮತ್ತು ನಡುಪಂಥೀಯ ಸದಸ್ಯರು, ಪಿನೆರಾ ಆಳುವ ವರ್ಗಗಳ ನಿಯಂತ್ರಣ ತಪ್ಪಿ ರಾಜಕೀಯ ಅಧಿಕಾರ ಸಾಮಾನ್ಯ ಜನತೆಯ ಕೈಗೆ ಹೋಗುತ್ತದೆ ಎಂದು ಭಯಭೀತರಾಗಿದ್ದಾರೆ ಎಂಬುದು ಸ್ಪಷ್ಟ. ಎಡ ಮತ್ತು ಎಡ–ನಡುಪಂಥೀಯ ಸದಸ್ಯರಿಗೆ ರಾಜಕೀಯ ವ್ಯವಸ್ಥೆ ಬುಡಮೇಲಾಗುವ, ಆರ್ಥಿಕ ಬಿಕ್ಕಟ್ಟು ತೀವ್ರವಾಗುವ ಮತ್ತು ಮಿಲಿಟರಿ ಪಾತ್ರದ ಬಗ್ಗೆ ಆತಂಕಗೊಂಡಿದ್ದಾರೆ. ಇದು ವ್ಯವಸ್ಥೆಯೊಂದಿಗೆ ಅಡ್ಜಸ್ಟ್ ಮಾಡಿಕೊಳ್ಳುವ ಮತ್ತು ಹೇಡಿತನದ ಸಮ್ಮಿಶ್ರ ಪರಿಣಾಮ.

ಪಿನೆರಾ ರವರ ಮಾನವೀತೆಯ ವಿರುದ್ದದ ಅಪರಾಧಗಳ ನ್ಯಾಯಲಯದ ತನಿಖೆ ಕಾರ್ಯಸಾಧ್ಯವೇ?

ಪಿನೆರಾ ರವರ ಮಾನವೀತೆಯ ವಿರುದ್ದದ ಅಪರಾಧಗಳು ನ್ಯಾಯಲಯದ ತನಿಖೆಯಲ್ಲಿವೆ. ನ್ಯಾಯಾಲಯವು ದೂರುಗಳನ್ನು ಪರಿಶೀಲಿಸಲು ಒಪ್ಪಿಕೊಂಡಿದೆ. ಆದರೆ, ಅಧ್ಯಕ್ಷರ ಸ್ವಂತ ಅಧೀನ ಅಧಿಕಾರಿಗಳಿಂದ ಮತ್ತು ಬಲಿಪಶುಗಳಿಂದ ಸಾಕ್ಷ್ಯಗಳು ಇಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತವೆ. ಈ ವಿಚಾರದಲ್ಲಿ ನ್ಯಾಯಾಲಯದ ಕಾರ್ಯ ನಿರ್ವಹಣೆಯನ್ನು ಕಾದು ನೋಡಬೇಕಾಗುತ್ತದೆ. ಆದರೆ, ಫಲಿತಾಂಶ ಏನೇ ಬಂದರು ಸಹಾ, ಪಿನೆರಾ ಅವರನ್ನು ಮಾನವ ಹಕ್ಕುಗಳ ಉಲ್ಲಂಘನೆ ಗಾಗಿ ವಿಚಾರಣೆಗೆ ಒಳಪಡಿಸಲಾಗಿತ್ತು ಎಂದು ಇತಿಹಾಸದ ಪುಟಗಳು ನೆನಪಿಸುತ್ತವೆ ಎಂಬುದು ಸತ್ಯ. ಮಾನವ ಹಕ್ಕುಗಳನ್ನು ಉಲ್ಲಂಘನೆ ಮಾಡಿದವರನ್ನು ಇತಿಹಾಸ ಎಂದೂ ದಯೆಯಿಂದ ಕಾಣುವುದಿಲ್ಲ ಎಂಬ ಭಾವನೆ ನನ್ನದು.

ಚಿಲಿ ಮತ್ತು ಹಲವು ಲ್ಯಾಟಿನ್ ಅಮೆರಿಕದ ದೇಶಗಳ ಮೇಲೆ ಸರ್ವಾಧಿಕಾರ ಹೇರುವಲ್ಲಿ ಯು.ಎಸ್ ಪಾತ್ರವೇನು?

ಎಡಶಕ್ತಿಗಳ ಹಿನ್ನಡೆ ನಿವಾರಿಸುವುದು ಹೇಗೆ?

ಚಿಲಿ, ಈಕ್ವೆಡಾರ್ ಮತ್ತು ಬೊಲಿವಿಯಾ ಗಳಲ್ಲಿ ನಿರ್ದಿಷ್ಟವಾಗಿ ಮತ್ತು ಲ್ಯಾಟಿನ್ ಅಮೆರಿಕದಲ್ಲಿ ಸಾಮಾನ್ಯವಾಗಿ ಸಾಂಸ್ಥಿಕ ಸರ್ವಾಧಿಕಾರವನ್ನು ಹೇರುವ ಯೋಜನೆಯನ್ನು ಯುಎಸ್ ವಿನ್ಯಾಸ ಗೊಳಿಸಿದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ನಾವು ಅವರ ಹಿತ್ತಲಿನಲ್ಲಿ ಇದ್ದೇವೆ. ಸಿದ್ಧಾಂತ ಮತ್ತು ಸಾಂಪ್ರದಾಯಿಕ ಧಾರ್ಮಿಕತೆಯ ಮಿಶ್ರಣ ಮಾಡಿ ಧಾರ್ಮಿಕ ಜನ ರಾಜಕೀಯ ನಿಯಂತ್ರಣ ವಾಪಸು ಪಡೆದುಕೊಳ್ಳುವ ಕಾರ್ಯವ್ಯೂಹವನ್ನು ಪೆಂಟಗಾನ್/ಸಿಐಎ ಹೊಂಚಿದಂತೆ ಕಾಣುತ್ತದೆ. ಮಾಧ್ಯಮ ತಿರುಚುವಿಕೆ ಮತ್ತು ರಾಜಕೀಯ ಆಶ್ರಯಗಳನ್ನು ಬಳಸಿ ಸ್ಥಾಪಿಸಲಾಗುತ್ತಿರುವ ಧಾರ್ಮಿಕ ಜನಮರುಳು ರಾಜಕೀಯ ವರ್ಗ ಮತ್ತು ಮಿಲಿಟರಿಯನ್ನು ಆವರಿಸಿಕೊಳ್ಳುತ್ತಿದೆ. ಇದೊಂದು ಹೊಸ ರೀತಿಯ ಸರ್ವಾಧಿಕಾರ. ಇದರ ವಿರುದ್ಧ ಪ್ರತಿರೋಧ ಒಡ್ಡಲು ಜನಸಮೂಹಗಳಿಗೆ ರಾಜಕೀಯ ಪ್ರಜ್ಞೆ ಎತ್ತರಿಸುವ ರಾಜಕೀಯ ಶಿಕ್ಷಣ ಮತ್ತು ರಾಜಕೀಯವಾಗಿ ಅಣಿನೆರೆಸುವ ಸಂಘಟನಾ ಕೆಲಸದ ಮೂಲಭೂತ ಉಪಕರಣಗಳನ್ನು ಚುರುಕುಗೊಳಿಸಬೇಕಾಗಿದೆ. ಇನ್ನೊಂದು ಕಡೆ ಎಡಪಂಥೀಯ ಚಳುವಳಿ/ಪಕ್ಷಗಳಲ್ಲಿ ನಾಯಕತ್ವದ ತೀವ್ರ ನಿರ್ವಾತವೂ ಇದೆ. ಬೊಲಿವಿಯ ಮತ್ತು ಇಕ್ವಾಡೋರ್ ಗಳಲ್ಲಿ ಸಾಮಯಿಕವಾಗಿ ಹೊಸ ನಾಯಕತ್ವ ತರದ್ದು (ಬೊಲಿವಿಯದಲ್ಲಿ) ಅಥವಾ ತಪ್ಪು ನಾಯಕತ್ವ (ಇಕ್ವಾಡೋರ್ ನಲ್ಲಿ) ತಂದಿದ್ದರಿಂದ ತಾತ್ಕಾಲಿಕವಾದರೂ ಗಂಭೀರ ಹಿನ್ನಡೆಗಳಾಗಿವೆ. ಇದನ್ನು ಜನತೆಯ ಮೇಲೆ ಅವಲಂಬಿಸುವ ಚಳುವಳಿಗಳನ್ನು ಗಟ್ಟಿಯಾಗಿ ಕಟ್ಟುವುದರಿಮದ ಮಾತ್ರ ಹೋಗಲಾಡಿಸಲು ಸಾಧ್ಯ. ಆಗ, ಮಾತ್ರ ಯುಎಸ್ ಅನ್ನು ರಾಜಕೀಯವಾಗಿ ಈ ಖಂಡದಲ್ಲಿ ಎದುರಿಸಬಹುದು. ●

ಜಗದ ಸುತ್ತ


ನಾಗರಾಜ ನಂಜುಂಡಯ್ಯ

JANASHAKTHI KANNADA VARA PATRIKE JANUARY 6-12, 2020 Price: Rs. 10/- Date of Publication: 3 JANUARY 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಸಫ್ದರ್ ಕುರಿತ 'ಹಲ್ಲಾ ಬೋಲ್' ಪುಸ್ತಕ ಬಿಡುಗಡೆ

'ದಮನ, ಶೋಷಣೆ, ಅನ್ಯಾಯಗಳ ಭೀಕರ ಚಳಿಗಾಲ ಬಂದಿದೆ': ಜವೇದ್





ವಸಂತರಾಜ .ಎನ್.ಕೆ

ಹೀಗೆಂದವರು ಉರ್ದು ಕವಿ, ಲೇಖಕ ಮತ್ತು ಹಿಂದಿ ಸಿನೆಮಾದ ಹಲವು ಜನಪ್ರಿಯ ಗೀತೆಗಳ ಕರ್ತೃ ಜವೇದ್ ಅಖ್ತರ್. 119 ವರ್ಷಗಳಲ್ಲೇ ದೆಹಲಿ ಕಂಡಿರುವ ಅತಿ ಭೀಕರ ಚಳಿಗಾಲವನ್ನೇ ಅವರು ರೂಪಕವಾಗಿಸಿ ಇಂದಿನ ದೇಶದ ಪರಿಸ್ಥಿತಿಯ ವಿಮರ್ಶೆ ಮಾಡಿದರು. 'ಋತುಗಳು ಬದಲಾಗುತ್ತವೆ, ಚಳಿಗಾಲದ ಚಳಿಯ ಮಟ್ಟವೂ ಬದಲಾಗುತ್ತದೆ. ಕೆಲವು ಬಾರಿ ಹೆಚ್ಚು. ಕೆಲವು ಬಾರಿ ಕಡಿಮೆ. ಅದೇ ರೀತಿ ಬಡವರು ಅನುಭವಿಸುವ ದಮನ, ಶೋಷಣೆ ಮತ್ತು ಅನ್ಯಾಯಗಳ ಚಳಿ ಯಾವಾಗಲೂ ಇತ್ತು. ಆದರೆ ಈ ವರ್ಷ ಇವು ಈ ವರ್ಷದ ಅತಿ ಭೀಕರ ಚಳಿಯಂತೆ ಅತಿ ಭೀಕರವಾಗಿವೆ' ಎಂದು ಮಾರ್ಮಿಕವಾಗಿ ನುಡಿದರು.


ಅವರು ಇದೇ ಜನವರಿ 1 ರಂದು ಜಂಡಾಪುರದಲ್ಲಿ ಖ್ಯಾತ ಕ್ರಾಂತಿಕಾರಿ ಕಲಾವಿದ ಸಫ್ದರ್ ಹಶ್ಮಿ ಅವರ ಹುತಾತ್ಮ ದಿನದ 35ನೇ ವಾರ್ಷಿಕ ಸಮಾರಂಭದಲ್ಲಿ ಮಾತನಾಡುತ್ತಿದ್ದರು. 1989 ಜನವರಿ 1 ರಂದು ದೆಹಲಿಯ ಹೊರ ಪ್ರದೇಶದಲ್ಲಿರುವ ಸಾಹಿಬಾಬಾದ್ ಕೈಗಾರಿಕಾ ಪ್ರದೇಶದಲ್ಲಿರುವ ಜಂಡಾಪುರದಲ್ಲಿ ಕಾಂಗ್ರೆಸ್ ಗೂಂಡಾಗಳು ಸಫ್ದರ್ ಅವರನ್ನು ಮತ್ತು ಒಬ್ಬ ಸಿಐಟಿಯು ಕಾರ್ಯಕರ್ತರನ್ನು 'ಹಲ್ಲಾ ಬೋಲ್' ಎಂಬ ಬೀದಿ ನಾಟಕ ಪ್ರದರ್ಶನ ಮಾಡುತ್ತಿದ್ದಾಗ ಮರಣಾಂತಿಕ ದಾಳಿ ನಡೆಸಿ ಕೊಲೆ ಮಾಡಿದ್ದರು. ಮರು ದಿನ 15 ಸಾವಿರ ಜನ ಈ ದಾಳಿಯ ವಿರುದ್ಧ ಪ್ರತಿಭಟನೆ ನಡೆಸಿದ್ದರು. ಅದೇ ಜನವರಿ 4 ರಂದು ಜನಮ್ ಕಲಾವಿದರು ಜಂಡಾಪುರದ ಅದೇ ಜಾಗದಲ್ಲಿ ಕೊಲೆಯಿಂದ ನಿಲ್ಲಿಸಲಾಗಿದ್ದ 'ಹಲ್ಲಾ ಬೋಲ್' ನಾಟಕವನ್ನು ಮತ್ತೆ ಆಡಿದ್ದರು. ದೆಹಲಿ ಪ್ರದೇಶದ 13 ಲಕ್ಷ ಕಾರ್ಮಿಕರ ಮುಷ್ಕರ 1998ರಲ್ಲಿ ನಡೆದಿದ್ದು, ಸ್ಥಳೀಯ ಸಂಸ್ಥೆಗಳ ಚುನಾವಣೆ ಹತ್ತಿರವಿರುವುದು, ಸಿಪಿಐ(ಎಂ) ಈ ಕಾರ್ಮಿಕ ಪ್ರದೇಶದಿಂದ ಸ್ಪರ್ಧೆ ಒಡ್ಡುವುದು ಈ ದಾಳಿಯ ಹಿನ್ನೆಲೆಯಾಗಿತ್ತು.

ಎನ್.ಪಿ.ಆರ್-ಎನ್.ಆರ್.ಸಿ ಹುನ್ನಾರ ಎಲ್ಲಾ ಬಡವರ ವಿರುದ್ಧ

ಆ ಹುತಾತ್ಮ ದಿನದ 35ನೇ ವಾರ್ಷಿಕ ಆಚರಣೆಯ ಸಮಾರಂಭದಲ್ಲಿ ಮೊದಲು ಸಫ್ದರ್ ಹಶ್ಮಿಯವರ ಸಾವು ಮತ್ತು ಮರಣದ ಬಗ್ಗೆ ಹಿಂದಿ ಮತ್ತು ಇಂಗ್ಲೀಷಿನಲ್ಲಿ ಏಕಕಾಲಕ್ಕೆ ಪ್ರಕಟವಾದ 'ಹಲ್ಲಾ ಬೋಲ್' ಪುಸ್ತಕವನ್ನು ಖ್ಯಾತ ಚಿತ್ರತಾರೆ ಶಬಾನಾ ಅಜ್ಮಿ ಬಿಡುಗಡೆ ಮಾಡಿದರು. **ಪುಟ 12 ಕ್ಕೆ**









ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ (All India Agricultural Workers Union) ಸಂಯೋಜಿತ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಷ್ಟ್ರ ಸಮ್ಮೇಳನ ಕೇರಳ ರಾಜ್ಯದ ಕಣ್ಣೂರು ನಲ್ಲಿ ಡಿಸೆಂಬರ್ 31,2019 ರಿಂದ ಜನವರಿ 3, 2020 ರ ವರೆಗೆ ನಡೆಯಿತು. ಸಮ್ಮೇಳನದಲ್ಲಿ ಅಖಿಲ ಭಾರತ ಅಧ್ಯಕ್ಷರಾಗಿ ಕಾಂ.ಎ.ವಿಜಯ್ ರಾಘವನ್. ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಯಾಗಿ ಕಾಂ.ಬಿ. ವೆಂಕಟ್ ಸರ್ವಾನುಮತದಿಂದ ಆಯ್ಕೆಯಾದರು.





ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ (All India Agricultural Workers Union) ಸಂಯೋಜಿತ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಷ್ಟ್ರ ಸಮ್ಮೇಳನ ಕೇರಳ ರಾಜ್ಯದ ಕಣ್ಣೂರು ನಲ್ಲಿ ಡಿಸೆಂಬರ್ 31,2019 ರಿಂದ ಜನವರಿ 3,2020 ರ ವರೆಗೆ ನಡೆಯಿತು. ಸಮ್ಮೇಳನದಲ್ಲಿ ಅಖಿಲ ಭಾರತ ಸಹ ಕಾರ್ಯದರ್ಶಿ ಯಾಗಿ ಕಾಂ. ನಿತ್ಯಾನಂದ ಸ್ವಾಮಿ, ಕೇಂದ್ರ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಕಾಂ. ಚಂದ್ರಪ್ಪ ಹೊಸ್ಕರಾ, ಕಾಂ.ಎಂ. ಪುಟ್ಟಮಾದು, ಜನರಲ್ ಕೌನ್ಸಿಲ್ ಸದಸ್ಯರ ರಾಗಿ ಕಾಂ.ವೆಂಕಟೇಶ ಕೋಣಿ, ಕಾಂ.ಗಂಗಾಧರ ಸ್ವಾಮಿ, ಕಾಂ. ಸರೋಜಮ್ಮ, ಕಾಂ. ಭೀಮಶೆಟ್ಟಿ ಯಂಪಳ್ಳಿ ಆಯ್ಕೆಯಾದರು.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**